ಗುರುವಾರ, ಏಪ್ರಿಲ್ 29, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 119 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾ ವಾಣಿ
ಲಾಕ್‌ಡೌನ್ ಸಮಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಸ್ಪರ್ಧಾರ್ಥಿಗಳು ತರಬೇತಿ ಕೇಂದ್ರಗಳಿಗೆ ಹೋಗಲು ಆಗುತ್ತಿಲ್ಲ ಎಂದು ಚಿಂತಿಸುವ ಬದಲು ಈ ಸಮಯವನ್ನು ಸ್ವಯಂ ಅಧ್ಯಯನಕ್ಕೆ ಬಳಸಿಕೊಳ್ಳುವುದು ಸೂಕ್ತ.

ಆಳ-ಅಗಲ ಎಚ್ಚರ ತಪ್ಪಿದ ಪ್ರಚಾರ ಈಗ ಕೋವಿಡ್ ಅಬ್ಬರ — **ಬೀದಿಗಳಲ್ಲಿ ಸಾಯುತ್ತಿರುವ ರೋಗಿಗಳು** 9

200 ಮಂದಿ ಬಡವರಿಗೆ ಪಲ್ಸ್ ಆಕ್ಸಿಮೀಟರ್ 4B

ಸೆನ್ಸೆಕ್ಸ್	ನಿಫ್ಟಿ	₹/$
49,734 ▲	14,864 ▲	74.36 ▲

ರೆಮ್‌ಡಿಸಿವಿರ್ ಔಷಧ ನೀತಿ: ಕೇಂದ್ರದ ವಿರುದ್ಧ ಹರಿಹಾಯ್ದ ದೆಹಲಿ ಹೈಕೋರ್ಟ್

‘ಜನರ ಸಾವು ಸರ್ಕಾರದ ಇಚ್ಛೆಯೇ?’

ನವದೆಹಲಿ (ಪಿಟಿಐ): ರೆಮ್‌ಡಿಸಿವಿರ್ ಚುಚ್ಚುಮದ್ದು ನೀಡಿಕೆಗೆ ಸಂಬಂಧಿಸಿ ಕೇಂದ್ರ ಸರ್ಕಾರ ರೂಪಿಸಿರುವ ನಿಯಮವೊಂದು ದೆಹಲಿ ಹೈಕೋರ್ಟ್‌ನ ಅಸಮಾಧಾನಕ್ಕೆ ಕಾರಣವಾಗಿದೆ.

ವೈದ್ಯಕೀಯ ಆಮ್ಲಜನಕ ಬೆಂಬಲದಲ್ಲಿ ಇರುವ ರೋಗಿಗಳಿಗೆ ಮಾತ್ರ ರೆಮ್‌ಡಿಸಿವಿರ್ ಔಷಧ ನೀಡಬೇಕು ಎಂಬುದು ಹೊಸ ನಿಯಮ. ಇಂತಹ ನಿಮಯ ಮಾಡಿ ಜನರು ಸಾಯುವುದನ್ನು ಸರ್ಕಾರ ಬಯಸಿದೆಯೇ ಎಂದು ಹೈಕೋರ್ಟ್ ಪ್ರಶ್ನಿಸಿದೆ.

‘ಇದು ತಪ್ಪು. ಯೋಚನೆಯೇ ಮಾಡದೆ ತೆಗೆದುಕೊಂಡ ನಿರ್ಧಾರ ಇದು. ಆಮ್ಲಜನಕ ಬೆಂಬಲದಲ್ಲಿ ಇಲ್ಲದ ರೋಗಿಗಳಿಗೆ ಈಗ ರೆಮ್‌ಡಿಸಿವಿರ್ ಚುಚ್ಚುಮದ್ದು ಸಿಗುವುದಿಲ್ಲ. ಜನರು ಸಾಯುವುದೇ ನಿಮಗೆ ಬೇಕಾದಂತೆ ಕಾಣಿಸುತ್ತಿದೆ’ ಎಂದು ನ್ಯಾಯಮೂರ್ತಿ ಪ್ರತಿಭಾ ಎಂ. ಸಿಂಗ್ ಅವರ ಪೀಠವು ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

ಔಷಧದ ಕೊರತೆಯ ಪ್ರಮಾಣವನ್ನು ಕಡಿಮೆ ಮಾಡುವುದಕ್ಕೆ ಇಂತಹ ನಿರ್ಧಾರ ಕೈಗೊಂಡಂತೆಯೂ ಕಾಣಿಸುತ್ತಿದೆ. ಇವು ಸಂಪೂರ್ಣವಾಗಿ ಅಸಮರ್ಪಕ ನಿರ್ವಹಣೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಕೋವಿಡ್ ಬಾಧಿತ ವಕೀಲರೊಬ್ಬರು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸಿತು. ಆ ವಕೀಲರಿಗೆ ರೆಮ್‌ಡಿಸಿವಿರ್‌ನ ಆರು ಡೋಸ್ ಬೇಕಿತ್ತು. ಸಿಕ್ಕಿದ್ದು ಮೂರು ಮಾತ್ರ. ಕೋರ್ಟ್ ಮಧ್ಯಪ್ರವೇಶದ ಬಳಿಕ ಮೂರು ಡೋಸ್ ಔಷಧ ನೀಡಲಾಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

14,39,822 ▲	ಒಟ್ಟು ಸೋಂಕಿತರು (14,00,775 ನಿನ್ನೆಯ ವಿವರ)
3,28,884 ▲	ಸಕ್ರಿಯ ಪ್ರಕರಣಗಳು
10,95,883 ▲	ಗುಣಮುಖರಾದವರು
15,036 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	39,047 ▲
ಗುಣಮುಖ	11,833 ▲
ಸಾವು	229 ▲
2,192 ಐಸಿಯುನಲ್ಲಿ ಇರುವವರು	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಕಾಳ ದಾಸ್ತಾನು ಬೇಡ’: ವೈದ್ಯಕೀಯ ಆಮ್ಲಜನಕ ಅಥವಾ ರೆಮ್‌ಡಿಸಿವಿರ್ ನಂತಹ ಅಗತ್ಯ ಔಷಧಗಳನ್ನು ಜನರು ಸಂಗ್ರಹಿಸಿ ಇರಿಸಿಕೊಳ್ಳಬಾರದು. ಇವುಗಳಿಗಾಗಿ ಕಾಳಸಂತೆಯನ್ನು ಅವಲಂಬಿಸಬಾರದು ಎಂದು ದೆಹಲಿ ಹೈಕೋರ್ಟ್ ಹೇಳಿದೆ.

‘ಇಂತಹ ಸಂದರ್ಭಗಳಲ್ಲಿ ಜನರು ಒಟ್ಟಾಗಬೇಕು, ತಮ್ಮಲ್ಲಿರುವ ಮೌಲ್ಯಗಳನ್ನು ಪ್ರದರ್ಶಿಸಬೇಕು’ ಎಂದೂ ಹೈಕೋರ್ಟ್ ಹೇಳಿದೆ. ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಮತ್ತು ರೇಖಾ ಪಲ್ಲಿ ಅವರ ಪೀಠವು ರಾಷ್ಟ್ರ ರಾಜಧಾನಿಯಲ್ಲಿ ಕೋವಿಡ್ ಸ್ಥಿತಿಯ ಬಗ್ಗೆ ಸ್ವಯಂ ಪ್ರೇರಣೆಯಿಂದ ವಿಚಾರಣೆ ನಡೆಸಿದೆ.

2 ಲಕ್ಷ ದಾಟಿದ ಸಾವು: ದೇಶದಲ್ಲಿ ಕೋವಿಡ್‌ನಿಂದಾಗಿ ಸತ್ತವರ ಸಂಖ್ಯೆ 2,01,187ಕ್ಕೆ ಏರಿದೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಅಂದರೆ 66,170 ಮಂದಿ ಕೋವಿಡ್‌ಗೆ ಬಲಿಯಾಗಿದ್ದಾರೆ. ಕರ್ನಾಟಕದಲ್ಲಿ 13,728 ಜನರು ಈ ಪಿಡುಗಿನಿಂದ ಮೃತಪಟ್ಟಿದ್ದಾರೆ. ಮೃತರಲ್ಲಿ ಶೇ 70ಕ್ಕೂ ಹೆಚ್ಚು ಮಂದಿಗೆ ಇತರ ಅನಾರೋಗ್ಯಗಳೂ ಇದ್ದವು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಉತ್ತರ ಪ್ರದೇಶ ಸರ್ಕಾರಕ್ಕೆ ಹೈಕೋರ್ಟ್ ತರಾಟೆ

ಲಖನೌ: ಕೋವಿಡ್–19 ತಡೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳುವಲ್ಲಿ ‘ವಿಫಲ’ವಾಗಿದೆ ಎಂದು ಉತ್ತರ ಪ್ರದೇಶ ಸರ್ಕಾರವನ್ನು ಅಲಹಾಬಾದ್ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಪ್ರಮುಖ ನಗರಗಳಲ್ಲಿ ಪರಿಸ್ಥಿತಿ ಅಸ್ತವ್ಯಸ್ತವಾಗಿದೆ. ಜನರು ತಮ್ಮ ಯೋಗಕ್ಷೇಮವನ್ನು ತಾವೇ ನೋಡಿಕೊಳ್ಳಬೇಕಾದ ಸ್ಥಿತಿ ಇದೆ ಎಂದು ಕೋರ್ಟ್ ಹೇಳಿದೆ.

ಗ್ರಾಮ ಪಂಚಾಯಿತಿಗಳಿಗೆ ಇತ್ತೀಚೆಗೆ ನಡೆದ ಮತದಾನ ಮತ್ತು ಪ್ರಚಾರ ಸಂದರ್ಭದಲ್ಲಿ ಕೋವಿಡ್ ತಡೆ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿಲ್ಲ ಎಂದು ರಾಜ್ಯ ಚುನಾವಣಾ ಆಯೋಗವನ್ನೂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ 135 ಶಿಕ್ಷಕರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂದು ಪ್ರಕಟವಾಗಿರುವ ವರದಿಯನ್ನು ಕೋರ್ಟ್ ಉಲ್ಲೇಖಿಸಿದೆ. ರಾಜ್ಯದಲ್ಲಿ ಚುನಾವಣಾ ಕೆಲಸ ನಿರ್ವಹಿಸಿದ್ದ 200 ಶಿಕ್ಷಕರು ಕೋವಿಡ್‌ನಿಂದ ಮೃತಪಟ್ಟರೆ, ಎರಡು ಸಾವಿರಕ್ಕೂ ಹೆಚ್ಚು ಶಿಕ್ಷಕರಿಗೆ ಕೋವಿಡ್ ತಗುಲಿದೆ ಎಂದು ಶಿಕ್ಷಕರ ಸಂಘಟನೆಗಳು ಹೇಳಿವೆ.

‘ಪ್ರಮುಖ ನಗರಗಳ ರಸ್ತೆ ಮತ್ತು ಬೀದಿಗಳಲ್ಲಿ ಕೊರೊನಾದ ಪ್ರೇತಗಳು ಅಡ್ಡಾಡುತ್ತಿವೆ. ಸಂಪತ್ತು ಇರುವವರು ಬದುಕಿಕೊಳ್ಳುತ್ತಾರೆ, ಇಲ್ಲದವರು ಈ ಹಿಂದಿನ ಸಾಂಕ್ರಾಮಿಕಗಳ ಸಂದರ್ಭದಲ್ಲಿ ಆದಂತೆ ಸಾಯಬಹುದು’ ಎಂದು ನ್ಯಾಯಮೂರ್ತಿ ಸಿದ್ಧಾರ್ಥ ವರ್ಮ ಮತ್ತು ಅಜಿತ್ ಕುಮಾರ್ ಅವರ ಪೀಠವು ಹೇಳಿದೆ.

ತಾವು ಹೇಳಿದಂತೆಯೇ ಆಗಬೇಕು ಎಂಬ ಮನೋಭಾವವನ್ನು ಅಧಿಕಾರದಲ್ಲಿ ಇರುವವರು ಬಿಡಬೇಕು. ಎಲ್ಲೆಡೆಯಿಂದ ಬರುವ ಸಲಹೆಗಳನ್ನು ಸ್ವೀಕರಿಸಬೇಕು ಎಂದು ಪೀಠ ಅಭಿಪ್ರಾಯಪಟ್ಟಿದೆ.

ಲಖನೌ, ನೋಯ್ಡಾ, ಆಗ್ರಾ ಸೇರಿ ಪ್ರಮುಖ ನಗರಗಳ ಆಸ್ಪತ್ರೆಗಳಲ್ಲಿ ಹಾಸಿಗೆ, ತೀವ್ರ ನಿಗಾ ಘಟಕದ ಹಾಸಿಗೆ, ವೆಂಟಿಲೇಟರ್, ರೆಮ್‌ಡಿಸಿವಿರ್, ಆಮ್ಲಜನಕದ ಬೇಡಿಕೆ ಮತ್ತು ಲಭ್ಯತೆ ಬಗ್ಗೆ ಮಾಹಿತಿ ನೀಡುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಏಪ್ರಿಲ್ 19ರಿಂದ ಮೇ 2ರ ನಡುವೆ ಮೃತಪಟ್ಟವರ ಸಂಖ್ಯೆ ಎಷ್ಟು ಎಂಬುದನ್ನು ತಿಳಿಸುವಂತೆ ಸೂಚಿಸಿದೆ. ಮೇ 3ರಂದು ಮುಂದಿನ ವಿಚಾರಣೆ ನಡೆಯಲಿದೆ.

ರಾಜ್ಯದ ಐದು ನಗರಗಳಲ್ಲಿ ಲಾಕ್‌ಡೌನ್ ಹೇರಬೇಕು ಎಂದು ಇದೇ ಪೀಠ ಈ ಹಿಂದೆ ಆದೇಶಿಸಿತ್ತು. ಆದರೆ, ಆ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ.

ಲಸಿಕೆ ನೋಂದಣಿ: ತಾಂತ್ರಿಕ ದೋಷ

ಕೋವಿಡ್ ಲಸಿಕೆ ಪಡೆಯಲು 18 ವರ್ಷ ಮೇಲ್ಪಟ್ಟ ನಾಗರಿಕರಿಗೆ ಬುಧವಾರದಿಂದ ಆರಂಭಿಸಲಾದ ನೋಂದಣಿ ಪ್ರಕ್ರಿಯೆಗೆ ಶುರುವಿನಲ್ಲೇ ತಾಂತ್ರಿಕ ಸಮಸ್ಯೆ ಎದುರಾಯಿತು. 18ರಿಂದ 44 ವರ್ಷದವರೆಗಿನ ಎಲ್ಲರೂ ಮೇ1ರಿಂದ ಲಸಿಕೆ ಪಡೆಯಲು ಕೇಂದ್ರ ಸರ್ಕಾರ ಅನುಮತಿ ನೀಡಿದ್ದು, ಇದಕ್ಕಾಗಿ ಕೋವಿನ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸಿಕೊಳ್ಳುವಂತೆ ಸೂಚಿಸಲಾಗಿದೆ

ಸಂಜೆ 4 ಗಂಟೆಗೆ ನೋಂದಣಿ ಪ್ರಕ್ರಿಯೆ ಆರಂಭವಾದ ಕೆಲ ಹೊತ್ತಿನಲ್ಲೇ ತಾಂತ್ರಿಕ ದೋಷ ಕಾಡಿತು. ‘ಸರ್ವರ್‌ನಲ್ಲಿ ಸಮಸ್ಯೆಯಾಗಿದೆ. ಬಳಿಕ ಪ್ರಯತ್ನಿಸಿ’ ಎನ್ನುವ ಸಂದೇಶ ಬರುತ್ತಿತ್ತು. ಸುಮಾರು ಅರ್ಧ ಗಂಟೆ ಬಳಿಕ ಸರ್ವರ್ ಸರಿಪಡಿಸಿರುವ ಸಂದೇಶ ರವಾನಿಸಲಾಯಿತು. ಸಂಜೆ 7ಗಂಟೆ ವೇಳೆಗೆ ಸುಮಾರು 80 ಲಕ್ಷ ಮಂದಿ ಲಸಿಕೆಗಾಗಿ ನೋಂದಾಯಿಸಿಕೊಂಡಿದ್ದಾರೆ.



ಕೊರೊನಾ ನಡುವೆ ಪಲ್ಲಕ್ಕಿ ಉತ್ಸವ...

ವಿಜಯಪುರ ಜಿಲ್ಲೆಯ ಕೊಲ್ಹಾರ ಪಟ್ಟಣದ ದಿಗಂಬರೇಶ್ವರ ಸಂಸ್ಥಾನ ಮಠದ ಪೀಠಾಧಿಪತಿ ಕಲ್ಲಿನಾಥ ಸ್ವಾಮೀಜಿ ದವನದ ಹುಣ್ಣಿಮೆ ಅಂಗವಾಗಿ ಬುಧವಾರ ಪಲ್ಲಕ್ಕಿಯಲ್ಲಿ ಕುಳಿತು ಭಕ್ತರಿಂದ ಮೆರವಣಿಗೆ ಮಾಡಿಸಿಕೊಂಡರು. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಭಕ್ತರು ಮಾಸ್ಕ್ ಸಹ ಧರಿಸಿರಲಿಲ್ಲ

ಸುದ್ದಿ 2

ಅಕ್ಕಿ ಕೇಳಿದ ರೈತನಿಗೆ ಸಾಯಿ ಎಂದ ಸಚಿವ ಉಮೇಶ ಕತ್ತಿ

ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಕ್ಷಮೆ ಕೇಳಿದ ಆಹಾರ ಸಚಿವ

ಪ್ರಜಾವಾಣಿ ವಾರ್ತೆ

ಬೆಳಗಾವಿ/ಬೆಂಗಳೂರು: ಪಡಿತರ ಅಕ್ಕಿ ಕಡಿತಗೊಳಿಸಿದ್ದನ್ನು ಪ್ರಶ್ನಿಸಿದ ರೈತರೊಬ್ಬರಿಗೆ ‘ಸತ್ತು ಹೋದರೆ ಒಳ್ಳೆಯದು’ ಎಂದು ಆಹಾರ ಸಚಿವ ಉಮೇಶ ಕತ್ತಿ ನೀಡಿರುವ ಪ್ರತಿಕ್ರಿಯೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

ತಾವು ಆಡಿದ ಮಾತುಗಳ ಆಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದಂತೆ ಸಚಿವ ಕತ್ತಿ ಬುಧವಾರ ಸಂಜೆ ಕ್ಷಮೆ ಕೋರಿದರು. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕತ್ತಿಯವರನ್ನು ತರಾಟೆಗೆ ತೆಗೆದುಕೊಳ್ಳುವುದರ ಜತೆಗೆ, ಈ ಕುರಿತು ವಿಷಾದ ವ್ಯಕ್ತಪಡಿಸಿದರು. ‘ಗೋಧಿ ಬೇಡವಾದರೆ 5 ಕೆ.ಜಿ ಅಕ್ಕಿ ನೀಡಲು ಸಿದ್ಧ’ ಎಂದೂ ವಾಗ್ದಾನ ಮಾಡಿದರು.

ಕತ್ತಿ ಅವರನ್ನು ಸಚಿವ ಸ್ಥಾನದಿಂದ ಕಿತ್ತೊಗೆಯುವಂತೆ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಆಗ್ರಹಿಸಿದರು.

ಆಗಿದ್ದೇನು?: ಗದಗ ಜಿಲ್ಲೆಯ ರೈತ ಸಂಘದ ಕಾರ್ಯಕರ್ತ ಈಶ್ವರ ಅವರು ಒಂದೆರಡು ದಿನಗಳ ಹಿಂದೆ ಸಚಿವರ ಮೊಬೈಲ್ ಫೋನ್‌ಗೆ ಕರೆ ಮಾಡಿ, ‘ಲಾಕ್‌ಡೌನ್ ಸಂದರ್ಭದಲ್ಲೂ ಕೇವಲ 2 ಕೆ.ಜಿ. ಅಕ್ಕಿ ಕೊಡುತ್ತಿದ್ದೀರಿ. ಇಷ್ಟು ಕಡಿಮೆ ಅಕ್ಕಿಯಲ್ಲಿ ನಾವು ಬದುಕುವುದಾದರೂ ಹೇಗೆ?’ ಎಂದು ಪ್ರಶ್ನಿಸಿದ್ದರು.

ಇದಕ್ಕೆ ಉತ್ತರಿಸಿದ ಸಚಿವರು, ‘2 ಕೆ.ಜಿ. ಅಕ್ಕಿ ಜೊತೆಗೆ 3 ಕೆ.ಜಿ. ರಾಗಿ ಕೊಡುತ್ತಿದ್ದೇವೆ. ಉತ್ತರ ಕರ್ನಾಟಕ ಭಾಗಕ್ಕೆ 3 ಕೆ.ಜಿ. ಜೋಳ ನೀಡುತ್ತಿದ್ದೇವೆ. ಒಟ್ಟು 5 ಕೆ.ಜಿ. ಪಡಿತರ ವಿತರಿಸಲಾಗುತ್ತಿದೆ’ ಎಂದರು. ‘ಹೀಗಾದರೆ ನಾವು ಉಪವಾಸ ಇರೋದಾ ಅಥವಾ ಸತ್ತು ಹೋಗೋದಾ’ ಎಂದು ರೈತ ಖಾರವಾಗಿ ಪ್ರಶ್ನಿಸಿದರು. ಸಿಟ್ಟಿಗೆದ್ದ ಕತ್ತಿ, ‘ಸತ್ತು ಹೋಗೋದು ಒಳಿತು’ ಎಂದು ಪ್ರತಿಕ್ರಿಯಿಸಿದರು.

4A ಪುಟ ನೋಡಿ

ಲಾಕ್‌ಡೌನ್ ನಡುವಲ್ಲೇ ಸಂಸತ್ ಭವನ ಕಾಮಗಾರಿ 09

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಆಟ-ನೋಟ
ವನಿತಾ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ಮೇಕ್ ಶಿಫ್ಟ್ ಆಸ್ಪತ್ರೆ ಅಣಿಯಾದರೂ ನುರಿತ ಸಿಬ್ಬಂದಿ ಕೊರತೆ

ಐಸಿಯು ಸಹಿತ ಹಾಸಿಗೆ ಭರ್ತಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೋವಿಡ್ ಎರಡನೇ ಅಲೆಯಲ್ಲಿ ಸೋಂಕಿತರಾದ ರೋಗಿಗಳು ಉಸಿರಾಟ ಸಮಸ್ಯೆ ಕಾಣಿಸಿಕೊಳ್ಳುತ್ತಲೇ ಗಂಭೀರಾವಸ್ಥೆ ತಲುಪುತ್ತಿದ್ದಾರೆ. ಆದರೆ, ಸರ್ಕಾರಿ–ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳು ಭರ್ತಿಯಾಗಿರುವುದು ಆರೋಗ್ಯ ಇಲಾಖೆಯನ್ನು ಕಳವಳಕ್ಕೀಡು ಮಾಡಿದೆ.

ಈ ಕೊರತೆ ನೀಗಿಸಲು ‘ಮೇಕ್ ಶಿಫ್ಟ್’ ಆಸ್ಪತ್ರೆಗಳ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ. ಆದರೆ, ಈ ಯೋಜನೆ ಇನ್ನೂ ಸ್ಪಷ್ಟ ಸ್ವರೂಪ ಪಡೆದಿಲ್ಲ. ಅದರ ಬೆನ್ನಲೇ, ಈ ಆಸ್ಪತ್ರೆಗಳನ್ನು ಆರಂಭಿಸಿದರೆ ತಜ್ಞ ವೈದ್ಯರು ಸೇರಿದಂತೆ ಮಾನವ ಸಂಪನ್ಮೂಲದ ಕೊರತೆ ಎದುರಾಗುವುದು ಖಚಿತ ಎಂದು ಹೆಸರು ಹೇಳಲು ಇಚ್ಛಿಸದ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ತೀವ್ರ ಉಸಿರಾಟ ಸಮಸ್ಯೆಗೆ ಒಳಗಾಗುವ ಕೋವಿಡ್ ರೋಗಿಗಳ ಪೈಕಿ, ಕನಿಷ್ಠ ಶೇ 5ರಷ್ಟು ಮಂದಿಗೆ ವೆಂಟಿಲೇಟರ್ ಐಸಿಯು ಅಗತ್ಯವಾಗಿದೆ. ಆಕ್ಸಿಜನ್ ಹಾಸಿಗೆಯಿಂದ ಹೈ ಡಿಪೆಂಡೆನ್ಸಿ ಘಟಕ (ಎ ಚ್ ಡಿ ಯು), ವೆಂಟಿಲೇಟರ್ ಸೌಲಭ್ಯ ಇರುವ ತೀವ್ರ ನಿಗಾ ಘಟಕ (ಐಸಿಯು) ಸೇರುವವರ ಸಂಖ್ಯೆ ಏರುತ್ತಿದೆ. ಒಮ್ಮೆ ಐಸಿಯು ಸೇರಿದ ರೋಗಿ 7ರಿಂದ 10 ದಿನ ಹೊರಗೆ ಬರುವಂತಿಲ್ಲ.



ರಾಜ್ಯದಲ್ಲಿ ವೆಂಟಿಲೇಟರ್ ಸೌಲಭ್ಯ ಇರುವ ಐಸಿಯುಗಳಿಲ್ಲ. ಕೋವಿಡ್ ರೋಗಿಗಳು ಮರಣ ಹೊಂದಿದರೆ ಯಾರನ್ನು ಹೊಣೆ ಮಾಡಬೇಕು
ಸಿದ್ದರಾಮಯ್ಯ
ವಿಧಾನಸಭೆ ವಿರೋಧ ಪಕ್ಷದ ನಾಯಕ



ನಿಜ, ಬೆಂಗಳೂರಿನಲ್ಲಿ ಐಸಿಯು ಬೆಡ್‌ಗಳ ಸಂಖ್ಯೆ ಕಡಿಮೆ ಇದೆ. ಜೊತೆಗೆ ಆಕ್ಸಿಜನ್ ಬೆಡ್‌ಗಳ ಸಂಖ್ಯೆಯನ್ನೂ ಹೆಚ್ಚಿಸಬೇಕಿದೆ
ಗೌರವ ಗುಪ್ತ,
ವಿಶೇಷ ಆಯುಕ್ತ, ಬಿಬಿಎಂಪಿ

ಪ್ರಜಾವಾಣಿ ವಿಶೇಷ

‘ಕೋವಿಡ್ ಮೊದಲ ಅಲೆಯಲ್ಲಿ ಪತ್ತೆಯಾದ ವೈರಾಣು, ರೋಗಿಯ ಶ್ವಾಸಕೋಶಕ್ಕೆ ಅಂಥ ಹಾನಿ ಮಾಡಿಲ್ಲ. ಈಗ ರೂಪಾಂತರ ವೈರಾಣು, ಶ್ವಾಸಕೋಶದ ಭಾಗಗಳಿಗೆ ತೀವ್ರ ಸ್ವರೂಪದ ಹಾನಿ ಮಾಡುತ್ತಿದೆ. ಇದು ನ್ಯುಮೋನಿಯಾಕ್ಕೆ ಕಾರಣವಾಗುತ್ತಿದೆ. ಸೋಂಕು ತಗಲಿದ ವಾರದೊಳಗೆ ಶ್ವಾಸಕೋಶವನ್ನು ಶೇ 90ರಿಂದ 100ರಷ್ಟು ಆವರಿಸಿಕೊಳ್ಳುತ್ತದೆ. ಬಹು ಬೇಗ ರೋಗಿಗಳು ಗಂಭೀರಾವಸ್ಥೆ ತಲುಪುತ್ತಿದ್ದಾರೆ. ಮೊದಲ ದಿನವೇ ರೋಗಿಯ ಬಗ್ಗೆ ಹೆಚ್ಚಿನ ನಿಗಾ ವಹಿಸಿ, ವೆಂಟಿಲೇಟರ್ ಅಳವಡಿಸಬೇಕಾಗುತ್ತದೆ. ಶ್ವಾಸಕೋಶಕ್ಕೆ ತೀವ್ರ ಹಾನಿಯಾಗಿದ್ದರೆ ಸಾವು ಸಂಭವಿಸುವ ಸಾಧ್ಯತೆ ಶೇ 90ರಷ್ಟಿರುತ್ತದೆ. ಹೀಗಾಗಿ, ವೆಂಟಿಲೇಟರ್ ಸಹಿತ ಐಸಿಯುಗಳು ಹೆಚ್ಚು ಬೇಕಾಗಿದೆ. ಜೊತೆಗೆ ಅದನ್ನು ನಿರ್ವಹಿಸಲು ತಜ್ಞ ವೈದ್ಯರ ಅಗತ್ಯವಿದೆ’ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಾಧಿಕಾರಿ ಶಿವಕುಮಾರ್ ತಿಳಿಸಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ 900 ಹಾಸಿಗೆಗಳಿವೆ. ಈ ಪೈಕಿ, ಸದ್ಯ 450 ಮಾತ್ರ ಬಳಕೆ ಆಗುತ್ತಿವೆ. 80 ಐಸಿಯುಗಳಲ್ಲಿ 60 ಬಳಕೆ ಆಗುತ್ತಿವೆ. ಉಳಿದ 20 ಉಪಯೋಗಕ್ಕೆ ಯೋಗ್ಯವಾಗಿದ್ದರೂ, ಈಗಾಗಲೇ ಬಳಕೆಯಲ್ಲಿರುವವು ಕೆಟ್ಟು ಹೋದರೆ ಬದಲಿಯಾಗಿ ಬಳಸಲು ಮೀಸಲಿಡಲಾಗಿದೆ. ಬೌರಿಂಗ್ ಆಸ್ಪತ್ರೆಯಲ್ಲಿ 15 ಐಸಿಯುಗಳಿವೆ. ಸಿಬ್ಬಂದಿ ಲಭ್ಯತೆ ನೋಡಿಕೊಂಡು ಅವುಗಳನ್ನು ಬಳಸಲಾಗುತ್ತಿದೆ.

4B ಪುಟ ನೋಡಿ



ರೆಮ್‌ಡಿಸಿವಿರ್ ಚುಚ್ಚುಮದ್ದುಗಳ ಬಾಕ್ಸ್‌ಗಳನ್ನು ಕಲಬುರ್ಗಿಗೆ ಸಾಗಿಸಲು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತರಲಾಯಿತು

ನಸುಕಿನ 1ಕ್ಕೆ ಕಚೇರಿಗೆ ತೆರಳಿ ರೆಮ್‌ಡಿಸಿವಿರ್ ತಂದ ಸಂಸದ!

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಜಿಲ್ಲೆಯ ಕೋವಿಡ್ ರೋಗಿಗಳಿಗೆ ರೆಮ್‌ಡಿಸಿವಿರ್ ಚುಚ್ಚುಮದ್ದು ಅಭಾವ ತೀವ್ರವಾಗಿದ್ದನ್ನು ಗಮನಿಸಿದ ಸಂಸದ ಡಾ.ಉಮೇಶ ಜಾಧವ, ಬೆಂಗಳೂರಿನ ಔಷಧ ನಿಯಂತ್ರಕರ ಕಚೇರಿಯ ವಾರ್ ರೂಮ್‌ಗೆ ಬುಧವಾರ ನಸುಕಿನಲ್ಲಿ 1 ಗಂಟೆಗೆ ತೆರಳಿ, 350 ವೈಲ್‌ಗಳನ್ನು ಪಡೆದುಕೊಂಡು ವಿಮಾನದ ಮೂಲಕ ಬೆಳಿಗ್ಗೆ ಇಲ್ಲಿಗೆ ತಂದರು.

ಜಿಲ್ಲೆಯಲ್ಲಿ ಈ ಚುಚ್ಚುಮದ್ದು ದಾಸ್ತಾನು ಖಾಲಿಯಾಗಿದ್ದನ್ನು ಸಹಾಯಕ ಔಷಧ ನಿಯಂತ್ರಕ ಗೋಪಾಲ ಭಂಡಾರಿ ಸಂಸದರ ಗಮನಕ್ಕೆ ತಂದಿದ್ದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ಸಂಸದರು, ಜಿಲ್ಲಾಡಳಿತವನ್ನು ನೆಚ್ಚಿಕೊಳ್ಳುವ ಬದಲು ತಾವೇ ಬೆಂಗಳೂರಿನ ಕೋವಿಡ್ ವಾರ್ ರೂಮ್‌ಗೆ ತೆರಳಿ ಅಧಿಕಾರಿಗಳಿಗೆ ಪರಿಸ್ಥಿತಿಯ ಗಂಭೀರತೆ ಮನವರಿಕೆ ಮಾಡಿಕೊಟ್ಟರು.

ತಕ್ಷಣ ಜಿಲ್ಲೆಗೆ 350 ವೈಲ್ಸ್ ರೆಮ್‌ಡಿಸಿವಿರ್ ಚುಚ್ಚುಮದ್ದು ಮಂಜೂರು ಮಾಡಿಸಿಕೊಂಡರು. ಅದನ್ನು ಬುಧವಾರ ಕಳಿಸಿದ್ದರೆ ಗುರುವಾರ (ಏಪ್ರಿಲ್ 29) ತಲುಪುವ ಸಾಧ್ಯತೆ ಇತ್ತು. ಆದರೆ, ಹಲವು ರೋಗಿಗಳಿಗೆ ತುರ್ತಾಗಿ ಕೊಡಬೇಕಿರುವುದರಿಂದ ಆ ಬಾಕ್ಸ್‌ಗಳನ್ನು ತಮ್ಮ ಕಾರಿನಲ್ಲೇ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಾಗಿಸಿ ಅಲ್ಲಿಂದ ವಿಮಾನದಲ್ಲಿ ಕಲಬುರ್ಗಿಗೆ ತಂದರು.

ಗಾರ್ಮೆಂಟ್ಸ್: ಶೇ 50ರಷ್ಟು ಸಿಬ್ಬಂದಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ಸಿದ್ಧ ಉಡುಪು ತಯಾರಿಕಾ (ಗಾರ್ಮೆಂಟ್) ಕೈಗಾರಿಕೆಗಳು ತಮ್ಮ ಸಾಮರ್ಥ್ಯದ ಶೇಕಡ 50ರಷ್ಟು ಸಿಬ್ಬಂದಿಯನ್ನು ಬಳಸಿಕೊಂಡು ಕಾರ್ಯಾಚರಣೆ ನಡೆಸಲು ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರ ಬುಧವಾರ ಪರಿಷ್ಕೃತ ಆದೇಶ ಹೊರಡಿಸಿದೆ.

ಲಾಕ್‌ಡೌನ್ ಜಾರಿಗೊಳಿಸಿ ಹೊರಡಿಸಿದ ಆದೇಶದಲ್ಲಿ ಎಲ್ಲ ಉದ್ದಿಮೆಗಳೂ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಿದ್ದ ಸರ್ಕಾರ, ಸಿದ್ಧ ಉಡುಪು ತಯಾರಿಕಾ ಕೈಗಾರಿಕೆಗಳನ್ನು ತೆರೆಯದಂತೆ ನಿರ್ಬಂಧ ವಿಧಿಸಿತ್ತು. ಲಕ್ಷಾಂತರ ಮಂದಿ ಕಾರ್ಮಿಕರು ಕೆಲಸ ಮಾಡುವ ಗಾರ್ಮೆಂಟ್ ಉದ್ಯಮಕ್ಕೂ ಕಾರ್ಯಾಚರಣೆ ನಡೆಸಲು ಅವಕಾಶ ನೀಡಬೇಕು ಎಂಬ ಒತ್ತಾಯ ಕೇಳಿಬಂದಿತ್ತು.

‘ಕೋವಾಕ್ಸಿನ್: 617 ರೂಪಾಂತರ ನಿಷ್ಕ್ರಿಯ ಸಾಮರ್ಥ್ಯ’

ವಾಷಿಂಗ್ಟನ್ (ಪಿಟಿಐ): ಭಾರತದ ಕೊವಾಕ್ಸಿನ್ ಲಸಿಕೆ ಕೊರೊನಾ ವೈರಸ್‌ನ 617 ರೂಪಾಂತರಗಳನ್ನು ನಿಷ್ಕ್ರಿಯಗೊಳಿಸುವಸಾಮರ್ಥ್ಯಇರುವುದುಕಂಡು ಬಂದಿದೆ ಎಂದು ಅಮೆರಿಕದ ಶ್ವೇತಭವನದ ಮುಖ್ಯ ವೈದ್ಯಕೀಯ ಸಲಹೆಗಾರ ಡಾ. ಆಂಥೋನಿ ಫೌಸಿ ಹೇಳಿದ್ದಾರೆ.

‘ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ಕೋವಾಕ್ಸಿನ್ ಲಸಿಕೆ ಇಷ್ಟು ಪರಿಣಾಮಕಾರಿ ಆಗಿರುವುದರಿಂದ, ಜನ ಲಸಿಕೆಪಡೆಯಬೇಕು,ಭಾರತದಲ್ಲಿದೊಡ್ಡ ಪ್ರಮಾಣದಲ್ಲಿ ಕೋವಿಡ್ ಅಲೆ ಎದ್ದಿದ್ದರೂ ಇಂತಹ ಪರಿಣಾಮಕಾರಿ ಲಸಿಕೆ ಇರುವುದು ಆಶಾದಾಯಕ ವಿಚಾರ’ ಎಂದು ಸಾಂಕ್ರಾಮಿಕ ರೋಗಗಳ ತಜ್ಞರೂ ಆಗಿರುವ ಅವರು ತಿಳಿಸಿದ್ದಾರೆ.

ಗಗನಯಾತ್ರಿ ಕೊಲಿನ್ಸ್ ನಿಧನ

ವಾಷಿಂಗ್ಟನ್ (ಎಪಿ): ಚಂದ್ರನ ಮೇಲೆ ಮೊದಲಿಗೆ ಮಾನವನ ಪಾದ ಊರಿದ ಯಾನದಲ್ಲಿ ಅಪೊಲೊ 11 ವ್ಯೋಮನೌಕೆಯ ಪೈಲಟ್ ಆಗಿದ್ದ ಮೈಕೆಲ್ ಕೊಲಿನ್ಸ್ (90) ಕ್ಯಾನ್ಸರ್‌ನಿಂದ ಬುಧವಾರ ನಿಧನರಾದರು.

ಕೊಲಿನ್ಸ್ ಅವರು 1969ರಲ್ಲಿ ನೀಲ್ ಆರ್ಮ್‌ಸ್ಟ್ರಾಂಗ್ ಮತ್ತು ಬಝ್ ಆಲ್ಡ್ರಿನ್ ಅವರೊಟ್ಟಿಗೆ ಚಂದ್ರನ ಮೇಲೆ ಮೊದಲ ಹೆಜ್ಜೆ ಇಡಲು ಹೊರಟ ಯಾನದ ಪೈಲಟ್ ಆಗಿದ್ದರು. ಚಂದ್ರನ ಮೇಲೆ ಮೊದಲ ಹೆಜ್ಜೆ ಇಟ್ಟ ಇಬ್ಬರು ಮಾನವರನ್ನು ವ್ಯೋಮನೌಕೆಗೆ ಮತ್ತೆ ಕರೆಸಿಕೊಂಡು ಭೂಮಿಗೆ ವಾಪಸ್ ಆಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ನಿಮಗೆ ಚಂದ್ರನ ಮೇಲೆ ಕಾಲಿಡದ ಬಗ್ಗೆ ಬೇಸರ ಇಲ್ಲವೇ ಎಂದು ಸಂದರ್ಶನಗಳಲ್ಲಿ ಅವರನ್ನು ಪ್ರಶ್ನಿಸಲಾಗಿತ್ತು. ಸಹ ವ್ಯೋಮಯಾನಿಗಳನ್ನು ಸುರಕ್ಷಿತವಾಗಿ ಭೂಮಿಗೆ ಕರೆತಂದ ತೃಪ್ತಿಯೇ ದೊಡ್ಡದು ಎಂದಿದ್ದರು.

₹2000ದವರೆಗೆ ಕೇಳುತ್ತಿರುವ ಚಿತಾಗಾರ ಸಿಬ್ಬಂದಿ: ಆರೋಪ ಅಲ್ಲಗಳೆದ ನೌಕರರ ಸಂಘ

ಇತರೆ ಶವಗಳ ಸಂಸ್ಕಾರಕ್ಕೂ ಹರಸಾಹಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಶವಗಳ ಸಂಸ್ಕಾರಕ್ಕೆ ಸಂಬಂಧಿಕರು ಹರಸಾಹಸ ಪಡುತ್ತಿದ್ದರೆ, ಇತರೆ ಕಾಯಿಲೆಗಳಿಂದ ಸಾವಿಗೀಡಾಗುತ್ತಿರುವವರ ಸಂಸ್ಕಾರಕ್ಕೂ ದಿನವಿಡೀ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ.

‘ಕೋವಿಡ್ ಅಲ್ಲದ ಶವಗಳ ಸಂಸ್ಕಾರಕ್ಕೆ ಚಿತಾಗಾರದ ಸಿಬ್ಬಂದಿ ₹2000ದವರೆಗೆ ಹಣ ಕೇಳುತ್ತಿದ್ದಾರೆ. ರಾಜಾಜಿನಗರ, ಹೆಬ್ಬಾಳ, ಕೆಂಗೇರಿ ಸೇರಿದಂತೆ ಹಲವು ಚಿತಾಗಾರಗಳಲ್ಲಿ ಓಡಾಡಿದರೂ ಇದೇ ಸಮಸ್ಯೆ ಇದೆ’ ಎಂದು ಪಾಲಿಕೆಯ ಮಾಜಿ ಸದಸ್ಯರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

‘ಕೆಲವರು ಪಿಪಿಇ ಕಿಟ್ ತಂದುಕೊಡಿ ಎನ್ನುತ್ತಾರೆ. ಬಿಬಿಎಂಪಿಯಿಂದಲೇ ಪಿಪಿಇ ಕಿಟ್ ಪೂರೈಸಲಾಗಿರುತ್ತದೆ. ನಾವು ಎಲ್ಲಿಂದ ತಂದುಕೊಡಬೇಕು. ಪಿಪಿಇ ಕಿಟ್ ತೆಗೆದುಕೊಳ್ಳಬೇಕು ಎಂಬ ನೆಪದಲ್ಲಿ ಹಣ ವಸೂಲಿ ಮಾಡಲಾಗುತ್ತಿದೆ’ ಎಂದು ಅವರು ದೂರಿದರು.

‘ಕೋವಿಡ್ ಶವಗಳನ್ನು ದಹನ ಮಾಡಿದ ನಂತರ ಇತರೆ ಶವಗಳ ಸಂಸ್ಕಾರ ಮಾಡುವುದಾಗಿ ಹೇಳುತ್ತಾರೆ. ಕೋವಿಡ್ ಶವಗಳ ದಹನವೇ ಇಡೀ ದಿನ ನಡೆಯುತ್ತಿದೆ. ಬೆಳಿಗ್ಗೆ 10ರಿಂದ ರಾತ್ರಿ 10ರವರೆಗೆ ಕಾಯಬೇಕಾಗಿದೆ’ ಎಂದು ಹರಿಶ್ಚಂದ್ರ ಘಾಟ್ ಚಿತಾಗಾರಕ್ಕೆ ಬಂದಿದ್ದ ವ್ಯಕ್ತಿಯೊಬ್ಬರು ಹೇಳಿದರು.

‘ಮಧುಮೇಹ, ರಕ್ತದೊತ್ತಡ ಅಲ್ಲದೆ, ಡಯಾಲಿಸಿಸ್ ಮಾಡಿಸಿಕೊಳ್ಳುವ ಅನಿವಾರ್ಯತೆ ಇರುವ ರೋಗಿಗಳಿಗೂ ಆಸ್ಪತ್ರೆಗೆ ಹೋಗಲು ಸಾಧ್ಯವಾಗುತ್ತಿಲ್ಲ. ಇತರೆ ಕಾಯಿಲೆಗಳಿಂದ ಸಾಯುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ’ ಎಂದು ಅವರು ಹೇಳಿದರು.



ಕೆ.ಆರ್. ಮಾರುಕಟ್ಟೆಯಲ್ಲಿ ತಾರಕಾರಿ ಖರೀದಿ ಮಾಡಲು ಬರುವ ಗ್ರಾಹಕರ ನಡುವೆ ಅಂತರ ಕಾಪಾಡುವ ಸಲುವಾಗಿ ಬಿಬಿಎಂಪಿ ನೌಕರರು ಬುಧವಾರ ಗುರುತುಗಳನ್ನು ಹಾಕಿದರು. – ಪ್ರಜಾವಾಣಿ ಚಿತ್ರ

‘ಕೆಲಸದಿಂದ ವಜಾ ಮಾಡುವಂತಿಲ್ಲ’

ಬೆಂಗಳೂರು: ಯಾವುದೇ ಉದ್ಯೋಗದಾತರು ಕರ್ಫ್ಯೂ ಅವಧಿಯಲ್ಲಿ ತನ್ನ ನೌಕರರನ್ನು ಕೆಲಸದಿಂದ ತೆಗೆದು ಹಾಕಬಾರದು ಮತ್ತು ವೇತನ ಕಡಿತ ಮಾಡಬಾರದು ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮನವಿ ಮಾಡಿದ್ದಾರೆ.

ಕರ್ಫ್ಯೂ ಅವಧಿಯಲ್ಲಿ ಉದ್ಯೋಗದಾತರು ನೌಕರರನ್ನು ಕೆಲಸದಿಂದ ತೆಗೆದು ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸಂಕಷ್ಟದ ಸಂದರ್ಭದಲ್ಲಿ ಅಂತಹ ನಿರ್ಧಾರಗಳನ್ನು ಕೈಗೊಳ್ಳಬಾರದು ಎಂದು ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಪ್ರಕಟಿಸಿರುವ ಅಧಿಕೃತ ಮನವಿಯಲ್ಲಿ ಕೋರಿದ್ದಾರೆ.

ಕೆಲವು ಕಡೆಗಳಲ್ಲಿ ಮನೆ, ಕಟ್ಟಡಗಳ ಮಾಲೀಕರು ಮನೆ, ಪೇಯಿಂಗ್ ಗೆಸ್ಟ್ ಮತ್ತು ಅಂಗಡಿಗಳ ಬಾಡಿಗೆದಾರರನ್ನು ತೆರವುಗೊಳಿಸುತ್ತಿರುವುದೂ ಕಂಡುಬಂದಿದೆ. ಯಾವುದೇ ಕಟ್ಟಡಗಳ ಮಾಲೀಕರು ಬಾಡಿಗೆದಾರರನ್ನು ಬಲವಂತದಿಂದ ತೆರವುಗೊಳಿಸಬಾರದು ಎಂದು ಮುಖ್ಯ ಕಾರ್ಯದರ್ಶಿ ಮನವಿ ಮಾಡಿದ್ದಾರೆ.

ಆರೋಪ ಸುಳ್ಳು: ‘ಪ್ರಭಾವಿ ರಾಜಕಾರಣಿಗಳು, ಕಾರ್ಪೊರೇಟರ್‌ಗಳು ಇಂತಹ ಆರೋಪ ಮಾಡುತ್ತಿದ್ದಾರೆ. ಶವ ಸಂಸ್ಕಾರಕ್ಕೆ ಬಂದವರ ಹತ್ತಿರ ದುಡ್ಡು ಕೇಳುವಂತಹ ಜನ ನಮ್ಮವರಲ್ಲ. ಸಾರ್ವಜನಿಕರು ಯಾರಾದರೂ ಲಿಖಿತವಾಗಿ ದೂರು ನೀಡಿದರೆ ಈ ಕೆಲಸ ಮಾಡುವುದನ್ನೇ ಬಿಡುತ್ತೇವೆ. ಬೇಕಾದರೆ ಬಿಬಿಎಂಪಿಯವರೇ ಕೆಲಸ ನಿರ್ವಹಿಸಿಕೊಳ್ಳಲಿ’ ಎಂದು ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿಯ ಚಿತಾಗಾರ ನೌಕರರ ಸಂಘದ ಅಧ್ಯಕ್ಷ ಆ. ಸುರೇಶ್ ಹೇಳಿದರು.

‘ಆಂಬುಲೆನ್ಸ್ ಸಿಬ್ಬಂದಿ ಹೊರಗಡೆ ಏನೇನು ವ್ಯವಹಾರ ಮಾಡಿಕೊಳ್ಳುತ್ತಾರೋ ಗೊತ್ತಿಲ್ಲ. ಶವಗಳು ಒಳಗೆ ಬರುತ್ತಿದ್ದಂತೆ ನಮ್ಮ ನೌಕರರು ಅವುಗಳನ್ನು ದಹನ ಮಾಡುವ ಕೆಲಸವಷ್ಟೇ ಮಾಡುತ್ತಾರೆ. ನಾವು ಕಷ್ಟ ಪಡುವುದನ್ನು ನೋಡಲಾಗದೆ ಕೆಲವರು ಟೀ–ಕಾಫಿಗೆ ದುಡ್ಡು ಕೊಡುತ್ತಾರೆ. ಆದರೆ, ಸಾವಿರಾರು ರೂಪಾಯಿ ಕೊಡಿ ಎಂದು ನಾವು ಯಾರ ಮುಂದೆಯೂ ಬೇಡಿಕೆ ಇಡುವುದಿಲ್ಲ’ ಎಂದೂ ಸ್ಪಷ್ಟಪಡಿಸಿದರು. ‘ಒಂದು ಶವಕ್ಕೆ ₹2000 ತೆಗೆದುಕೊಳ್ಳುವಂತಿದ್ದರೆ, ತಿಂಗಳಿಗೆ ₹10 ಸಾವಿರ ಸಂಬಳಕ್ಕಾಗಿ ಬಿಬಿಎಂಪಿಗೆ ಗೋಗರೆಯುವ ಅಗತ್ಯವಿರಲಿಲ್ಲ’ ಎಂದೂ ಹೇಳಿದರು.

ಚಿತಾಗಾರ ಸಿಬ್ಬಂದಿಯಿಂದ ಪ್ರತಿಭಟನೆ

ನಗರದ ಹರಿಶ್ಚಂದ್ರ ಘಾಟ್‌ನ ಚಿತಾಗಾರದ ಸಿಬ್ಬಂದಿ ಬುಧವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿದರು.

‘ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಆಪ್ತ ಸಹಾಯಕ ಎಂದು ಹೇಳಿಕೊಂಡು ಬಂದ ಸಂತೋಷ್ ಎಂಬುವವರು ಅವರಿಗೆ ಪರಿಚಯವಿದ್ದವರ ಶವಗಳನ್ನು ಮೊದಲು ದಹನ ಮಾಡಬೇಕು ಎಂದು ಒತ್ತಡ ಹೇರಿದರು. ಪ್ರಶ್ನಿಸಿದ್ದಕ್ಕೆ ಅವಾಚ್ಯವಾಗಿ ನಿಂದಿಸಿದರು. ಅದಕ್ಕೆ ಪ್ರತಿಭಟನೆ ನಡೆಸಬೇಕಾಯಿತು’ ಎಂದು ಆ. ಸುರೇಶ್ ಹೇಳಿದರು.

‘ಹತ್ತು ಶವಗಳು ಆಗಲೇ ಸರದಿಯಲ್ಲಿ ಇದ್ದವು. ನಮ್ಮ ಶವ ಮೊದಲು ಮಾಡಬೇಕು ಎಂದು ಹೇಳಿದರು. ದುಡ್ಡಿಗಾಗಿ ನೀವು ರಾತ್ರಿಯಿಡೀ ಶವ ಸುಡುತ್ತಿದ್ದೀರಿ ಎಂದೂ ದೂರಿದರು’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

‘ನಾನು ಅಶ್ವತ್ಥನಾರಾಯಣ ಅವರ ಆಪ್ತ ಸಹಾಯಕ ಅಲ್ಲ. ಮಲ್ಲೇಶ್ವರದ ಬಿಜೆಪಿ ಕಾರ್ಯಕರ್ತನಷ್ಟೇ. ನಮ್ಮ ಪ್ರದೇಶದ ನಿವಾಸಿಗಳು ಬೇರೆ ಚಿತಾಗಾರಗಳತ್ತ ಅಲೆದಾಡಬೇಕಾಗಿದೆ. ಮಲ್ಲೇಶ್ವರದ ಸುತ್ತ–ಮುತ್ತ ವಾಸಿಸುತ್ತಿರುವವರಿಗೆ ಸಂಬಂಧಿಸಿದ ಶವಗಳನ್ನು ಮೊದಲು ದಹನ ಮಾಡಿ ಎಂದು ಹೇಳಿದ್ದೆ. ಆದರೆ, ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ’ ಎಂದು ಸಂತೋಷ್ ‘ಪ್ರಜಾವಾಣಿ’ಗೆ ತಿಳಿಸಿದರು.

ಕೊರೊನಾ ಕರ್ಫ್ಯೂ:434 ವಾಹನ ಜಪ್ತಿ

ಬೆಂಗಳೂರು: ಕೊರೊನಾ ಕರ್ಫ್ಯೂ ವೇಳೆ ಅನಗತ್ಯವಾಗಿ ಸಂಚರಿಸುತ್ತಿದ್ದ 434 ವಾಹನಗಳನ್ನು ಪೊಲೀಸರು ಬುಧವಾರ ಜಪ್ತಿ ಮಾಡಿದ್ದಾರೆ.

‘ನಿಯಮ ಉಲ್ಲಂಘಿಸಿ ಅನಗತ್ಯವಾಗಿ ನಗರದಾದ್ಯಂತ ಸಂಚರಿಸಿದ 385 ದ್ವಿಚಕ್ರ ವಾಹನ, 22 ತ್ರಿಚಕ್ರ ವಾಹನ, 14 ನಾಲ್ಕು ಚಕ್ರದ ವಾಹನ ಸೇರಿದಂತೆ ಒಟ್ಟು 434 ವಾಹನಗಳನ್ನು ಜಪ್ತಿ ಮಾಡಲಾಗಿದೆ. ಈ ವೇಳೆ ಎನ್‌ಡಿಎಂಎ ಕಾಯ್ದೆಯಡಿ 19 ಪ್ರಕರಣಗಳೂ ದಾಖಲಾಗಿವೆ’ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ಸುದ್ದಿ 2 ನಿಮಿಷ

‘ಕೋವಿಡ್ ಚಿಕಿತ್ಸೆಗೆ ದೆಹಲಿ ಮಾದರಿ ಆಸ್ಪತ್ರೆ ನಿರ್ಮಿಸಿ’

ಬೆಂಗಳೂರು: ‘ಕೋವಿಡ್ ಪೀಡಿತರಿಗೆ ಚಿಕಿತ್ಸೆ ಒದಗಿಸಲು ದೆಹಲಿ, ತಮಿಳುನಾಡಿನಲ್ಲಿ ಭಾರತೀಯ ಸೇನೆಯು ತುರ್ತಾಗಿ ಆಸ್ಪತ್ರೆ ಪ್ರಾರಂಭಿಸಿದಂತೆ ಬೆಂಗಳೂರಿನಲ್ಲಿಯೂ ವೈದ್ಯಕೀಯ ಸೇವೆಗೆ ಆಸ್ಪತ್ರೆಯನ್ನು ಅಣಿಗೊಳಿಸಬೇಕು’ ಎಂದು ಸಂಸದ ಪಿ.ಸಿ. ಮೋಹನ್ ಅವರು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮನವಿ ಮಾಡಿದ್ದಾರೆ.



ಈ ಸಂಬಂಧ ಅವರು ಪತ್ರ ಬರೆದಿದ್ದಾರೆ. ‘ಸೋಂಕಿತರ ಸಂಖ್ಯೆ ಏರಿಕೆ ಕಾಣುತ್ತಿರುವ ಕಾರಣ ಒಂದು ಸಾವಿರ ಹಾಸಿಗೆಯ ಆಸ್ಪತ್ರೆಯನ್ನು ಸೇನೆಯು ದೆಹಲಿಯಲ್ಲಿ ಪ್ರಾರಂಭಿಸಿದೆ. ಅದೇ ರೀತಿ, ತಮಿಳುನಾಡಿನಲ್ಲಿ ಕೂಡ ನಿರ್ಮಿಸಿದೆ. ಇದೇ ರೀತಿ ಕರ್ನಾಟಕದಲ್ಲಿ ಕೂಡ ಕೋವಿಡ್ ಚಿಕಿತ್ಸೆಗೆ ಕೇಂದ್ರ ನಿರ್ಮಿಸಬೇಕು. ಬೆಂಗಳೂರಿನಲ್ಲಿ ಕೂಡ ಕಮಾಂಡ್ ಆಸ್ಪತ್ರೆ ಸೇರಿದಂತೆ ಅನೇಕ ರಕ್ಷಣಾ ಸಂಸ್ಥೆಗಳಿವೆ. ಇಲ್ಲಿಯೂ ಕೋವಿಡ್ ಪೀಡಿತರಿಗೆ ಚಿಕಿತ್ಸೆಗೆ ವ್ಯವಸ್ಥೆ ಮಾಡಬೇಕು’ ಎಂದು ಮನವಿ ಮಾಡಿಕೊಂಡಿದ್ದಾರೆ.

ಪಲ್ಲಕ್ಕಿ ಮೆರವಣಿಗೆ: ಸ್ವಾಮೀಜಿ ವಿರುದ್ಧ ಪ್ರಕರಣ ದಾಖಲು

ವಿಜಯಪುರ: ಕರ್ಫ್ಯೂ ನಡುವೆಯೂ ಜಿಲ್ಲೆಯ ಕೊಲ್ಹಾರ ಪಟ್ಟಣದ ದಿಗಂಬರೇಶ್ವರ ಸಂಸ್ಥಾನ ಮಠದ ಪೀಠಾಧಿಪತಿ ಕಲ್ಲಿನಾಥ ಸ್ವಾಮೀಜಿ ದವನದ ಹುಣ್ಣಿಮೆ ಅಂಗವಾಗಿ ಬುಧವಾರ ಪಲ್ಲಕ್ಕಿಯಲ್ಲಿ ಕುಳಿತು ಭಕ್ತರಿಂದ ಮೆರವಣಿಗೆ ಮಾಡಿಸಿಕೊಂಡಿದ್ದಾರೆ. ಸ್ವಾಮೀಜಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಕೊಲ್ಹಾರ ತಹಶೀಲ್ದಾರ್ ಎಸ್.ಡಿ. ಮುರಾಳ ತಿಳಿಸಿದ್ದಾರೆ.

ತಹಶೀಲ್ದಾರ್ ಹಾಗೂ ಪೊಲೀಸರು ಪಲ್ಲಕ್ಕಿ ಮೆರವಣಿಗೆ, ಜಾತ್ರೆ ನಡೆಸದಂತೆ ಸೂಚಿಸಿದ್ದರು. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಭಕ್ತರು ಮಾಸ್ಕ್ ಸಹ ಧರಿಸಿರಲಿಲ್ಲ. ‘ಕಲ್ಲಿನಾಥ ಸ್ವಾಮೀಜಿಗೆ ಪಲ್ಲಕ್ಕಿ ಉತ್ಸವ, ಮೆರವಣಿಗೆ ನಡೆಸದಂತೆ ಸೂಚಿಸಲಾಗಿತ್ತು. ನಿಯಮ ಮೀರಿ ನಡೆಸಿರುವುದು ಗಮನಕ್ಕೆ ಬಂದಿದೆ. ಸ್ವಾಮೀಜಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಎಸ್.ಡಿ.ಮುರಾಳ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕುಶ’ ಆನೆ ಮತ್ತೆ ಕಾಡಿಗೆ

ಬೆಂಗಳೂರು: ಅರಣ್ಯ ಇಲಾಖೆ ಸೆರೆ ಹಿಡಿದಿದ್ದ ದುಬಾರೆ ಅರಣ್ಯ ಪ್ರದೇಶದ ಆನೆ ‘ಕುಶ’ನನ್ನು ಮತ್ತೆ ಕಾಡಿಗೆ ಬಿಡುವಂತೆ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಸೂಚನೆ ನೀಡಿದ್ದಾರೆ.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಬುಧವಾರ ಈ ಕುರಿತು ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ಸಭೆ ತೀರ್ಮಾನ ತೆಗೆದುಕೊಂಡರು.

ವರ್ಷದಿಂದ ತಪ್ಪಿಸಿಕೊಂಡಿದ್ದ ‘ಕುಶ’ನನ್ನು ಸೆರೆ ಹಿಡಿಯಲಾಗಿತ್ತು. ಈ ಆನೆಗೆ ಅರಣ್ಯ ಇಲಾಖೆ ಸಿಬ್ಬಂದಿ ಹಿಂಸೆ ಆಗುತ್ತಿದೆ ಎಂದು ವನ್ಯಜೀವಿ ಪ್ರಿಯರು ಆಕ್ಷೇಪ ವ್ಯಕ್ತಪಡಿಸಿದ್ದರು. ‘ಆನೆಗೆ ಯಾವುದೇ ರೀತಿಯಲ್ಲಿ ಹಿಂಸೆ ನೀಡಿಲ್ಲ’ ಎಂದು ಅಧಿಕಾರಿಗಳು ಸಭೆಯಲ್ಲಿ ಸಚಿವರಿಗೆ ಮಾಹಿತಿ ನೀಡಿದರು.

ಕುಶನಿಗೆ ರೇಡಿಯೊ ಕಾಲರ್ ಅಳವಡಿಸಿ ಸೂಕ್ತ ಸ್ಥಳ ನಿಗದಿ ಮಾಡಿ ಮುನ್ನೆಚ್ಚರಿಕೆ ತೆಗೆದುಕೊಂಡು ಬಳಿಕವೇ ಕಾಡಿಗೆ ಬಿಡುಗಡೆ ಮಾಡುವಂತೆ ಲಿಂಬಾವಳಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆನೆಗಳು ಮರಳಿ ವಶಕ್ಕೆ: ದುಬಾರೆ ಸಮೀಪ ಪ್ರಜ್ಞಾ ಚೌಟ ಎಂಬುವರು ಆನೆಗಳನ್ನು ತಮ್ಮ ಸುಪರ್ದಿಯಲ್ಲಿ ಇಟ್ಟುಕೊಂಡು ಪೋಷಿಸುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚೆಗೆ ಬಂದಿತು. ಚೌಟ ಅವರ ಸುಪರ್ದಿಯಲ್ಲಿರುವ ಆನೆಗಳನ್ನು ಮರಳಿ ಇಲಾಖೆ ವಶಕ್ಕೆ ತೆಗೆದುಕೊಳ್ಳುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಬಾಗಲಗುಂಟೆಯಲ್ಲಿ ಕೋವಿಡ್ ಆರೈಕೆ ಕೇಂದ್ರಕ್ಕೆ ಚಾಲನೆ

‘ಸಂಪರ್ಕಕ್ಕೆ ಸಿಗದ 3 ಸಾವಿರ ಸೋಂಕಿತರು’

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: ‘ಕೋವಿಡ್ ದೃಢಪಟ್ಟವರು ಮೊಬೈಲ್ ಸ್ವಿಚ್ ಆಫ್ ಮಾಡಿಕೊಳ್ಳುತ್ತಿದ್ದು, ಅಂಥವರನ್ನ ಹುಡುಕುವುದು ಮತ್ತು ಸಂಪರ್ಕಿಸುವುದು ಕಷ್ಟವಾಗುತ್ತಿದೆ. ಸುಮಾರು 3 ಸಾವಿರ ಜನರು ಹೀಗೆ ಸಂಪರ್ಕಕ್ಕೆ ಸಿಗದೆ ತಪ್ಪಿಸಿಕೊಂಡಿದ್ದಾರೆ’ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಬಾಗಲಗುಂಟೆಯ ಮಂಜುನಾಥನಗರದಲ್ಲಿರುವ ಕಾರ್ಮಿಕ ಸಮುದಾಯ ಭವನದಲ್ಲಿ ಬಿಬಿಎಂಪಿ ನಿರ್ಮಿಸಿರುವ 130 ಹಾಸಿಗೆ ಸಾಮರ್ಥ್ಯದ ಕೋವಿಡ್ ಕೇರ್ ಸೆಂಟರ್ ಉದ್ಘಾಟಿಸಿ ಮಾತನಾಡಿದರು.

‘ಹೀಗೆ ಸಂಪರ್ಕಕ್ಕೆ ಸಿಗದವರ ಟ್ರಾಕಿಂಗ್ ಅನ್ನು ಪೊಲೀಸರು ಮಾಡುತ್ತಿದ್ದಾರೆ. ತೀರಾ ಉಸಿರಾಟದ ಸಮಸ್ಯೆ ಆದಾಗ ಆಸ್ಪತ್ರೆಗಳಲ್ಲಿ ಐಸಿಯು ಹಾಸಿಗೆ ಬೇಕೆಂದು ಬರುತ್ತಿದ್ದಾರೆ. ಮುಂಚಿತವಾಗಿಯೇ ಕೋವಿಡ್ ಪಾಸಿಟಿವ್ ಎಂದು ತಿಳಿದ ತಕ್ಷಣ ಐಸೋಲೇಟ್ ಆಗಿ ಔಷಧ, ಮಾತ್ರೆಗಳನ್ನು ಸರಿಯಾಗಿ ತೆಗೆದುಕೊಂಡಾಗ ಕೋವಿಡ್ ಸೋಂಕು ಹರಡುವುದನ್ನು ತಡೆಯಬಹುದಾಗಿದೆ’ ಎಂದರು.

‘ಈ ಕೇಂದ್ರದಲ್ಲಿ 130 ಹಾಸಿಗೆಗಳ ವ್ಯವಸ್ಥೆ ಇದ್ದು, ಇಲ್ಲಿಗೆ ಬರುವ ರೋಗಿಗಳಿಗೆ ಅತ್ಯುತ್ತಮ ಸೌಲಭ್ಯಗಳ ವ್ಯವಸ್ಥೆ ಮಾಡಲಾಗಿದೆ. ಶೌಚಾಲಯ, ಸ್ನಾನದ ಗೃಹಗಳು, ಊಟದ ವ್ಯವಸ್ಥೆ ಇರುತ್ತದೆ’ ಎಂದು ಹೇಳಿದರು.

‘ಸ್ಥಳೀಯ ಶಾಸಕ ಮಂಜುನಾಥ್ ಅವರು 20 ಐಸಿಯು ಬೆಡ್ ವ್ಯವಸ್ಥೆ ಮಾಡುವಂತೆ ಕೋರಿದ್ದಾರೆ. ಅದನ್ನು ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದರು.

ಶಾಸಕ ಆರ್.ಮಂಜುನಾಥ್ ‘ಈ ಭಾಗದಲ್ಲಿ ಕಾರ್ಮಿಕರು ಹಾಗೂ ಮಧ್ಯಮವರ್ಗ ಹೆಚ್ಚಾಗಿ ವಾಸಿಸುತ್ತಿದ್ದು ಕೊರೊನಾ ಸೋಂಕಿತರು ಚಿಕಿತ್ಸೆ ಪಡೆಯುವ ಮೂಲಕ ನೀವು ಮತ್ತು ನಿಮ್ಮ ಕುಟುಂಬ ಸುರಕ್ಷಿತವಾಗಿ ನೋಡಿಕೊಳ್ಳಬೇಕು’ ಎಂದರು.



ಕೋವಿಡ್ ಆರೈಕೆ ಕೇಂದ್ರವನ್ನು ಕಂದಾಯ ಸಚಿವ ಆರ್. ಅಶೋಕ ಉದ್ಘಾಟಿಸಿ ಪರಿಶೀಲಿಸಿದರು. ಶಾಸಕ ಆರ್. ಮಂಜುನಾಥ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ದಾಸರಹಳ್ಳಿ ವಲಯದ ಆಯುಕ್ತ ರವೀಂದ್ರ, ಜಂಟಿ ಆಯುಕ್ತ ನರಸಿಂಹಮೂರ್ತಿ ಇದ್ದರು.

ಆಸ್ಪತ್ರೆಯಿಂದ ಹಾರಿ ಸೋಂಕಿತ ಆತ್ಮಹತ್ಯೆ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆಯ ಕಟ್ಟಡದಿಂದ ಹಾರಿ ಕೋವಿಡ್ ಸೋಂಕಿತರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತರನ್ನು ಬೇಗೂರಿನ ಹೊಂಗಸಂದ್ರದ ನಿವಾಸಿ ಕುಮಾರ್ (27) ಎಂದು ಗುರುತಿಸಲಾಗಿದೆ. ಏ.25ರಂದು ಇವರಿಗೆ ಕೋವಿಡ್ ದೃಢವಾಗಿತ್ತು. ಹಾಗಾಗಿ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು. ಬುಧವಾರ ಮಧ್ಯಾಹ್ನ ಕಟ್ಟಡದಿಂದ ಹಾರಿ ಮೃತಪಟ್ಟಿದ್ದಾರೆ

ನೀರು ಪೂರೈಕೆಯಲ್ಲಿ ವ್ಯತ್ಯಯ ನಾಳೆ

ಬೆಂಗಳೂರು: ನಗರದ ಮಾಗಡಿ ರಸ್ತೆಯಲ್ಲಿ 600 ಎಂ.ಎಂ ವ್ಯಾಸದ ನೀರಿನ ಕೊಳವೆಯನ್ನು ಬದಲಾಯಿಸುವ ಕಾರ್ಯವನ್ನು ಕೈಗೆತ್ತಿಕೊಂಡಿರುವುದರಿಂದ ಇದೇ 30ರಂದು ಈ ಕೆಳಕಂಡ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗುವುದು ಎಂದು ಜಲಮಂಡಳಿ ಹೇಳಿದೆ.

ಜೇಡರಹಳ್ಳಿ, ರಾಜಾಜಿನಗರ, ಶಿವನಗರ, ಮಂಜುನಾಥನಗರ ಮಾಗಡಿ ರಸ್ತೆ, ಮಹಾಗಣಪತಿ ನಗರ, ಚೋಳರ ಪಾಳ್ಯ, ಎನ್.ಆರ್ ಗಾರ್ಡನ್, ಕೆ.ಪಿ.ಅಗ್ರಹಾರ, ಭುವನೇಶ್ವರಿನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಆಸ್ಪತ್ರೆಗಳ ಮುಖ್ಯಸ್ಥರಿಗೆ ಸೂಚಿಸಿದ ವಿ. ಸೋಮಣ್ಣ

‘ಕೋವಿಡ್: ಶುಶ್ರೂಷೆಗೆ ಆದ್ಯತೆ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಪೀಡಿತರ ಶುಶ್ರೂಷೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಸೋಂಕಿತರಿಗೆ ಗುಣಮಟ್ಟದ ವೈದ್ಯಕೀಯ ಸೇವೆಯನ್ನು ಒದಗಿಸಬೇಕು’ ಎಂದು ಬೆಂಗಳೂರು ನಗರ ಪೂರ್ವ ವಲಯದ ಕೋವಿಡ್ ಉಸ್ತುವಾರಿ ಹಾಗೂ ವಸತಿ ಸಚಿವ ವಿ. ಸೋಮಣ್ಣ ಅವರು ಆಸ್ಪತ್ರೆಗಳಿಗೆ ಸೂಚಿಸಿದರು.

ಶಿವಾಜಿನಗರದ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭೇಟಿ ನೀಡಿದ ಅವರು, ಕೋವಿಡ್ ಪೀಡಿತರಿಗೆ ನೀಡುತ್ತಿರುವ ಚಿಕಿತ್ಸೆ, ಆಮ್ಲಜನಕ ಸರಬರಾಜು ಹಾಗೂ ತೆಗೆದುಕೊಳ್ಳಲಾಗುತ್ತಿರುವ ಕ್ರಮಗಳ ಕುರಿತು ಪರಿಶೀಲನೆ ನಡೆಸಿದರು. ಈ ವೇಳೆ ಆಸ್ಪತ್ರೆಯಲ್ಲಿ ವೈದ್ಯರು ಹಾಜರಿರಲಿಲ್ಲ. ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಬಳಿಕ ದಂಡು ರೈಲ್ವೆ ನಿಲ್ದಾಣದ ಬಳಿ ಇರುವ ಚರ್ಚ್ ಆಫ್ ಸೌತ್ ಇಂಡಿಯಾ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ದೊಮ್ಮಲೂರಿನ ಮಾತೆ ಅಕ್ಕಮಹಾದೇವಿ ಭವನದಲ್ಲಿ ಪ್ರಾರಂಭಿಸಿರುವ ವಾರ್ ರೂಮ್‌ಗೆ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಸಂಸದ ಪಿ.ಸಿ. ಮೋಹನ್, ಶಾಸಕರಾದ ಎನ್.ಎ. ಹ್ಯಾರೀಸ್, ಸಿ. ರಘು, ವಸತಿ ಇಲಾಖೆಯ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ಪಾಲಿಕೆಯ ಜಂಟಿ ಆಯುಕ್ತೆ ಪಲ್ಲವಿ ಇದ್ದರು.



ಆಸ್ಪತ್ರೆಗೆ ಭೇಟಿ ನೀಡಿದ ಸಚಿವ ವಿ. ಸೋಮಣ್ಣ ಅವರು ವೈದ್ಯಾಧಿಕಾರಿಗಳಿಂದ ಕೋವಿಡ್ ಚಿಕಿತ್ಸೆ ಬಗ್ಗೆ ಮಾಹಿತಿ ಪಡೆದುಕೊಂಡರು.

‘ಕೋವಿಡ್: ಉಕ್ಕಿನ ಉತ್ಪನ್ನಕ್ಕಿಂತ ಜೀವ ಮುಖ್ಯ’

ಬೆಂಗಳೂರು: ‘ರಾಜ್ಯದ ಆಸ್ಪತ್ರೆಗಳಿಗೆ ಈಗ ತುರ್ತಾಗಿ ಆಮ್ಲಜನಕದ ಅಗತ್ಯವಿದೆ. ಹಾಗಾಗಿ, ಉಕ್ಕು ಉತ್ಪನ್ನ ತಯಾರಿಕಾ ಕಂಪನಿಗಳು ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಕೆ ಮಾಡುವ ಮೂಲಕ ಕೋವಿಡ್ ವಿರುದ್ಧದ ಹೋರಾಟ ಜಯಿಸಲು ಸಹಕರಿಸಬೇಕು’ ಎಂದು ಕ್ಯಾನ್ಸರ್ ತಜ್ಞ ಡಾ. ವಿಶಾಲ್ ರಾವ್ ಮನವಿ ಮಾಡಿದ್ದಾರೆ.



ಜೆಎಸ್‌ಡಬ್ಲ್ಯು, ಕಲ್ಯಾಣಿ ಸ್ಟೀಲ್ ಸೇರಿದಂತೆ ವಿವಿಧ ಉಕ್ಕು ಉತ್ಪನ್ನ ತಯಾರಿಕಾ ಕಂಪನಿಗಳು, ಲಾಜಿಸ್ಟಿಕ್ ಕಂಪನಿಗಳಿಗೆ ಅವರು ಮನವಿ ಮಾಡಿಕೊಂಡಿದ್ದು, ‘ಕೋವಿಡ್‌ನಿಂದ ಅಮೂಲ್ಯವಾದ ಜೀವ ಉಳಿಸಬೇಕಿದೆ. ಈಗ ಸ್ಟೇನ್‌ಲೆಸ್ ಸ್ಟೀಲ್‌ಗಳಿಗಿಂತ ಆಮ್ಲಜನಕ ಅತ್ಯಗತ್ಯ. ಸ್ಟೀಲ್ ಉತ್ಪನ್ನಗಳು ಮನೆಗಳ ನಿರ್ಮಾಣಕ್ಕೆ ಮತ್ತು ನಿರ್ವಹಿಸಲು ಸಹಕಾರಿಯಾಗಿವೆ. ಆದರೆ, ಈಗ ಜೀವಗಳನ್ನು ಉಳಿಸುವ ಆಮ್ಲಜನಕ ಪೂರೈಕೆಗೆ ನೆರವಾದಲ್ಲಿ ಕಟ್ಟದ ಮನೆಗಳ ಪುನರ್ ನಿರ್ಮಾಣ ಸಾಧ್ಯವಾಗುತ್ತದೆ’ ಎಂದು ಹೇಳಿದ್ದಾರೆ.

‘ರಾಜ್ಯದ ಅನೇಕ ಆಸ್ಪತ್ರೆಗಳು ಆಮ್ಲಜನಕದ ಕೊರತೆ ಎದುರಿಸುತ್ತಿವೆ. ಬಹುತೇಕ ಆಸ್ಪತ್ರೆಗಳಲ್ಲಿ ಒಂದು ದಿನಕ್ಕೆ ಆಗುವಷ್ಟು ಆಮ್ಲಜನಕಗಳು ಮಾತ್ರ ಇವೆ. ಕೆಲ ಆಸ್ಪತ್ರೆಗಳು ಸೇವೆ ನೀಡಲಾಗದೆಯೇ ಕೈಚೆಲ್ಲುತ್ತಿವೆ. ತಯಾರಕರು ಮತ್ತು ಪೂರೈಕೆದಾರರು ಬಾಗಿಲು ಮುಚ್ಚುತ್ತಿದ್ದಾರೆ. ಅಸ್ತಿತ್ವದಲ್ಲಿರುವ ಘಟಕ ವಿಸ್ತರಿಸಲು ಅಥವಾ ಹೊಸದಾಗಿ ಘಟಕ ಪ್ರಾರಂಭಿಸಲು ಅಲ್ಪಾವಧಿಯಲ್ಲಿ ಸಾಧ್ಯವಿಲ್ಲ. ಆದ್ದರಿಂದ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಟ ನಡೆಸಲು ನಿಮ್ಮ ಸಹಕಾರ ಅಗತ್ಯ’ ಎಂದು ಮನವಿ ಮಾಡಿದ್ದಾರೆ.

ಮೂವರು ಸರಗಳ್ಳರ ಬಂಧನ

ಬೆಂಗಳೂರು: ಚಿನ್ನಾಭರಣ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ರಾಮಮೂರ್ತಿನಗರ ಪೊಲೀಸರು ಬಂಧಿಸಿದ್ದು, ಆರೋಪಿಗಳಿಂದ ₹5 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

ಹೊಸಕೋಟೆ ತಾಲ್ಲೂಕಿನ ನಡವತ್ತಿಯ ಶಿವಕುಮಾರ್ (23), ಆಡುಗೋಡಿಯ ಅಪ್ಪಯ್ಯ (32) ಹಾಗೂ ಗುಣಶೇಖರ್ (34) ಬಂಧಿತರು.

‘ಆರೋಪಿ ಅಪ್ಪಯ್ಯ ಕೆಲ ತಿಂಗಳ ಹಿಂದೆ ಮದುವೆಯಾಗಿದ್ದ. ಇದಕ್ಕಾಗಿ ಸಾಲ ಮಾಡಿಕೊಂಡಿದ್ದ. ಸಾಲ ತೀರಿಸುವ ಸಲುವಾಗಿ ಕಳ್ಳತನಕ್ಕೆ ಇಳಿದಿದ್ದ. ಈ ವೇಳೆ ಜೈಲು ಸೇರಿದ್ದಾಗ ಶಿವಕುಮಾರ್ ಹಾಗೂ ಗುಣಶೇಖರ್ ಪರಿಚಯವಾಗಿತ್ತು. ಹೊರ ಬಂದ ನಂತರ ತಂಡ ಕಟ್ಟಿಕೊಂಡು ಸರಗಳ್ಳತನ ನಡೆಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

₹91 ಲಕ್ಷ ಮೌಲ್ಯದ ಗಾಂಜಾ ಜಪ್ತಿ; ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಆಂಧ್ರಪ್ರದೇಶದಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡಲು ಸಜ್ಜಾಗಿದ್ದ ಅಂತರರಾಜ್ಯ ಆರೋಪಿಯನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ ₹91.30 ಲಕ್ಷ ಬೆಲೆ ಬಾಳುವ 104 ಕೆ.ಜಿ.ಜಪ್ತಿ ಮಾಡಿದ್ದಾರೆ.

ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಕಲ್ಲಪಲ್ಲಿ ನಾಗೇಂದ್ರ (39) ಬಂಧಿತ ಆರೋಪಿ.

‘ಈತ ಆಂಧ್ರದ ವಿಶಾಖಪಟ್ಟಣ ಜಿಲ್ಲೆಯ ಚಿಂತಪಲ್ಲಿ ಅರಣ್ಯದಿಂದ ಗಾಂಜಾ ತರಿಸಿಕೊಳ್ಳುತ್ತಿದ್ದ. ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿಯಿಂದ ಲಾಕ್‌ಡೌನ್ ಜಾರಿ ಮಾಡಿರುವುದನ್ನು ಗಮನಿಸಿ, ಈ ವೇಳೆ ಗಾಂಜಾ ಮಾರಾಟದ ಮೂಲಕ ಹೆಚ್ಚು ಹಣ ಸಂಪಾದಿಸಬೇಕೆಂಬ ಉದ್ದೇಶ ಹೊಂದಿದ್ದ’.

‘ಎಲೆಕ್ಟ್ರಾನಿಕ್ ಸಿಟಿ ಠಾಣಾ ವ್ಯಾಪ್ತಿಯಲ್ಲಿ ಕಾರಿನಲ್ಲಿ ಬಂದು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಸ್ಥಳೀಯರಿಂದ ಮಾಹಿತಿ ಬಂದಿತ್ತು. ಇದರ ಅನ್ವಯ ದಾಳಿ ನಡೆಸಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ಪೊಲೀಸರು ತಿಳಿಸಿದರು.

ನಿಧನ ವಾರ್ತೆ

ಟಿ.ಜಿ.ಪ್ರಭುಕುಮಾರ್

ಬೆಂಗಳೂರು: ರಾಜಾಜಿನಗರದ ನಿವಾಸಿ ಟಿ.ಜಿ.ಪ್ರಭು ಕುಮಾರ್ (73) ಅನಾರೋಗ್ಯ ಸಮಸ್ಯೆಯಿಂದ ಬುಧವಾರ ನಿಧನರಾದರು.



ತುಮಕೂರು ಜಿಲ್ಲೆಯವರಾದ ಇವರು ಬೆಂಗಳೂರಿನಲ್ಲಿ ನೆಲೆಸಿದ್ದರು. ಇವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಬೆಂಗಳೂರಿನಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿಬಿಎಂಪಿ ಸಿಬ್ಬಂದಿ ವಿನಾಯಕ


ಬೆಂಗಳೂರು: ಬಿಬಿಎಂಪಿ ಕಸ ನಿರ್ವಹಣೆ ವಿಭಾಗದ ವ್ಯವಸ್ಥಾಪಕರಾಗಿದ್ದ ವಿಜಯನಗರದ ನಿವಾಸಿ ವಿನಾಯಕ (41) ಅವರು ಕೋವಿಡ್‌ನಿಂದ ಬುಧವಾರ ಮೃತಪಟ್ಟಿದ್ದಾರೆ.



ಬಿಬಿಎಂಪಿ ಸೇವೆಗೆ 2008ರಲ್ಲಿ ಸೇರಿದ್ದ ವಿನಾಯಕ ಅವರು ಕಸ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ ಡಿ.ರಂದೀಪ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ‘ವಿನಾಯಕ ಅವರಿಗೆ ಕೋವಿಡ್ ದೃಢಪಟ್ಟಿತ್ತು. ಚಿಕಿತ್ಸೆ ಫಲಿಸದೇ ಅವರು ಕೊನೆಯುಸಿರೆಳೆದರು’ ಎಂದು ಡಿ.ರಂದೀಪ್ ತಿಳಿಸಿದರು. ವಿನಾಯಕ ಅವರಿಗೆ ಪತ್ನಿ ಮತ್ತು ಮಗ ಇದ್ದಾರೆ.

ಎಸ್.ಶಂಕರ್

ಬೆಂಗಳೂರು: ‘ಪ್ರಜಾವಾಣಿ’ಯ ನಿವೃತ್ತ ಉದ್ಯೋಗಿ ಎಸ್.ಶಂಕರ್ (79) ಅವರು ಅನಾರೋಗ್ಯದಿಂದ ಕೋರಮಂಗಲದ ನಿವಾಸದಲ್ಲಿ ಬುಧವಾರ ನಿಧನರಾದರು.ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಗುರುವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ.




ಸಕ್ಕರೆ ಕಾರ್ಖಾನೆಗಳಿಂದಲೂ ಆಮ್ಲಜನಕ ಉತ್ಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳಿಗೆ ವೈದ್ಯಕೀಯ ಆಮ್ಲಜನಕ ಕೊರತೆ ಉಂಟಾಗಿರುವ ಬೆನ್ನಲ್ಲೇ ನೆರೆಯ ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಯೊಂದು ವೈದ್ಯಕೀಯ ಆಮ್ಲಜನಕ ಉತ್ಪಾದನೆಗೆ ಮುಂದಾಗಿದ್ದು, ಕರ್ನಾಟಕದಲ್ಲೂ ಇಂತಹ ಪ್ರಯತ್ನ ಆರಂಭಿಸಬಹುದೇ ಎಂಬ ಚರ್ಚೆ ಶುರುವಾಗಿದೆ.

ರಾಜ್ಯದಲ್ಲಿ 70 ಕ್ಕೂ ಹೆಚ್ಚು ಸಕ್ಕರೆ ಕಾರ್ಖಾನೆಗಳಿವೆ. ಕೆಲವು ಕಾರ್ಖಾನೆಗಳಾದರೂ ವೈದ್ಯಕೀಯ ಆಮ್ಲಜನಕ ತಯಾರಿಸಿದರೆ ಕೋವಿಡ್‌ಗೆ ನಿಯಂತ್ರಣಕ್ಕೆ ಸಹಕಾರಿ ಆಗಬಹುದು.

ಲಸಿಕೆ ದರ ₹100 ಕಡಿಮೆಗೊಳಿಸಿದ ಸೀರಂ



ನವದೆಹಲಿ: ರಾಜ್ಯ ಸರ್ಕಾರಗಳಿಗೆ ನಿಗದಿಪಡಿಸಲಾದ 'ಕೋವಿಶೀಲ್ಡ್' ಲಸಿಕೆಯ ಪ್ರತಿ ಡೋಸ್‌ನ ದರವನ್ನು ₹100 ಕಡಿತಗೊಳಿಸಿರುವುದಾಗಿ ಸೀರಂ ಇನ್‌ಸ್ಟಿಟ್ಯೂಟ್ ಬುಧವಾರ ನಿರ್ಧರಿಸಿದೆ. 'ಲಸಿಕೆಯ ಪ್ರತಿ ಡೋಸ್‌ಗೆ ರಾಜ್ಯಗಳಿಗೆ ₹400 ನಿಗದಿಪಡಿಸಲಾಗಿತ್ತು. ಈಗ ಅದನ್ನು ₹300ಕ್ಕೆ ಇಳಿಸಲಾಗಿದೆ. ಈ ದರವು ತಕ್ಷಣದಿಂದಲೇ ಜಾರಿಯಾಗಲಿದೆ' ಎಂದು ಸೀರಂ ಸಿಇಒ ಅದಾರ್ ಪೂನಾವಾಲಾ ತಿಳಿಸಿದ್ದಾರೆ.

ಇದರಿಂದ ಸಕ್ಕರೆ ಕಾರ್ಖಾನೆಯ ಸುತ್ತಮುತ್ತಲಿನ ಪಟ್ಟಣಗಳು ಮತ್ತು ನಗರಗಳಿಗೆ ಆಮ್ಲಜನಕವನ್ನು ಪೂರೈಸಬಹುದು. ಸಾಗಣೆಯ ಸಮಸ್ಯೆಯೂ ಇರುವುದಿಲ್ಲ ಎಂಬ ಅಭಿಪ್ರಾಯವೂ ಇದೆ.

ಮಹಾರಾಷ್ಟ್ರದ ಉಸ್ಮಾನಾಬಾದ್‌ನಲ್ಲಿ ಧಾರಾಶಿವ ಶುಗರ್ ಮಿಲ್ ವೈದ್ಯಕೀಯ ಗುಣಮಟ್ಟದ ಆಮ್ಲಜನಕ ಉತ್ಪಾದನೆಗೆ ಕೈಹಾಕಿದ್ದು ದಿನಕ್ಕೆ 20 ಟನ್ ಆಮ್ಲಜನಕವನ್ನು ಉತ್ಪಾದಿಸಲು ಉದ್ದೇಶಿಸಿದೆ. ಇದಕ್ಕಾಗಿ ಸಕ್ಕರೆ ಕಾರ್ಖಾನೆ ತನ್ನ ಎಥೆನಾಲ್ ಘಟಕವನ್ನು ಮಾರ್ಪಾಡು ಮಾಡಿ ಈ ಕಾರ್ಯಕ್ಕೆ ಕೈ ಹಾಕಿದೆ.

ವಾತಾವರಣದಲ್ಲಿ ಬಿಡುಗಡೆಯಾಗುವ ಆಮ್ಲಜನಕವನ್ನು ಸೆಳೆದು ಸಂಸ್ಕರಿಸಿ ವೈದ್ಯಕೀಯ ಗುಣಮಟ್ಟದ ಆಮ್ಲಜನಕವನ್ನಾಗಿ ಪರಿವರ್ತಿಸುತ್ತದೆ. ಸಾಮಾನ್ಯ ಆಮ್ಲಜನಕವನ್ನು ವೈದ್ಯಕೀಯ ಆಮ್ಲಜನಕವಾಗಿ ಪರಿವರ್ತಿಸುವ ಸಂಸ್ಕರಣ ಸಾಧನವನ್ನು ಅಳವಡಿಸಲಾಗಿದೆ. ಈ ಪ್ರಯತ್ನ ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆ ವಲಯದಲ್ಲಿ ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಿದೆ.

ವೈದ್ಯಕೀಯ ಆಮ್ಲಜನಕ ಇಂದು ಅತಿ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಹೊಸ ತಂತ್ರಜ್ಞಾನ ಸ್ವಾಗತಿಸುತ್ತೇವೆ. ಧಾರಾಶಿವ ಶುಗರ್ ಮಿಲ್ ಆಮ್ಲಜನಕ ಉತ್ಪಾದಿಸುವಲ್ಲಿ ಯಶಸ್ವಿಯಾದರೆ, ಮುಂದೆ ಹಲವು ಕಾರ್ಖಾನೆ ಆ ಮಾದರಿಯನ್ನು ಅನುಸರಿಸಬಹುದು ಎಂದು ಕೆಲವು ಸಕ್ಕರೆ ಕಾರ್ಖಾನೆಗಳು ಅಭಿಪ್ರಾಯಪಟ್ಟಿವೆ.

ರಾಜ್ಯದ ಕೆಲವು ಸಕ್ಕರೆ ಕಾರ್ಖಾನೆಗಳ ಆಡಳಿತ ವರ್ಗವನ್ನು ಸಂಪರ್ಕಿಸಿದಾಗ, 'ಇದೊಂದು ಹೊಸ ಪರಿಕಲ್ಪನೆ. ಅಲ್ಲಿಯ ಮಾಹಿತಿಯನ್ನು ತರಿಸಿಕೊಂಡು ಆ ಬಳಿಕ ಚಿಂತನೆ ನಡೆಸಲಾಗುವುದು. ಸರ್ಕಾರ ನೆರವಿಗೆ ಬಂದರೆ ಅನುಕೂಲ ಆಗುವುದಾದರೆ ಪರಿಶೀಲಿಸಬಹುದು ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಎನ್‌ಎಸ್‌ಯುಐನಿಂದ ಆಹಾರ ಪೂರೈಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ನಿಯಂತ್ರಿಸಲು ರಾಜ್ಯ ಸರ್ಕಾರ ಹೇರಿರುವ 14 ದಿನಗಳ ಲಾಕ್‌ಡೌನ್ ಮಾದರಿಯ ಕರ್ಫ್ಯೂನಿಂದ ಸಂಕಷ್ಟಕ್ಕೀಡಾಗುವವರ ನೆರವಿಗೆ ಎನ್‌ಎಸ್‌ಯುಐ ಧಾವಿಸಿದೆ.

ಈ ಉದ್ದೇಶಕ್ಕಾಗಿ ಎನ್‌ಎಸ್‌ಯುಐ ರಾಜ್ಯ ಉಪಾಧ್ಯಕ್ಷ ಜಯೇಂದ್ರ ಎಸ್. ಮತ್ತು ಸಂಘಟನೆಯ ಇತರ ಪದಾಧಿಕಾರಿಗಳು, ನಗರದಲ್ಲಿರುವ ಎನ್‌ಎಸ್‌ಯುಐ ಕಚೇರಿಯಲ್ಲಿ ಬುಧವಾರ ಅಡುಗೆ ಕೋಣೆ ಆರಂಭಿಸಿದ್ದಾರೆ.

ಆಸ್ಪತ್ರೆಗಳು, ಆಂಬುಲೆನ್ಸ್‌ಗಳು, ಚಿತಾಗಾರಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ ಸೇರಿದಂತೆ ಕೋವಿಡ್ ಕಾಯಿಲೆಯ ಮುಂಚೂಣಿಯಲ್ಲಿ ತೊಡಗಿಸಿಕೊಂಡವರಿಗೆ ಇಲ್ಲಿಂದ ಆಹಾರ ಪೂರೈಸಲು ಅವರು ತೀರ್ಮಾನಿಸಿದ್ದಾರೆ.



ಎನ್‌ಎಸ್‌ಯುಐ ಕಚೇರಿಯಿಂದ ಆಹಾರ ಪೂರೈಕೆ

ಬೆಡ್ ನೀಡಿ ಪ್ರಾಣತ್ಯಾಗ ಮಾಡಿದ ಹಿರಿಯ ಜೀವ

ನಾಗ್ಪುರ: 'ನನಗೀಗ 85 ವರ್ಷ ವಯಸ್ಸು. ನಾನಂತೂ ಜೀವನವನ್ನು ಪೂರ್ತಿಯಾಗಿ ನೋಡಿದ್ದೇನೆ, ಅನುಭವಿಸಿದ್ದೇನೆ. ಇಷ್ಟು ಸಾಕು. ಆದರೆ, ಆ ವ್ಯಕ್ತಿ ಸತ್ತರೆ ಮಕ್ಕಳು ಅನಾಥರಾಗುತ್ತಾರೆ. ಅವರ ಜೀವ ಉಳಿಸುವುದು ನನ್ನ ಕರ್ತವ್ಯ...'

ಹೀಗೆಂದು ಆ 85ರ ವೃದ್ಧ ವ್ಯಕ್ತಿಯೊಬ್ಬರಿಗೆ ಆಸ್ಪತ್ರೆಯಲ್ಲಿನ ಹಾಸಿಗೆಯನ್ನು ಬಿಟ್ಟುಕೊಟ್ಟಿದ್ದಾರೆ. ಬಳಿಕ ಮನೆಗೆ ಮರಳಿದ್ದಾರೆ. ಕೆಲ ದಿನಗಳ ಬಳಿಕ ಅವರ ಪ್ರಾಣಪಕ್ಷಿ ಹಾರಿಹೋಗಿದೆ!

ಕೋವಿಡ್‌ಸಾಂಕ್ರಾಮಿಕದಸಂಕಷ್ಟದ ಸನ್ನಿವೇಶದಲ್ಲಿ ಮತ್ತೊಬ್ಬರ ಜೀವಕ್ಕಾಗಿ ಮಿಡಿದ ಹಿರಿಯ ಜೀವ ನಾರಾಯಣ ಭಾವುರಾವ್ ದಾಭಾಡ್ಕರ್ ಅವರು ತಮ್ಮ ಹಾಸಿಗೆ ಬಿಟ್ಟುಕೊಟ್ಟು ಇತರರ ಜೀವ ಉಳಿಸಿರುವ ಪ್ರಸಂಗವಿದು.

ದಾಭಾಡ್ಕರ್ ಅವರಿಗೆ ಇತ್ತೀಚೆಗೆ ಕೋವಿಡ್ ಸೋಂಕು ತಗುಲಿತ್ತು.



ನಾರಾಯಣ ಭಾವುರಾವ್ ದಾಭಾಡ್ಕರ್

ಅವರನ್ನು ನಾಗ್ಪುರದ ಇಂದಿರಾ ಗಾಂಧಿ ಸರ್ಕಾರಿ ಆಸ್ಪತ್ರೆಗೆ ಏಪ್ರಿಲ್ 21ರಂದು ದಾಖಲಿಸಲಾಗಿತ್ತು. ಅವರ ಶ್ವಾಸಕೋಶಗಳಿಗೆ ಹಾನಿಯಾಗಿತ್ತು.

ಈ ಕುರಿತು ಸ್ವಯಂ ದೃಢೀಕರಣ ನೀಡುವಂತೆ ಆಸ್ಪತ್ರೆಯ ಆಡಳಿತ ಮಂಡಳಿ ಕೇಳಿಕೊಂಡಾಗ, 'ನನಗೆ ನೀಡಿದ್ದ ಹಾಸಿಗೆಯನ್ನು ಸ್ವ ಇಚ್ಛೆಯಿಂದ ಮತ್ತೊಬ್ಬ ಸೋಂಕಿತರಿಗೆ ನೀಡುತ್ತಿದ್ದೇನೆ' ಎಂದು ದಾಭಾಡ್ಕರ್ ಅವರು ಬರೆದು ಕೊಟ್ಟಿದ್ದಾರೆ.

ಚಿನ್ನ ಅಡವಿಟ್ಟು 100 ಫ್ಯಾನ್ ದೇಣಿಗೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಚಿನ್ನ ಅಡವಿಟ್ಟು 100 ಫ್ಯಾನ್‌ಗಳನ್ನು ಖರೀದಿಸಿ ಸರ್ಕಾರಿ ಆಸ್ಪತ್ರೆಗೆ ದೇಣಿಗೆ ನೀಡುವ ಮೂಲಕ ದಂಪತಿಯೊಬ್ಬರು ನೆರವಿನ ಹಸ್ತ ಚಾಚಿದ್ದಾರೆ.

ಕೊಯಮತ್ತೂರಿನ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಇಎಸ್‌ಐ ಆಸ್ಪತ್ರೆಗೆ ಫ್ಯಾನ್‌ಗಳ ಅಗತ್ಯವಿತ್ತು. ಈ ಆಸ್ಪತ್ರೆಯಲ್ಲಿನ ಹವಾನಿಯಂತ್ರಣ ವ್ಯವಸ್ಥೆಯನ್ನು ಕೋವಿಡ್–19 ಕಾರಣಕ್ಕೆ ಸ್ಥಗಿತಗೊಳಿಸಿದ್ದರಿಂದ ರೋಗಿಗಳಿಗೆ ಫ್ಯಾನ್‌ಗಳ ಅವಶ್ಯಕತೆ ಇತ್ತು.

ಈ ಬಗ್ಗೆ ಮಾಹಿತಿ ಪಡೆದ ದಂಪತಿ, ತಮ್ಮ ಬಳಿ ಇದ್ದ 2.20 ಲಕ್ಷ ಮೌಲ್ಯದ ಚಿನ್ನವನ್ನು ಅಡವಿಟ್ಟು 100 ಫ್ಯಾನ್‌ಗಳನ್ನು ಖರೀದಿಸಿ ಆಸ್ಪತ್ರೆಗೆ ದೇಣಿಗೆ ನೀಡಿದ್ದಾರೆ. ಆದರೆ, ತಮ್ಮ ಗುರುತು ಎಲ್ಲಿಯೂ ಬಹಿರಂಗಪಡಿಸಬಾರದು ಎಂದು ಈ ದಂಪತಿ ಆಸ್ಪತ್ರೆಯ ಡೀನ್ ಡಾ. ಎಂ. ರವೀಂದ್ರನ್ ಅವರಿಗೆ ಮನವಿ ಮಾಡಿದ್ದಾರೆ.

ಖಾಸಗಿ ಆಸ್ಪತ್ರೆಗಳ ಸೌಲಭ್ಯ ಬಳಕೆಗೆ ಹರಸಾಹಸ • ಸರ್ಕಾರದ ಮೃದು ಧೋರಣೆಗೆ ಆಕ್ರೋಶ

ಖಾಸಗಿಗೆ ಮೂಗುದಾರ: ವಿಫಲ?

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಹಾಸಿಗೆ, ಐಸಿಯು, ವೆಂಟಿಲೇಟರ್‌ಗಳ ಮಾಹಿತಿಯನ್ನೂ ಮುಚ್ಚಿಟ್ಟು ಕಳ್ಳಾಟ ಆಡುತ್ತಿರುವ ಕೆಲವು ಖಾಸಗಿ ಆಸ್ಪತ್ರೆಗಳು ಮತ್ತು ವೈದ್ಯಕೀಯ ಕಾಲೇಜುಗಳ ವಿಚಾರದಲ್ಲಿ ಸರ್ಕಾರ ಮೃದು ಧೋರಣೆ ತಳೆಯುತ್ತಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ಅಸಮಾಧಾನ ಹೆಚ್ಚುತ್ತಿದೆ.

ಕೋವಿಡ್‌ನಂತಹ ರಾಷ್ಟ್ರೀಯ ವಿಪತ್ತಿನ ಸಂದರ್ಭದಲ್ಲೂ ಲಾಭ ಕೋರತನ ಪ್ರದರ್ಶಿಸುವವವರ ವಿರುದ್ಧ ಕಠಿಣಾಸ್ತ್ರ ಪ್ರಯೋಗಿಸುವ ಬದಲಿಗೆ ಚೌಕಾಸಿಗೆ ಇಳಿಯುವುದು ಸರಿಯಲ್ಲ ಎಂಬ ವಾದ ಬಲಗೊಳ್ಳುತ್ತಿದೆ. ಸಾವಿನ ಅಂಚಿನಲ್ಲಿರುವ ಕೋವಿಡ್ ರೋಗಿಗಳ ಜೀವ ಉಳಿಸುವ ವಿಚಾರದಲ್ಲಿ ವಿಪತ್ತು ನಿರ್ವಹಣಾ ಕಾಯ್ದೆ, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ಕೆಪಿಎಂಇ) ಕಾಯ್ದೆಗಳಂತಹ ಬಲವಾದ ಅಸ್ತ್ರಗಳಿದ್ದರೂ ಬಳಕೆ ಮಾಡದಿರುವುದನ್ನು ಹಲವರು ಪ್ರಶ್ನಿಸುತ್ತಿದ್ದಾರೆ.

ಬೆಂಗಳೂರಿನಲ್ಲಿ 12 ಖಾಸಗಿ ವೈದ್ಯಕೀಯ ಕಾಲೇಜುಗಳು ಮತ್ತು 123 ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಬುಧವಾರದ ವೇಳೆಗೆ ಖಾಸಗಿ ವೈದ್ಯಕೀಯ ಕಾಲೇಜುಗಳಿಂದ 4,933 ಹಾಸಿಗೆಗಳು ಮತ್ತು ಖಾಸಗಿ ಆಸ್ಪತ್ರೆಗಳಿಂದ 3,733 ಹಾಸಿಗೆಗಳು ಸರ್ಕಾರಿ ಕೋಟಾಕ್ಕೆ ಲಭ್ಯವಾಗಿವೆ.

ಆದರೆ, ಪ್ರತಿ ಆಸ್ಪತ್ರೆಯಲ್ಲಿ ಶೇಕಡ 50ರಂತೆ ನಿಜವಾಗಿಯೂ ಎಷ್ಟು ಹಾಸಿಗೆಗಳು ಬರಬೇಕಿತ್ತು ಮತ್ತು ಎಷ್ಟು ಬಂದಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೂ ಬಿಬಿಎಂಪಿ ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸಾಧ್ಯವಾಗುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಅಧಿಕಾರಿಗಳು ಕೆಲವು ಪ್ರಮುಖ ಆಸ್ಪತ್ರೆಗಳಲ್ಲಿ ತಪಾಸಣೆ ನಡೆಸಿದಾಗ ಹಾಸಿಗೆಗಳ ಸಂಖ್ಯೆಯನ್ನೇ ಮುಚ್ಚಿಟ್ಟಿರುವುದು ಪತ್ತೆಯಾಗಿದೆ.

'ಸರ್ಕಾರ ನೀಡಿದ ಜಮೀನು, ವಿದ್ಯುತ್, ನೀರನ್ನು ಬಳಸಿಕೊಂಡೇ ಇವರು ಖಾಸಗಿ ಆಸ್ಪತ್ರೆಗಳನ್ನು ನಡೆಸುವುದಲ್ಲವೆ? ಜನರ ತೆರಿಗೆಯ ಹಣದಲ್ಲಿ ಇವರಿಗೆ ಎಷ್ಟೊಂದು ರಿಯಾಯ್ತಿ ನೀಡಲಾಗುತ್ತಿದೆ. ತಮ್ಮ ಬಳಿ ಇರುವ ಎಲ್ಲ ಸೌಲಭ್ಯವನ್ನೂ ಅವರಾಗಿಯೇ ಜನರ ಚಿಕಿತ್ಸೆಗೆ ಮುಕ್ತವಾಗಿ ತೆರೆದಿಡಬೇಕಿತ್ತು. ಈ ವಿಚಾರದಲ್ಲೂ ಆಟ ಆಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಯಾವ ಅಡೆತಡೆ ಇದೆ' ಎಂದು ಪ್ರಶ್ನಿಸುತ್ತಾರೆ 2017ರಲ್ಲಿ ಕೆಪಿಎಂಇ ಕಾಯ್ದೆಗೆ ತಿದ್ದುಪಡಿ ತಂದಾಗ ಆರೋಗ್ಯ ಸಚಿವರಾಗಿದ್ದ ಶಾಸಕ ಕೆ.ಆರ್. ರಮೇಶ್ ಕುಮಾರ್.

ಕೆಪಿಎಂಇ ಕಾಯ್ದೆಯಲ್ಲಿ ಬಲವಾದ ಅಸ್ತ್ರಗಳಿವೆ. ಖಾಸಗಿ ನರ್ಸಿಂಗ್ ಹೋಂಗಳ ನೋಂದಣಿ ಕಾಯ್ದೆಯೂ ಇದೆ. ಆದರೆ, ಕೋವಿಡ್ ರೋಗಿಗಳ ಚಿಕಿತ್ಸೆ ವಿಚಾರದಲ್ಲಿ ಖಾಸಗಿ ಆಸ್ಪತ್ರೆಗಳು ಇಷ್ಟೆಲ್ಲಾ ಆಟಾಟೋಪ ಪ್ರದರ್ಶಿಸಿದರೂ ಒಂದು ಪ್ರಕರಣವನ್ನೂ ದಾಖಲಿಸಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.



ನಗರದ ಟ್ರಿನಿಟಿ ವೃತ್ತದಲ್ಲಿ ಬುಧವಾರ ಕರ್ಫ್ಯೂ ನಿಯಮ ಪಾಲಿಸದವರನ್ನು ಪೊಲೀಸರು ಶಿಕ್ಷಿಸಿದರು –ಪ್ರಜಾವಾಣಿ ಚಿತ್ರ

'ಬಂಧಿಸಿ ಜೈಲಿಗೆ ಕಳುಹಿಸಬೇಕು'

ಖಾಸಗಿ ಆಸ್ಪತ್ರೆಗಳು ಅಮಾನವೀಯವಾಗಿ ನಡೆದುಕೊಳ್ಳುವ ಮಾಹಿತಿಗಳು ನಿತ್ಯವೂ ಹೊರಬೀಳುತ್ತಿವೆ. ಬೆಡ್ ಮಾಹಿತಿ ಮುಚ್ಚಿಡುವುದು, ದುಬಾರಿ ದರ ವಿಧಿಸುವಂತಹ ಕೆಲಸ ಮಾಡುವ ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರನ್ನೇ ಬಂಧಿಸಿ ಜೈಲಿಗೆ ಕಳುಹಿಸಬೇಕು.

ಬಿಬಿಎಂಪಿ ಮತ್ತು ರಾಜ್ಯ ಸರ್ಕಾರದಿಂದ ಎಲ್ಲ ಆಸ್ಪತ್ರೆಗಳ ತಪಾಸಣೆಗೆ ಫ್ಲೈಯಿಂಗ್ ಸ್ಕ್ವಾಡ್ ಮಾದರಿಯ ತಂಡಗಳನ್ನು ರಚಿಸಬೇಕು. ಪ್ರತಿ ಆಸ್ಪತ್ರೆಯಲ್ಲೂ ಖಾಲಿ ಇರುವ ಮತ್ತು ಭರ್ತಿ ಇರುವ ಹಾಸಿಗೆಗಳ ಸಂಖ್ಯೆ, ನಿತ್ಯವೂ ಖಾಲಿ ಆದ ಹಾಸಿಗೆಗಳ ಸಂಖ್ಯೆಯನ್ನು ಬಿಬಿಎಂಪಿ ಪೋರ್ಟಲ್ ಮೂಲಕವೇ ಅಪ್ಡೇಟ್ ಮಾಡುವ ವ್ಯವಸ್ಥೆ ತರಬೇಕು.

ಶ್ರೀಕಾಂತ್ ನರಸಿಂಹನ್,
ಬೆಂಗಳೂರು ನವ ನಿರ್ಮಾಣ ಪಕ್ಷದ ಸಹ ಸಂಸ್ಥಾಪಕ

'ಜೀವ ಉಳಿಸುವುದೇ ಮುಖ್ಯ ಆಗಬೇಕು'

ಕೋವಿಡ್‌ನಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಸರ್ಕಾರ ಹಾಗೂ ಖಾಸಗಿ ಆಸ್ಪತ್ರೆಗಳು ಸಮನ್ವಯದಿಂದ ಕೆಲಸ ಮಾಡಬೇಕಿದೆ. ಖಾಸಗಿ ಆಸ್ಪತ್ರೆಗಳು ತಾವಾಗಿಯೇ ಜನರಿಗಾಗಿ ಸರ್ಕಾರದ ಜತೆ ಕೈಜೋಡಿಸಬೇಕಿತ್ತು. ಈ ಸಂದರ್ಭದಲ್ಲೂ ಚೆಲ್ಲಾಟ ಆಡುವುದು ಸರಿಯಲ್ಲ. ಸರ್ಕಾರ, ಖಾಸಗಿ ಆಸ್ಪತ್ರೆಗಳು ಇಬ್ಬರಿಗೂ ಜನರ ಜೀವ ಉಳಿಸುವುದೇ ಮುಖ್ಯವಾಗಬೇಕು. ಹಾಸಿಗೆಗಳ ಕೊರತೆ ನೀಗಲು ಅರಮನೆ ಮೈದಾನದಲ್ಲಿನ ಸಭಾಂಗಣಗಳಲ್ಲಿ ಕೋವಿಡ್ ಆರೈಕೆ ಕೇಂದ್ರ ಆರಂಭಿಸಬೇಕು.

ಆದರ್ಶ್ ಆರ್. ಅಯ್ಯರ್,
ಜನಾಧಿಕಾರ ಸಂಘರ್ಷ ಪರಿಷತ್ ಸಹ ಅಧ್ಯಕ್ಷ

ಸಂಕ್ಷಿಪ್ತ ಸುದ್ದಿ

ರೋಗಿಗಳಿಗೆ ಸಹಾಯವಾಣಿ

ಬೆಂಗಳೂರು: ಕೋವಿಡ್ ದೃಢಪಟ್ಟ ರೋಗಿಗಳಿಗೆ ತಕ್ಷಣವೇ ಆಪ್ತಮಿತ್ರ ಸಹಾಯವಾಣಿ ಮೂಲಕ ಕರೆಮಾಡಿ ತುರ್ತು ನೆರವು ಒದಗಿಸಲು ಸಿದ್ಧತೆ ನಡೆದಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಬುಧವಾರ ಮಾತನಾಡಿದ ಅವರು, 'ಇದಕ್ಕಾಗಿ 6,000ದಿಂದ 8,000ದಷ್ಟು ಸಿಬ್ಬಂದಿಯ ಅಗತ್ಯವಿದೆ. ಖಾಸಗಿ ಕಂಪನಿಗಳ ಸಿಬ್ಬಂದಿಯನ್ನು ಬಳಸಿಕೊಳ್ಳಲು ಚಿಂತನೆನಡೆದಿದೆ. ಇನ್ಫೊಸಿಸ್ ಸಹಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣನ್ ಅವರೊಂದಿಗೆ ಚರ್ಚೆ ನಡೆಸಲಾಗಿದೆ' ಎಂದರು.

24 ಗಂಟೆ: 39 ಸಾವಿರ ಹೊಸ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಬುಧವಾರ ಸಂಜೆಯವರೆಗಿನ ಹಿಂದಿನ 24 ಗಂಟೆಗಳಲ್ಲಿ 40 ಸಾವಿರದ ಗಡಿಯತ್ತ (39,047) ಸಾಗಿದೆ. ಕೊರೊನಾ ಸೋಂಕಿತರಲ್ಲಿ 229 ಮಂದಿ ಸಾವಿಗೀಡಾಗಿದ್ದಾರೆ.

ಒಂದು ದಿನದ ಅವಧಿಯಲ್ಲಿ 1.71 ಲಕ್ಷ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 22.70ಕ್ಕೆ ಏರಿಕೆಯಾಗಿದೆ. ಕೇವಲ 4 ದಿನಗಳ ಅವಧಿಯಲ್ಲಿ 1.35 ಲಕ್ಷ ಮಂದಿ ಸೋಂಕಿತರಾಗಿದ್ದಾರೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 3.28 ಲಕ್ಷ ದಾಟಿದೆ. ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 14.39 ಲಕ್ಷಕ್ಕೆ ಏರಿಕೆಯಾಗಿದೆ.

ತನಗೆ ಐಸಿಯು ಹಾಸಿಗೆ ನಿಗದಿ ಮಾಡುವವರೆಗೆ ಪತ್ನಿಯ ಶವ ನೀಡದ ಪತಿ

ಮನೆಯೊಳಗೆ ತಾಯಿ ಶವ; ಹೊರಗಡೆ ಮಕ್ಕಳು!

• ಗುರು ಪಿ.ಎಸ್.

ಬೆಂಗಳೂರು: ವಾರದ ಹಿಂದೆ ಕೋವಿಡ್‌ನಿಂದ ಸಾವಿಗೀಡಾದ ಅಜ್ಜಿ–ಮುತ್ತಜ್ಜಿ. ಕ್ಯಾನ್ಸರ್‌ಗೆ ತುತ್ತಾಗಿದ್ದ ತಾಯಿಗೂ ಮೂರು ದಿನಗಳ ಹಿಂದೆ ತಗುಲಿತ್ತು ಕೊರೊನಾ ಸೋಂಕು. ಚಿಕಿತ್ಸೆಗಾಗಿ ಓಡಾಡಿದಾಗ ಹಾಸಿಗೆಯೂ ಸಿಗದೆ ಸುಸ್ತಾಗಿ ಮಲಗಿದ್ದ ಅಪ್ಪ. ಮಧ್ಯರಾತ್ರಿಯೇ ತಾಯಿ ಅಸುನೀಗಿದಾಗ ದಿಕ್ಕು ತೋಚದೆ ಮನೆಯ ಹೊರಗಡೆ ನಿಂತು ಅಳುತ್ತಿದ್ದ ಮಕ್ಕಳು...

ನಗರದ ವಿದ್ಯಾರಣ್ಯಪುರದ ಸಿಂಗಪುರ ಬಡಾವಣೆಯಲ್ಲಿ ನಡೆದ ಕರುಣಾಜನಕ ಪ್ರಸಂಗ ಇದು. ಮುತ್ತಜ್ಜಿ, ಅಜ್ಜಿ, ತಾಯಿಯನ್ನು ಕಳೆದುಕೊಂಡ ಈ ಮಕ್ಕಳ ತಂದೆ ಸದ್ಯ ಐಸಿಯುದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಮಹಿಳೆ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಖಾಸಗಿ ಆಸ್ಪತ್ರೆಯೊಂದಕ್ಕೆ ಹೋದಾಗ ₹5 ಲಕ್ಷ ಠೇವಣಿ ಕಟ್ಟುವಂತೆ ಹೇಳಿದ್ದಾರೆ. ಇಲ್ಲದಿದ್ದರೆ ದಿನಕ್ಕೆ ₹75 ಸಾವಿರದಂತೆ ಹಣ ಕಟ್ಟಿ ಎಂದಿದ್ದಾರೆ. ಇಷ್ಟು ಹಣ ಪಾವತಿಸಲು ಆಗದೆ ಅವರು ವಾಪಸ್ ಬಂದಿದ್ದರು' ಎಂದು ಮಹಿಳೆಯ ಮನೆ ಪಕ್ಕದ ನಿವಾಸಿ ನಾಗೇಂದ್ರನ್ ಹೇಳಿದರು.

'ಮಹಿಳೆಗೆ ಮೂರು ದಿನಗಳ ಹಿಂದೆ ಸೋಂಕು ತಗುಲಿತ್ತು. ಅವರ ಆಮ್ಲಜನಕ ಮಟ್ಟ 72ಕ್ಕೆ ಕುಸಿದಿತ್ತು. ಅವರ ಪತಿ ಚಿಕಿತ್ಸೆ ಕೊಡಿಸಲು ಹಲವು ಆಸ್ಪತ್ರೆ ಓಡಾಡಿದರು. ಆದರೆ ಎಲ್ಲಿಯೂ ಹಾಸಿಗೆ ಸಿಗಲಿಲ್ಲ. ಕೊನೆಗೆ ಪಾಲಿಕೆ ಮಾಜಿ ಸದಸ್ಯ ಪಾರ್ತಿಬರಾಜನ್ ಅವರನ್ನು ಸಂಪರ್ಕಿಸಿದರು. ಅವರು ಮತ್ತೊಂದು ಖಾಸಗಿ ಆಸ್ಪತ್ರೆಯಲ್ಲಿ ಮಹಿಳೆಯನ್ನು ದಾಖಲಿಸಲು ನೆರವಾಗಿದ್ದರು. ಮಹಿಳೆಯನ್ನು ದಾಖಲಿಸಿಕೊಂಡ ಆಸ್ಪತ್ರೆ ವೆಂಟಿಲೇಟರ್ ಸೌಲಭ್ಯ ಇಲ್ಲ ಎಂದು ವಾಪಸ್ ಕಳುಹಿಸಿತ್ತು' ಎಂದು ಅವರು ಹೇಳಿದರು.


ಬಿಯು ನಂಬರ್ ಸಿಕ್ಕ ನಂತರ ಪಾರ್ತಿಬರಾಜನ್ ಮತ್ತೆ ಬಿಬಿಎಂಪಿಯಿಂದ ಹಾಸಿಗೆ ಮೀಸಲಿಡಿಸಿದ್ದಾರೆ. ಆಂಬುಲೆನ್ಸ್ ಕೂಡ ಬಂದಿದೆ. ಆಂಬುಲೆನ್ಸ್‌ನಲ್ಲಿ ಕರೆದುಕೊಂಡು ಹೋದವರು, ಆಸ್ಪತ್ರೆಗಳಲ್ಲಿ ಹಾಸಿಗೆ ಖಾಲಿ ಇಲ್ಲ ಎಂದು ಎರಡು ತಾಸು ಕಾಯಿಸಿ, ವಾಪಸ್ ಮನೆಗೆ ಬಿಟ್ಟು ಹೋಗಿದ್ದಾರೆ. ಮಂಗಳವಾರ ರಾತ್ರಿ 9.30ರ ವೇಳೆಗೆ ಮಹಿಳೆ ಅಸುನೀಗಿದ್ದಾರೆ. ಹಾಸಿಗೆಗೆ ಅಲೆದಾಡಿದ್ದ ತಂದೆಯೂ ಸುಸ್ತಾಗಿ ಮಲಗಿದ್ದರಿಂದ ಮಕ್ಕಳು ಮನೆಯ ಹೊರಗಡೆ ಬಂದು ಅಳುತ್ತಾ ನಿಂತಾಗ ಈ ವಿಷಯ ನೆರೆಹೊರೆಯವರ ಗಮನಕ್ಕೆ ಬಂದಿದೆ.

ಮುಖ್ಯಮಂತ್ರಿ, ಶಾಸಕ ಸ್ಥಳಕ್ಕೆ ಬರುವವರೆಗೆ ಪತ್ನಿಯ ಶವ ನೀಡುವುದಿಲ್ಲ ಎಂದು ಪತಿ ಮಧ್ಯರಾತ್ರಿ ಪ್ರತಿಭಟಿಸಿದರು.

'ಪತ್ನಿಯ ಚಿಕಿತ್ಸೆಗೆ ಹಲವು ಆಸ್ಪತ್ರೆ ಓಡಾಡಿದರೂ ಪ್ರಯೋಜನವಾಗಲಿಲ್ಲ. ಹಾಸಿಗೆ ಇದೆ ಎಂದು ಕರೆಸಿಕೊಂಡವರು ವಾಪಸ್ ಕಳಿಸಿದರು. ನನಗೂ ಸೋಂಕು ತಗುಲಿರುವ ಸಾಧ್ಯತೆ ಇದೆ. ಮುಖ್ಯಮಂತ್ರಿ, ಶಾಸಕ ಮತ್ತು ಬಿಬಿಎಂಪಿ ಅಧಿಕಾರಿಗಳು ಸ್ಥಳಕ್ಕೆ ಬರುವವರೆಗೆ ನಾನು ಪತ್ನಿಯ ಶವವನ್ನು ನೀಡುವುದಿಲ್ಲ' ಎಂದು ಪತಿ ಪಟ್ಟು ಹಿಡಿದರು.

'ನನಗೆ ಆಸ್ಪತ್ರೆಯಲ್ಲಿ ಐಸಿಯು ಬೆಡ್ ಮೀಸಲಿಡಬೇಕು. ಅಜ್ಜಿಯಂದಿರು ಮತ್ತು ತಾಯಿಯನ್ನು ನನ್ನ ಮಕ್ಕಳು ಕಳೆದುಕೊಂಡಿದ್ದಾರೆ. ಹಾಸಿಗೆ ಸಿಗದೆ ನನಗೂ ಹೆಚ್ಚು ಕಡಿಮೆಯಾದರೆ ನನ್ನ ಮಕ್ಕಳಿಗೆ ಗತಿ ಯಾರು' ಎಂದು ಅವರು ಪ್ರಶ್ನಿಸಿದರು.

ರಾತ್ರಿ 1.30ರ ನಂತರ ಸ್ಥಳಕ್ಕೆ ಬಂದ ಪಾರ್ತಿಬರಾಜನ್, ಖಾಸಗಿ ಆಸ್ಪತ್ರೆಯಲ್ಲಿ ಆ ವ್ಯಕ್ತಿಗೆ ಐಸಿಯು ಹಾಸಿಗೆ ಮೀಸಲಿರಿಸಿದರು. ಬುಧವಾರ ಬೆಳಗಿನ ಜಾವ 4.30ಕ್ಕೆ ಮಹಿಳೆಯ ಶವವನ್ನು ಅಂತ್ಯಸಂಸ್ಕಾರಕ್ಕೆ ತೆಗೆದುಕೊಂಡು ಹೋಗಲಾಯಿತು.



ತುರ್ತು ಅಗತ್ಯಗಳ ಓಡಾಟಕ್ಕೂ ಸಾಹಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಕರ್ಫ್ಯೂ' ಜಾರಿಯಾಗಿ ಮೊದಲ ದಿನವಾದ ಬುಧವಾರ ಪ್ರಯಾಣಿಕರು ಬುಧವಾರ ನಸುಕಿನ ಜಾವದಿಂದಲೇ ಬಸ್ ಮತ್ತು ರೈಲು ನಿಲ್ದಾಣದತ್ತ ಧಾವಿಸಿದರು. ಆದರೆ, ಹತ್ತು ಗಂಟೆಯ ನಂತರ ನಗರದೊಳಗೆ ತುರ್ತು ಕಾರ್ಯಗಳಿಗೆ ಓಡಾಡಬೇಕಾದವರು ಸಮಸ್ಯೆಗೆ ಸಿಲುಕಿದರು.

ಆರೋಗ್ಯ ಮತ್ತಿತರ ತುರ್ತು ಕಾರ್ಯಗಳಿಗೆ ಓಡಾಡಲು ಯಾವುದೇ ನಿರ್ಬಂಧ ಇರಲಿಲ್ಲ. ಆದರೆ, ಬಿಎಂಟಿಸಿ ಬಸ್, ಮೆಟ್ರೊ ರೈಲು, ಆಟೊ, ಟ್ಯಾಕ್ಸಿ ಯಾವುದೂ ಇರದಿದ್ದರಿಂದ ಆಸ್ಪತ್ರೆಗಳಿಗೆ ಹೋಗಬೇಕಾದವರು ತೊಂದರೆಗೀಡಾದರು.

'ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಯಾವುದೇ ಸಮಸ್ಯೆ ಆಗುತ್ತಿರಲಿಲ್ಲ. ಆದರೆ, ಅವರನ್ನು ಆಸ್ಪತ್ರೆಗೆ ಬಿಟ್ಟು ಹಿಂದಿರುಗುವಾಗ ಪೊಲೀಸರು ದಾಖಲೆ ಕೇಳಿದರು. ಹೀಗಾಗಿ, ಮತ್ತೆ ಬಾಡಿಗೆ ಓಡಿಸುವುದನ್ನು ಮುಂದುವರಿಸಲಿಲ್ಲ' ಎಂದು ಆಟೊ ಚಾಲಕರೊಬ್ಬರು ಹೇಳಿದರು.

ಬೆಳಿಗ್ಗೆಯೇ ಈ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದ ನಂತರದಲ್ಲಿ ಆಟೊ-ಟ್ಯಾಕ್ಸಿಗಳ ಸಂಚಾರ ಕಡಿಮೆಯಾಯಿತು.

ರಾತ್ರಿಯಿಡೀ ಜಾಗರಣೆ: ಬುಧವಾರ ಬೆಳಿಗ್ಗೆ ರೈಲು ಟಿಕೆಟ್ ಕಾಯ್ದಿರಿಸಿದ್ದ ಕಾರ್ಮಿಕರು ಮಂಗಳವಾರ ರಾತ್ರಿಯೇ ಯಶವಂತಪುರದ ರೈಲು ನಿಲ್ದಾಣಕ್ಕೆ ಬಂದಿದ್ದರು. ಹಿಂದಿನ ದಿನವೇ ಕ್ಯಾಂಪ್‌ಗಳು, ಗುಡಿಸಲುಗಳನ್ನು ತೊರೆದು, ಕಾಲ್ನಡಿಗೆಯಲ್ಲಿ ನಿಲ್ದಾಣಗಳನ್ನು ಬಂದು ಸೇರಿದ್ದರು.

'ಗುರುತಿನ ಚೀಟಿ ವಿತರಿಸಿ'

ಕಟ್ಟಡ ನಿರ್ಮಾಣ ಕಾರ್ಯ ನಡೆಸಲು ಯಾವುದೇ ನಿರ್ಬಂಧವಿಲ್ಲ. ಆದರೆ, ಕಾರ್ಮಿಕರು ಸಂಚಾರ ಮಾಡುವಂತಿಲ್ಲ. ಕಾರ್ಮಿಕರಿಗೂ ಗುರುತಿನ ಚೀಟಿ ನೀಡಬೇಕು ಎಂಬ ಒತ್ತಾಯ ಕೇಳಿ ಬಂದಿದೆ.

'10ಗಂಟೆಯಿಂದ ಕರ್ಫ್ಯೂ ಇರುವುದರಿಂದ ಬೆಳಿಗ್ಗೆ 6.30, 7 ಗಂಟೆಗೇ ಕೆಲಸಕ್ಕೆ ಹೊರಡಬೇಕಾಗಿದೆ. ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತರಾಗಿರುವ ಕಾರ್ಮಿಕರಿಗೆ ಗುರುತಿನ ಚೀಟಿ ಇದೆ. ಉಳಿದವರಿಗೆ ಇಲ್ಲ. ಎಲ್ಲರಿಗೂ ಇಂತಹ ದಾಖಲೆ ನೀಡಿದರೆ ಅನುಕೂಲವಾಗುತ್ತದೆ' ಎಂದು ಕಾರ್ಮಿಕ ಶಿವಕುಮಾರ್ ಹೇಳಿದರು.

'ಗುರುತಿನ ಚೀಟಿ ವಿತರಿಸಬೇಕು, ಕಾರ್ಮಿಕರ ಓಡಾಟಕ್ಕೆ ವ್ಯವಸ್ಥೆ ಮಾಡಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಕಾರ್ಮಿಕ ಸಚಿವರು ಮತ್ತು ಕಾರ್ಮಿಕ ಇಲಾಖೆಯ ಆಯುಕ್ತರಿಗೆ ನೀಡಲಾಗಿದೆ' ಎಂದು ಸಿಐಟಿಯು ಕಾರ್ಯದರ್ಶಿ ಕೆ. ಮಹಾಂತೇಶ ತಿಳಿಸಿದರು.

ಗುರುತಿನ ಚೀಟಿ ತೋರಿಸಿ ಸಂಚರಿಸಿ: 'ಕೊರೊನಾ ಕರ್ಫ್ಯೂ' ಅವಧಿಯಲ್ಲಿ ವಿನಾಯಿತಿ ನೀಡಿರುವ ಸೇವೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ಗುರುತಿನ ಚೀಟಿ (ಐಡಿ ಕಾರ್ಡ್) ಅಥವಾ ಸಮರ್ಥನೀಯ ದಾಖಲೆ ಹಾಜರುಪಡಿಸಿ ತಮ್ಮ ಸ್ಥಳಗಳಿಗೆ ಸಂಚರಿಸಬಹುದು ಎಂದು ಪೊಲೀಸ್ ಇಲಾಖೆ ಸ್ಪಷ್ಟನೆ ನೀಡಿದೆ. ವಿನಾಯಿತಿ ನೀಡಲಾದ ಸೇವೆಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಪೊಲೀಸ್ ಇಲಾಖೆ ಯಾವುದೇ ಪಾಸ್ ವಿತರಿಸುವುದಿಲ್ಲ. ಅಗತ್ಯ ದಾಖಲೆ ಅಥವಾ ಗುರುತಿನ ಚೀಟಿಯೊಂದಿಗೆ ಸಂಚರಿಸಬಹುದು ಎಂದು ತಿಳಿಸಿದೆ.

ಆನ್‌ಲೈನ್ ಪೋರ್ಟಲ್‌ಗೆ ಆಗ್ರಹ

'ತುರ್ತು ಅಗತ್ಯವಿದ್ದಲ್ಲಿ ಸಂಚರಿಸಬಹುದು ಎಂದು ಸರ್ಕಾರ ಹೇಳಿದೆ. ನಾವು ಇಂತಹ ಸೇವೆ ನೀಡಲೂ ಸಿದ್ಧವಿದ್ದೇವೆ. ಆದರೆ, ಪ್ರಯಾಣಿಕರು ನಿಲ್ದಾಣಕ್ಕೋ ಅಥವಾ ರೋಗಿಗಳನ್ನು ನೋಡಿಕೊಳ್ಳುವವರನ್ನು ಆಸ್ಪತ್ರೆಗೋ ಬಿಟ್ಟುಬರಲು ಹೋದರೆ, ವಾಪಸ್ ಬರುವಾಗ ಯಾವುದೇ ದಾಖಲೆಗಳು ಚಾಲಕರ ಬಳಿ ಇರುವುದಿಲ್ಲ. ಆಗ, ಪೊಲೀಸರು ಕಿರಿಕಿರಿ ಮಾಡುತ್ತಾರೆ. ಇದು ಸಮಸ್ಯೆಯಾಗುತ್ತಿದೆ' ಎಂದು ರಾಜ್ಯ ಪ್ರವಾಸಿ ವಾಹನಗಳ ಮಾಲೀಕರ ಸಂಘದ ಅಧ್ಯಕ್ಷ ರಾಧಾಕೃಷ್ಣ ಹೊಳ್ಳ ಹೇಳಿದರು.

'ಸರ್ಕಾರ ಹೊರಡಿಸಿರುವ ಮಾರ್ಗಸೂಚಿ ಸಮರ್ಪಕವಾಗಿಲ್ಲ ಅನಿಸುತ್ತದೆ. ಕಳೆದ ಬಾರಿ ಲಾಕ್‌ಡೌನ್ ಸಂದರ್ಭದಲ್ಲಿ ಇದ್ದಂತೆ ಆನ್‌ಲೈನ್ ಪೋರ್ಟಲ್ ವ್ಯವಸ್ಥೆಯನ್ನಾದರೂ ಮಾಡಿದರೆ ಉತ್ತಮ' ಎಂದು ಮನವಿ ಮಾಡಿದರು.

ಬಿ.ಯು.ಸಂಖ್ಯೆಯಲ್ಲಿ ಹೆಸರು ಬೇರೆ: ಲೋಪ ಸರಿಪಡಿಸುವ ಭರವಸೆ

ಬೆಂಗಳೂರು: ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವಾಗ ಮೊಬೈಲ್ ಸಂಖ್ಯೆ ನೀಡುವುದು ಕಡ್ಡಾಯ. ಕುಟುಂಬದಲ್ಲಿ ಇಬ್ಬರು ಮೂವರಿಗೆ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಹೋದಾಗ ಒಂದೇ ಮೊಬೈಲ್ ಸಂಖ್ಯೆಯನ್ನು ನೀಡಿ ಒಟಿಪಿ ಪಡೆದ ಪ್ರಕರಣಗಳಲ್ಲಿ ರೋಗಿಗಳ ಹೆಸರಿನಲ್ಲಿ ವ್ಯತ್ಯಯ ಉಂಟಾಗುತ್ತಿರುವ ಬಗ್ಗೆ ದೂರು ಕೇಳಿಬಂದಿದೆ.

ಬನಶಂಕರಿ ಐದನೇ ಹಂತದ ನಿವಾಸಿಯೊಬ್ಬರ ಸಹೋದರನಿಗೆ ಇತ್ತೀಚೆಗೆ ಕೋವಿಡ್ ದೃಢಪಟ್ಟಿತ್ತು. ಅವರ ಕೋವಿಡ್ ಪರೀಕ್ಷೆ ವೇಳೆ ಮೊಬೈಲ್ ಒಯ್ಯದ ಕಾರಣ ಒಟಿಪಿ ಪಡೆಯಲು ಸಹೋದರನ ಮೊಬೈಲ್ ಸಂಖ್ಯೆ ನೀಡಿದ್ದರು. ಅವರಿಗೆ ಸೋಂಕು ದೃಢಪಟ್ಟಿತ್ತು. ಬಿ.ಯು.ನಂಬರ್ ಕೂಡಾ ನೀಡಿತ್ತು. ಎರಡು ದಿನ ಬಿಟ್ಟು ಸಹೋದರನಲ್ಲೂ ಕೊರೊನಾ ಸೋಂಕಿನ ಲಕ್ಷಣಗಳು ಕಾಣಿಸಿದ್ದರಿಂದ ಅವರೂ ಕೋವಿಡ್ ಪರೀಕ್ಷೆ ಮಾಡಿಸಿಕೊಂಡರು. ಅವರಿಗೂ ಕೋವಿಡ್ ದೃಢಪಟ್ಟಿತ್ತು. ಅವರಿಗೆ ಬಿ.ಯು.ನಂಬರ್ ಬೇರೆಯದೇ ಸಿಕ್ಕಿತು. ಆದರೆ, ಅದರಲ್ಲಿ ಸಹೋದರನ ಹೆಸರು ಬಂದಿತ್ತು.



'ಎಷ್ಟೋ ಮಂದಿಗೆ ಒಂದೇ ಮೊಬೈಲ್ ಸಂಖ್ಯೆ ನೀಡಿದರೂ ಬಿ.ಯು.ನಂಬರ್ ಬೇರೆ ಬೇರೆಯೇ ಬರುತ್ತದೆ. ಅದರೆ ಪರೀಕ್ಷೆ ವೇಳೆ ಒಂದೇ ಮೊಬೈಲ್ ಸಂಖ್ಯೆ ನೀಡಿದ ಕಾರಣಕ್ಕೆ ರೋಗಿಯ ಹೆಸರು ತಪ್ಪಾಗುವ ಸಾಧ್ಯತೆ ಕಡಿಮೆ. ಆದರೂ ಲೋಪ ಸರಿಪಡಿಸಲಾಗುವುದು' ಎಂದು ವೈದ್ಯಾಧಿಕಾರಿಯೊಬ್ಬರು ತಿಳಿಸಿದರು.

'ಪೂರೈಕೆ ಬಳಿಕವೇ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ'

ಬೆಂಗಳೂರು: ರಾಜ್ಯ ಸರ್ಕಾರ ಒಂದು ಕೋಟಿ ಲಸಿಕೆ ಪೂರೈಸುವಂತೆ ಉತ್ಪಾದಕ ಕಂಪನಿಗೆ ಬೇಡಿಕೆ ಸಲ್ಲಿಸಿದ್ದು, ಪೂರೈಕೆ ಮಾಡಿದ ತಕ್ಷಣವೇ 18–44 ವಯಸ್ಸಿನವರಿಗೆ ಲಸಿಕೆ ನೀಡುವ ಯೋಜನೆ ಕಾರ್ಯಗತಗೊಳಿಸಲಾಗುವುದು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ತಿಳಿಸಿದ್ದಾರೆ.

18 ವಯಸ್ಸಿನವರಿಗೆ ಲಸಿಕೆ ನೀಡುವ ಸಿದ್ಧತೆಯ ಕುರಿತು ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

'18 ರಿಂದ 44ನೇ ವಯಸ್ಸಿನವರು ಲಸಿಕೆ ಪಡೆಯಲು cowin ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ನೋಂದಣಿಯ ನಂತರ ಲಸಿಕೆ ಪಡೆಯುವ ಸಮಯ ಹಾಗೂ ದಿನಾಂಕ ತಿಳಿಯಬಹುದು' ಎಂದು ಹೇಳಿದರು.

ಕೋವಿಡ್‌ನಿಂದ ವ್ಯಕ್ತಿ ಸಾವು • ಪರೀಕ್ಷೆಯಲ್ಲಿ ದೃಢಪಡದ ಸೋಂಕು

ಅಂತ್ಯಕ್ರಿಯೆಗೆ ಒಂದೂವರೆ ದಿನ ಕಾದ ಕುಟುಂಬ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಹಿರಿಯ ಜೀವವನ್ನು ಕಳೆದುಕೊಂಡ ನೋವಿನ ನಡುವೆಯೂ ನಗರದ ಕುಟುಂಬವೊಂದು ಅವರ ಅಂತ್ಯಕ್ರಿಯೆಗಾಗಿ ರಾತ್ರಿ ಹಗಲೂ ಪಡಿಪಾಟಲು ಎದುರಿಸಬೇಕಾಗಿ ಬಂದಿದೆ. ವ್ಯಕ್ತಿ ಕೊನೆಯುಸಿರೆಳೆದು ಒಂದೂವರೆ ದಿನ ಕಾದ ಬಳಿಕ ಹಿರಿಯ ಅಧಿಕಾರಿಯೊಬ್ಬರ ಮಧ್ಯಪ್ರವೇಶದ ಬಳಿಕ ಅಂತ್ಯಕ್ರಿಯೆಗೆ ಅವಕಾಶ ಸಿಕ್ಕಿದೆ. ಇದಕ್ಕೆ ಕಾರಣ, ಕೋವಿಡ್ ಪರೀಕ್ಷೆಯಲ್ಲಿ ಆ ವ್ಯಕ್ತಿಗೆ ಸೋಂಕು ದೃಢಪಡದೇ ಇರುವುದು.

70 ವರ್ಷದ ಬಿ.ಮನೋಹರ್ ಶೆಣೈ ಅವರು ಏ. 9ರಂದು ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದರು. ಅವರಲ್ಲಿ ಜ್ವರದ ಲಕ್ಷಣಗಳು ಕಾಣಿಸಿಕೊಂಡಿದ್ದವು.

'ಲಸಿಕೆ ಹಾಕಿಸಿಕೊಂಡ ಬಳಿಕ ಜ್ವರ ಬರುವುದು ಸಹಜ ಎಂದು ವೈದ್ಯರು ಧೈರ್ಯ ತುಂಬಿದ್ದರು. ಆದರೆ, ತಂದೆಯಲ್ಲಿ ಉಸಿರಾಟದ ಸಮಸ್ಯೆಯೂ ಕಾಣಿಸಿಕೊಂಡಿತು. ಆಗ ಕೋವಿಡ್ ಪರೀಕ್ಷೆ ಮಾಡಿಸಿದೆವು. ಅವರಿಗೆ ಸೊಂಕು ಇಲ್ಲ ಎಂದು ವರದಿ ಬಂತು. ಹಾಗಾಗಿ ಮನೆಯಲ್ಲೇ ಇದ್ದರು. ಉಸಿರಾಟದ ಸಮಸ್ಯೆ ತೀವ್ರಗೊಂಡಿದ್ದರಿಂದ ಆಸ್ಪತ್ರೆಗೆ ದಾಖಲಿಸಿದೆವು. ಸ್ಕ್ಯಾನಿಂಗ್ ಮಾಡಿಸಿದಾಗ ಶ್ವಾಸಕೋಶದಲ್ಲಿ ಸೋಂಕು ಹರಡಿರುವುದು ದೃಢಪಟ್ಟಿತ್ತು' ಎಂದು ಮನೋಹರ್ ಅವರ ಪುತ್ರ ರಾಹುಲ್ ಶೆಣೈ 'ಪ್ರಜಾವಾಣಿ'ಗೆ ತಿಳಿಸಿದರು.

ಮನೋಹರ್ ಶೆಣೈ ಅವರು ಚಿಕಿತ್ಸೆ ಫಲಿಸದೆ ಜಯನಗರ ಒಂದನೇ ಬ್ಲಾಕ್‌ನ ಭೈರಸಂದ್ರದ ಎನ್.ಆರ್. ಅಮರ್ ಆಸ್ಪತ್ರೆಯಲ್ಲಿ ಮಂಗಳವಾರ ಮಧ್ಯಾಹ್ನ 2.10ಕ್ಕೆ ಮೃತಪಟ್ಟಿದ್ದಾರೆ. ಅವರು ಕೋವಿಡ್‌ನಿಂದ ಸತ್ತಿದ್ದಾಗಿ ಆಸ್ಪತ್ರೆಯವರು ಮರಣ ಪ್ರಮಾಣಪತ್ರವನ್ನೂ ನೀಡಿದ್ದಾರೆ. ಆದರೂ, ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆಗೆ ಗೊತ್ತುಪಡಿಸಿದ ಸ್ಮಶಾನಗಳಲ್ಲಿ ಅಂತ್ಯಕ್ರಿಯೆ ನಡೆಸಲು ಅವಕಾಶ ಸಿಗಲಿಲ್ಲ.

'ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆಗೆ ನೆರವಾಗಲು ಬಿಬಿಎಂಪಿ ಆರಂಭಿಸಿರುವ ಸಹಾಯವಾಣಿಗೆ ಕರೆ ಮಾಡಿದಾಗ ಎಸ್‌ಆರ್‌ಎಫ್ ಸಂಖ್ಯೆ ಅಥವಾ ಜಿಲ್ಲಾ ಸಂಕೇತ ಸಂಖ್ಯೆ (ಬಿ.ಯು.ನಂಬರ್) ಇದ್ದರೆ ಮಾತ್ರ ಇಂತಹ ಸ್ಮಶಾನಗಳಲ್ಲಿ ಅಂತ್ಯಕ್ರಿಯೆ ನಡೆಸಬಹುದು ಎಂದು ತಿಳಿಸಿದರು.

'ಪ್ರಜಾವಾಣಿ'ಯು ಈ ಸಮಸ್ಯೆಯನ್ನು ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರ ಗಮನಕ್ಕೆ ತಂದಿತು. ಬಳಿಕ ಅವರ ಸೂಚನೆ ಮೇರೆಗೆ ಬೊಮ್ಮನಹಳ್ಳಿಯ ಕೂಡ್ಲು ಚಿತಾಗಾರದಲ್ಲಿ ಅಂತ್ಯಕ್ರಿಯೆಗೆ ಬಿಬಿಎಂಪಿ ಅಧಿಕಾರಿಗಳು ಅವಕಾಶ ಕಲ್ಪಿಸಿದರು.

'ತಂದೆಯ ಅಂತ್ಯಕ್ರಿಯೆಗೆ ಕೂಡ್ಲು ಚಿತಾಗಾರದ ಸಿಬ್ಬಂದಿ ಟೋಕನ್ ನೀಡಿದ್ದಾರೆ. 14ನೇ ಸಂಖ್ಯೆಯ ಟೋಕನ್ ನಮ್ಮದು. ಸರದಿಗಾಗಿ ಇನ್ನೂ ಐದಾರು ಗಂಟೆ ಕಾಯಬೇಕಾಗಬಹುದು. ಮೃತದೇಹ ಕೆಡದಂತೆ ಇಡಲು ಶೀತಲ ಶವಪೆಟ್ಟಿಗೆಯ ವ್ಯವಸ್ಥೆ ಮಾಡಿದ್ದಾರೆ' ಎಂದು ರಾಹುಲ್ ತಿಳಿಸಿದರು.

'ತಂದೆಯನ್ನು ಕಳೆದುಕೊಂಡು ನಾವು ಮೊದಲೇ ಮಾನಸಿಕವಾಗಿ ಜರ್ಝರಿತರಾಗಿದ್ದೇವೆ. ಈನಡುವೆ, ಮೃತದೇಹ ಇಟ್ಟುಕೊಂಡು ಅಂತ್ಯಕ್ರಿಯೆಗೆ ಅವಕಾಶ ಸಿಗುತ್ತದೋ ಇಲ್ಲವೋ ಎಂದು ಆತಂಕದಲ್ಲಿ ಕ್ಷಣ ಕಳೆಯುವುದು ನಿಜಕ್ಕೂ ಕ್ರೂರ ಪರಿಸ್ಥಿತಿ. ಏನೇ ತಾಂತ್ರಿಕ ಸಮಸ್ಯೆ ಇದ್ದರೂ ಸರ್ಕಾರ ಅದನ್ನು ತಕ್ಷಣವೇ ಬಗೆಹರಿಸಬೇಕು' ಎಂದರು.

'ತಾಂತ್ರಿಕ ಸಮಸ್ಯೆ ಬಗೆಹರಿಸುತ್ತೇವೆ'

'ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆಗೆ ಗೊತ್ತುಪಡಿಸಿದ ಸ್ಮಶಾನಗಳಲ್ಲಿ ಅನ್ಯ ಕಾಯಿಲೆಗಳಿಂದ ಸತ್ತವರ ಅಂತ್ಯಕ್ರಿಯೆ ನಡೆಸುವುದು ಬೇಡ ಎಂಬ ಕಾರಣಕ್ಕೆ ಎಸ್‌ಆರ್‌ಎಫ್ ಸಂಖ್ಯೆ ಅಥವಾ ಬಿ.ಯು ಸಂಖ್ಯೆ ಪಡೆಯುವಂತೆ ಸೂಚನೆ ನೀಡಿದ್ದೆವು. ಈ ರೀತಿಯ ತಾಂತ್ರಿಕ ಸಮಸ್ಯೆಗಳನ್ನು ನಿವಾರಿಸಲು ಶೀಘ್ರವೇ ಕ್ರಮ ಕೈಗೊಳ್ಳುತ್ತೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

'ರೂಪಾಂತರಗೊಂಡ ಸೋಂಕು ರ‍್ಯಾಪಿಡ್ ಆಂಟಿಜೆನ್ ಪರೀಕ್ಷೆ ಅಥವಾ ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ದೃಢಪಡುತ್ತಿಲ್ಲ ಎಂಬ ಅನೇಕ ದೂರುಗಳು ಬರುತ್ತಿವೆ. ಈ ಬಗ್ಗೆ ತಾಂತ್ರಿಕ ಪರಿಣಿತರು ದೃಢಪಡಿಸಬೇಕು. ಸರ್ಕಾರದ ಇಂತಹ ಪ್ರಕರಣಗಳಲ್ಲಿ ಏನು ಕ್ರಮ ಅನುಸರಿಸಬೇಕು ಎಂಬ ಬಗ್ಗೆ ಮಾರ್ಗಸೂಚಿ ಹೊರಡಿಸಬೇಕು. ಈ ಬಗ್ಗೆ ಸರ್ಕಾರದ ಗಮನಕ್ಕೂ ತರುತ್ತೇವೆ' ಎಂದರು.

> ತಂದೆಯ ಮೃತದೇಹವನ್ನು ಇಟ್ಟುಕೊಂಡು ನಾವು ಅನುಭವಿಸಿದ ಪರಿಸ್ಥಿತಿ ನಮಗೆ ಮಾತ್ರ ಗೊತ್ತು. ನಮಗಾದ ಪರಿಸ್ಥಿತಿ ಬೇರಾವ ಕುಟುಂಬಕ್ಕೂ ಬಾರದಿರಲಿ
> **ರಾಹುಲ್ ಶೆಣೈ**

ಸ್ಪಂದನೆ: ನಿಮ್ಮ ನೋವಿಗೆ ನಮ್ಮ ಧ್ವನಿ

ಎರಡನೇ ಡೋಸ್‌ಗೆ ಪಡಿಪಾಟಲು

ಬೆಂಗಳೂರು: ಎರಡನೇ ಡೋಸ್ ಕೋವಿಡ್ ಲಸಿಕೆ ಸಿಗದೆ ಪಡಿಪಾಟಲು ಅನುಭವಿಸುತ್ತಿರುವ ನಿವೃತ್ತ ಪೊಲೀಸ್ ಅಧಿಕಾರಿ ಹಾಗೂ ಕೆಂಗೇರಿ ಉಪನಗರ ವಿಶ್ವೇಶ್ವರಯ್ಯ ಬಡಾವಣೆಯ ನಿವಾಸಿ ಚಂದ್ರಕಾಂತ ಭಂಡಾರೆ ತಮ್ಮ ಗೋಳನ್ನು ಹೇಳಿಕೊಂಡಿದ್ದಾರೆ.

'ನಿವೃತ್ತ ಪೊಲೀಸ್ ಅಧಿಕಾರಿಯಾಗಿರುವ ನಾನು ಮಾ.24ರಂದು ನಾಗರಬಾವಿಯಲ್ಲಿರುವ ಜಿ.ಎಂ.ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದುಕೊಂಡಿದ್ದೆ. ಆ ವೇಳೆ ಆನ್‌ಲೈನ್ ಮೂಲಕ ಹೆಸರು ನೋಂದಾಯಿಸಿದ ಪರಿಣಾಮ ಲಸಿಕೆ ಪಡೆದುಕೊಳ್ಳುವುದು ಸಮಸ್ಯೆಯಾಗಿರಲಿಲ್ಲ. 28 ದಿನಗಳ ಬಳಿಕ ಎರಡನೇ ಡೋಸ್ ಪಡೆದುಕೊಳ್ಳಲು ನೋಂದಾಯಿತ ಮೊಬೈಲ್ ಸಂಖ್ಯೆಗೆ ಸಂದೇಶ ಬರುತ್ತದೆ ಎಂದು ಆಸ್ಪತ್ರೆ ಸಿಬ್ಬಂದಿ ತಿಳಿಸಿದ್ದರು. ಆದರೆ, ತಿಂಗಳು ಕಳೆದರೂ ಸಂದೇಶ ಬಂದಿಲ್ಲ. ಹೀಗಾಗಿ, ವಿಚಾರಿಸಿದೆ. 'ಸರ್ಕಾರವು ಲಸಿಕೆಯನ್ನು ಪೂರೈಕೆ ಮಾಡದ್ದರಿಂದ ಈಗ ಲಸಿಕೆ ದಾಸ್ತಾನು ಇಲ್ಲ. ಲಸಿಕೆ ಬಂದ ಬಳಿಕ ತಿಳಿಸಲಾಗುತ್ತದೆ' ಎಂದು ಆಸ್ಪತ್ರೆಯವರು ತಿಳಿಸಿದ್ದಾರೆ. ಯಾವಾಗ ಎರಡನೇ ಡೋಸ್ ಸಿಗಲಿದೆ ಎಂಬುದರ ಬಗ್ಗೆ ನಮಗೆ ಖಚಿತತೆ ಇಲ್ಲದಂತಾಗಿದೆ. ನನ್ನ ಹಾಗೆಯೇ ಹಲವರು ಎರಡನೇ ಡೋಸ್‌ಗೆ ಎದುರು ನೋಡುತ್ತಿದ್ದಾರೆ. ಸರ್ಕಾರವು ಲಸಿಕೆ ಪೂರೈಕೆಗೆ ಆದ್ಯತೆ ನೀಡಬೇಕು. ಈ ಮೂಲಕ ಸಾರ್ವಜನಿಕರಿಗೆ ರಕ್ಷಣೆ ಒದಗಿಸಬೇಕು' ಎಂದು ಅವರು ಹೇಳಿದ್ದಾರೆ.



ಚಂದ್ರಕಾಂತ ಭಂಡಾರೆ

ಆಸ್ಪತ್ರೆಯ ಪ್ರತಿಕ್ರಿಯೆ: 'ಸದ್ಯ ಆಸ್ಪತ್ರೆಯಲ್ಲಿ ಲಸಿಕೆ ದಾಸ್ತಾನು ಇಲ್ಲ. ಹಾಗಾಗಿ, ಯಾರಿಗೂ ಲಸಿಕೆ ನೀಡುತ್ತಿಲ್ಲ. ಮೂರು ದಿನಗಳಿಂದ ಲಸಿಕೆ ವಿತರಣೆ ಸ್ಥಗಿತ ಮಾಡಲಾಗಿದೆ. ಸೋಮವಾರ ಲಸಿಕೆ ಪೂರೈಕೆ ಯಾಗುವ ಸಾಧ್ಯತೆಯಿದೆ. ಬಳಿಕ ಮೊದಲ ಡೋಸ್ ಪಡೆದವರಿಗೆ ಸಂದೇಶ ರವಾನಿಸಲಾಗುತ್ತದೆ' ಎಂದು ಜಿ.ಎಂ. ಆಸ್ಪತ್ರೆಯ ಪ್ರತಿನಿಧಿಯೊಬ್ಬರು ತಿಳಿಸಿದರು.

ಹಜ್ ಮತ್ತು ವಕ್ಫ್ ಖಾತೆ ಸಚಿವ ಆನಂದ್ ಸಿಂಗ್ ವ್ಯಂಗ್ಯ

‘ಕಿಕ್‌ಬ್ಯಾಕ್ ಅರ್ಥ ಗೊತ್ತಿಲ್ಲ’

ಪ್ರಜಾವಾಣಿ ವಾರ್ತೆ



ಹೊಸಪೇಟೆ (ವಿಜಯನಗರ): ‘ಕಿಕ್‌ಬ್ಯಾಕ್ ಅರ್ಥ ನನಗೆ ಗೊತ್ತಿಲ್ಲ. ಅರ್ಥ ಹೇಳಿದರೆ ಪ್ರತಿಕ್ರಿಯಿಸುವೆ. ಕಿಕ್‌ಬ್ಯಾಕ್ ಅಂದರೆ ಹಿಂದೆ ಒದೆ ಎಂಬ ಮಾತಿದೆ. ಆದರೆ, ಈ ಕಿಕ್‌ಬ್ಯಾಕ್ ಅರ್ಥ ಗೊತ್ತಿಲ್ಲ’ ಎಂದು ಮೂಲಸೌಕರ್ಯ ಅಭಿವೃದ್ಧಿ, ಹಜ್ ಮತ್ತು ವಕ್ಫ್ ಖಾತೆ ಸಚಿವ ಆನಂದ್ ಸಿಂಗ್ ವ್ಯಂಗ್ಯವಾಡಿದರು.

‘ಜಿಂದಾಲ್‌ಗೆ ಜಮೀನು ಪರಭಾರೆ ವಿಷಯಕ್ಕೆ ಈ ಹಿಂದೆ ವಿರೋಧಿಸಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವ ಆನಂದ್ ಸಿಂಗ್ ಹಾಗೂ ಬಿಜೆಪಿಯವರು ಈಗ ಮಾರಾಟ ಮಾಡಿದ್ದು ನೋಡಿದರೆ ಕಿಕ್‌ಬ್ಯಾಕ್ ಪಡೆದಿರುವ ಅನುಮಾನ ಬರುತ್ತಿದೆ’ ಎಂದು ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಮಾಡಿರುವ ಗಂಭೀರ ಆರೋಪದ ಕುರಿತು ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

‘ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಯಾವುದೇ ಸರ್ಕಾರವಿರಲಿ ಕಾರ್ಖಾನೆಗಳಿಗೆ ಜಮೀನು ಮಾರಾಟ ಮಾಡುವುದಕ್ಕೆ ಹಿಂದಿನಿಂದಲೂ ನನ್ನ ವಿರೋಧವಿದೆ. ಯಾವುದೇ ಕಾರ್ಖಾನೆಗೆ ಭೂಮಿ ಕೊಡಬೇಕಾದರೆ ನೀತಿ ರೂಪಿಸಬೇಕು. 50, 100 ವರ್ಷಗಳಾದರೂ ಜಮೀನು ಕೊಡಲಿ. ಒಂದು ವೇಳೆ ಭವಿಷ್ಯದಲ್ಲಿ ಕಾರ್ಖಾನೆ ಮುಚ್ಚಿದರೆ ಆ ಜಮೀನು ಪುನಃ ಸರ್ಕಾರಕ್ಕೆ ಸೇರಬೇಕು ಎನ್ನುವುದು ನನ್ನ ವಾದ’ ಎಂದು ಹೇಳಿದರು.

‘ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸಿದ್ದರೆ ಸರ್ಕಾರದ ನಿರ್ಧಾರ ವಿರೋಧಿಸುತ್ತಿದ್ದೆ. ಅದು ತಪ್ಪು ಎಂದು ಹೇಳುತ್ತಿದ್ದೆ. ಕೋವಿಡ್ ವ್ಯಾಪಕವಾಗಿ ಹರಡುತ್ತಿದೆ. ಮನುಷ್ಯನ ಪ್ರಾಣ ಮುಖ್ಯವಾದ್ದರಿಂದ ಸಂಪುಟ ಸಭೆಗೆ ಹೋಗುವುದರ ಬದಲು ಜಿಲ್ಲೆಯ ಎಲ್ಲ ತಾಲ್ಲೂಕುಗಳಿಗೆ ಭೇಟಿ ನೀಡಿ ಕೋವಿಡ್ ನಿಯಂತ್ರಣಕ್ಕೆ ಏನೇನು ಕ್ರಮ ಕೈಗೊಳ್ಳಬೇಕು ಎನ್ನುವುದರ ಬಗ್ಗೆ ಸಮಾಲೋಚನೆಯಲ್ಲಿ ತೊಡಗಿದ್ದೆ. ಸಂಪುಟ ಸಭೆಯ ಅಜೆಂಡಾ ನೋಡಬೇಕಿತ್ತು. ಆದರೆ, ನೋಡಲು ಸಾಧ್ಯವಾಗಿರಲಿಲ್ಲ’ ಎಂದು ಪುನರುಚ್ಚರಿಸಿದರು.

‘ಜಮೀನು ಪರಭಾರೆ ಮಾಡಿರುವುದಕ್ಕೆ ಆನಂದ್ ಸಿಂಗ್ ವಿಷಾದ ವ್ಯಕ್ತಪಡಿಸಿದ್ದಾರೆ ಎಂದು ಕೆಲ ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ, ನಾನು ಎಲ್ಲಿಯೂ ವಿಷಾದ ವ್ಯಕ್ತಪಡಿಸಿಲ್ಲ. ಈಗಲೂ ನನ್ನ ಮೊದಲಿನ ನಿಲುವಿಗೆ ಬದ್ಧನಾಗಿದ್ದೇನೆ. ನನ್ನ ನಿಲುವು ಬದಲಿಸಿಲ್ಲ’ ಎಂದು ಸ್ಪಷ್ಟಪಡಿಸಿದರು.

ಮೋದಿ ಅವಹೇಳನ: ಪತಿ ತಪ್ಪಿಗೆ ಪತ್ನಿಯ ಸದಸ್ಯತ್ವಕ್ಕೆ ಕೋಕ್

ಮುಡಿಪು (ದಕ್ಷಿಣ ಕನ್ನಡ): ಫೇಸ್‌ಬುಕ್ ಖಾತೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಅವಹೇಳನಕಾರಿಯಾಗಿ ಪೋಸ್ಟ್ ಹಾಕಿದ್ದ ಲುಕ್ಮಾನ್ ಅಡ್ಯಾರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಬಿಜೆಪಿ ಅಲ್ಪಸಂಖ್ಯಾತ ವಿಭಾಗದ ಮುಖಂಡರು ಕೊಣಾಜೆ ಠಾಣೆಗೆ ದೂರು ನೀಡಿದ್ದಾರೆ.

‘ಕೊರೊನಾದಿಂದ ಸತ್ತವರ ಶವದ ಪೋಟೊ ಹಾಕಿರುವ ಲುಕ್ಮಾನ್ ಅಡ್ಯಾರ್, ‘ದೇಶದಲ್ಲಿ ಜನರು ಈ ರೀತಿ ಸಾಯಲು ಕಾರಣರಾದ ದೇಶದ ಪ್ರಧಾನಿಯೂ ಬೀದಿ ಬದಿಯಲ್ಲಿ ನರಕಯಾತನೆ ಅನುಭವಿಸಿ ಸಾಯುವಂತಾಗಲು ಎಲ್ಲ ಪ್ರಾರ್ಥಿಸಬೇಕು’ ಎಂದು ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಮಧ್ಯೆ ಲುಕ್ಮಾನ್ ಅಡ್ಯಾರ್ ಅವರ ಪತ್ನಿ ನಸ್ರೀನ ಮಿಸ್ರಿಯಾ ಅವರ ಸದಸ್ಯತ್ವವನ್ನು ರದ್ದು ಮಾಡಿ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಪೂರ್ಣಿಮಾ ಆದೇಶಿಸಿದ್ದಾರೆ.

‘ದೇಶದ ಪ್ರಧಾನಿಯವರ ಬಗ್ಗೆ ಅತ್ಯಂತ ಕಠೋರವಾದ ಹಾಗೂ ಕಾನೂನಿಗೆ ವಿರುದ್ಧವಾದ ಪೋಸ್ಟ್‌ಗಳನ್ನು ನಿಮ್ಮ ಪತಿ ಹಾಕಿದ್ದಾರೆ. ದೇಶದ ಪ್ರಧಾನಿಯ ಸಾವನ್ನು ಬಯಸುವವರ ಹೆಂಡತಿಯ ನಿಮ್ಮ ಅಕಾಡೆಮಿ ಸದಸ್ಯರಾಗಿ ಸಮಿತಿಯಲ್ಲಿ ಮುಂದುವರಿಯುವುದು ಸರಿಯಲ್ಲ ಹಾಗೂ ತಮ್ಮನ್ನು ತಕ್ಷಣವೇ ಅಕಾಡೆಮಿ ಸದಸ್ಯತ್ವದಿಂದ ವಜಾಗೊಳಿಸಲಾಗಿದೆ’ ಎಂದು ಅಧ್ಯಕ್ಷರ ಅನುಮತಿ ಮೇರೆಗೆ ರಿಜಿಸ್ಟ್ರಾರ್ ಆದೇಶ ಹೊರಡಿಸಿದ್ದಾರೆ. ಈ ಪತ್ರವೂ ಈಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಮದುವೆಗೆ ಹೆಚ್ಚು ಜನ: ಪಿಡಿಒ ಅಮಾನತು

ಶಿವಮೊಗ್ಗ: ಮದುವೆ ಮನೆಯಲ್ಲಿ ಕೋವಿಡ್ ಸುರಕ್ಷತಾ ನಿಯಮಗಳನ್ನು ಅನುಸರಿಸಿಲ್ಲ. ಸಮಾರಂಭದ ಮೇಲೆ ನಿಗಾ ವಹಿಸಿಲ್ಲ ಎಂಬ ಆರೋಪದ ಮೇಲೆ ಕುಂಚೇನಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ಎಸ್.ಕಾಂತರಾಜ್ ಅವರನ್ನು ಜಿಲ್ಲಾ ಪಂಚಾಯಿತಿ ಸಿಇಒ ಎಂ.ಎಲ್. ವೈಶಾಲಿ ಅಮಾನತು ಮಾಡಿದ್ದಾರೆ.

ಮದುವೆ ಸಮಾರಂಭದಲ್ಲಿ 50 ಜನರಷ್ಟೇ ಇರಬೇಕು ಎನ್ನುವ ನಿಯಮ ಇದ್ದರೂ ಹೆಚ್ಚಿನ ಜನರು ಸೇರಿದ್ದರು.ಅಲ್ಲಿಗೆದಿಢೀರ್‌ಭೇಟಿನೀಡಿದಅಧಿಕಾರಿಗಳು ಜನರಿಗೆ ದಂಡ ವಿಧಿಸಿದ್ದಾರೆ. ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ಪಿಡಿಒ ಅಮಾನತು ಮಾಡಿದ್ದಾರೆ.

ಮಹಿಳಾ ವಿವಿ ಪರೀಕ್ಷೆ ಮುಂದಕ್ಕೆ

ವಿಜಯಪುರ: ಮೇ 3 ರಿಂದ ಆರಂಭವಾಗಬೇಕಿದ್ದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಎಲ್ಲ ಸ್ನಾತಕ, ಸ್ನಾತಕೋತ್ತರ 1ನೇ ಮತ್ತು 3ನೇ ಸೆಮಿಸ್ಟರ್ ಪರೀಕ್ಷೆಗಳನ್ನು, ಕೋವಿಡ್-19 ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಮುಂದೂಡಲಾಗಿದೆ. ಹೆಚ್ಚಿನ ಮಾಹಿತಿಗಾಗಿಮಹಿಳಾವಿ.ವಿವೆಬ್‌ಸೈಟ್‌ನೋಡಬಹುದು ಎಂದು ಮಹಿಳಾ ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ. ರಮೇಶ್ ಕೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಲಸೆ ಕಾರ್ಮಿಕರಿಗೆ ಯಾದಗಿರಿಯಲ್ಲಿ ಮಾತ್ರ ತಪಾಸಣೆ; ಉಳಿದೆಡೆ ಇಲ್ಲ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ರಾಜ್ಯದಲ್ಲಿ ಲಾಕ್‌ಡೌನ್ ಘೋಷಣೆ ಆಗುತ್ತಿದ್ದಂತೆಯೇ ಕಲ್ಯಾಣ ಕರ್ನಾಟಕ ಪ್ರದೇಶದ ಹೆಚ್ಚಿನ ವಲಸೆ ಕಾರ್ಮಿಕರು ಬೆಂಗಳೂರು ಮತ್ತಿತರಡೆಯಿಂದ ತಮ್ಮ ಗ್ರಾಮಗಳಿಗೆ ಬಂದಿದ್ದಾರೆ.

ಕಲಬುರ್ಗಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಗ್ರಾಮಗಳಿಗೆ ಬಸ್, ರೈಲು ಮತ್ತು ಖಾಸಗಿ ವಾಹನಗಳಲ್ಲಿ ಬಂದ ಕಾರ್ಮಿಕರಿಗೆ ಎಲ್ಲಿಯೂ ಆರೋಗ್ಯ ತಪಾಸಣೆ ಮಾಡಲಿಲ್ಲ. ಆದರೆ, ಬೀದರ್ ಜಿಲ್ಲೆಯ ಕೆಲ ಚೆಕ್‌ಪೋಸ್ಟ್‌ಗಳಲ್ಲಿ ವಾಹನ ಪ್ರವೇಶಕ್ಕೆ ಅವಕಾಶ ಕಲ್ಪಿಸಲಿಲ್ಲ.

‘ಯಾದಗಿರಿ ಜಿಲ್ಲೆ ಹುಣಸಗಿ ತಾಲ್ಲೂಕಿನ ನಾರಾಯಣಪುರ ಚೆಕ್‌ಪೋಸ್ಟ್‌ನಲ್ಲಿ 322 ಹಾಗೂ ಮಾಳನೂರ ಚೆಕ್‌ಪೋಸ್ಟ್‌ನಲ್ಲಿ 177 ಜನರಿಂದ ಕೋವಿಡ್ ತಪಾಸಣೆಗೆ ಗಂಟಲು–ಮೂಗಿನ ದ್ರವ ಪಡೆಯಲಾಗಿದೆ. ಪ್ರತಿಯೊಬ್ಬರೂ ಹೋಂ ಕ್ವಾರಂಟೈನ್ ಆಗಿ, ಮನೆಯ ಒಂದು ಕೋಣೆಯಲ್ಲಿ 15 ದಿನಗಳವರೆಗೆ ಇರುವಂತೆ ಸೂಚಿಸಲಾಗಿದೆ’ ಎಂದು ತಹಶೀಲ್ದಾರ್ ಮಹಾದೇವಪ್ಪಗೌಡ ಬಿರಾದಾರ ತಿಳಿಸಿದರು.


ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ನಾರಾಯಣಪುರದ ಗಡಿ ಚೆಕ್‌ಪೋಸ್ಟ್‌ನಲ್ಲಿ ಬಸ್ ಮತ್ತು ಇತರೆ ವಾಹನಗಳಲ್ಲಿ ಬಂದ ಜನರನ್ನು ಕೋವಿಡ್ ತಪಾಸಣೆಗೆ ಒಳಪಡಿಸಲಾಯಿತು

‘ರಾಯಚೂರು ಜಿಲ್ಲೆಯ ಲಿಂಗಸುಗೂರು, ಮಸ್ಕಿ, ದೇವದುರ್ಗ ತಾಲ್ಲೂಕಿನ ಗ್ರಾಮಗಳಿಗೆ ಸಾವಿರಾರು ಸಂಖ್ಯೆಯಲ್ಲಿ ಕಾರ್ಮಿಕರು ಮರಳಿದ್ದಾರೆ. ಅನಾರೋಗ್ಯ ಕಾಡಿದ್ದಲ್ಲಿ, ತಕ್ಷಣವೇ ಚಿಕಿತ್ಸೆ ಪಡೆಯಲು ಕಾರ್ಮಿಕರಿಗೆ ತಿಳಿಸಲಾಗಿದೆ’ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳಿದರು.

ದುಡಿಯಲು ಕಲಬುರ್ಗಿಗೆ ಬಂದಿದ್ದ ಒಡಿಶಾ ಮೂಲದ ಹೋಟೆಲ್ ಕಾರ್ಮಿಕರು ತಮ್ಮೂರಿಗೆ ಮರಳಲು ರೈಲು ನಿಲ್ದಾಣದಲ್ಲಿ ಕಾದು ಕೂತಿದ್ದರು.

ಕೋವಿಡ್ ಸೋಂಕಿತನ ಶವಕ್ಕೆ ಪೆಟ್ಟು:ವಿಡಿಯೊ ವೈರಲ್

ಶಿರಸಿ: ಕೋವಿಡ್‌ನಿಂದ ಮೃತಪಟ್ಟಿದ್ದ ವೃದ್ಧರೊಬ್ಬರ ತಲೆಗೆ ಬಲವಾದ ಪೆಟ್ಟು ಬಿದ್ದು ರಕ್ತ ಸೋರಿಕೆಯಾಗಿದ್ದು ಅವರ ಶವಸಂಸ್ಕಾರ ನಡೆಸುವ ವೇಳೆ ಗಮನಿಸಿದ ಕುಟುಂಬಸ್ಥರು ಅಸಮಾಧಾನ ವ್ಯಕ್ತಪಡಿಸಿದ ದೃಶ್ಯವೊಂದು ಜಾಲತಾಣದಲ್ಲಿ ಬುಧವಾರ ವೈರಲ್ ಆಗಿದೆ.

ತಾಲ್ಲೂಕಿನ ಬೇಲೇನಳ್ಳಿಯ ಮಂಜುನಾಥ ಪಟಗಾರ (70) ಮೃತ ವ್ಯಕ್ತಿ. ಅವರ ಶವಸಂಸ್ಕಾರದ ವೇಳೆ ಶವಕ್ಕೆ ಹೊದಿಸಲಾಗಿದ್ದ ಪಿಪಿಇ ಕಿಟ್‌ಗೆ ರಕ್ತದ ಕಲೆ ಆಗಿರುವುದನ್ನು ಗಮನಿಸಿದ ಅವರ ಮಗ ಆಸ್ಪತ್ರೆ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿರುವುದು ದೃಶ್ಯದಲ್ಲಿದೆ. ಕಿಟ್ ಬಿಡಿಸಿ ನೋಡಿದ ವೇಳೆ ತಲೆಗೆ ಪೆಟ್ಟು ಬಿದ್ದಿದ್ದು ಕಂಡು ಕುಟುಂಬದವರು ಆಕ್ರೋಶಗೊಂಡಿದ್ದೂ ವಿಡಿಯೋದಲ್ಲಿ ದಾಖಲಾಗಿದೆ.

‘ಆಸ್ಪತ್ರೆಯವರು ಸಾವಿಗೆ ನಿಖರ ಕಾರಣ ತಿಳಿಸಲಿಲ್ಲ. ಕೋವಿಡ್ ಕಾರಣವಿರಬಹುದು, ಇಲ್ಲದೆಯೂ ಇರಬಹುದು ಎಂದು ಹೇಳಿದ್ದಾರೆ. ಶವಕ್ಕೆ ಹೊದಿಸಿದ್ದ ಕಿಟ್ ತೆಗೆಯದೆ ಅಂತ್ಯಸಂಸ್ಕಾರ ನಡೆಸುವಂತೆ ಹೇಳಿದ್ದಾರೆ. ಆದರೆ, ಅನುಮಾನ ಕಾಡುತ್ತಿದೆ’ ಎಂದು ಮೃತರ ಮಗ ಹೇಳುತ್ತಿರುವುದು ದೃಶ್ಯದಲ್ಲಿ ದಾಖಲಾಗಿದೆ.

‘ಜ್ವರ ಮತ್ತು ಉಸಿರಾಟ ಸಮಸ್ಯೆಯಿಂದ ಬಳಲಿದ್ದ ಕಾರಣಕ್ಕೆ ಮಂಜು ಪಟಗಾರ ಅವರನ್ನು ಮಂಗಳವಾರ ಪಂಡಿತ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕೋವಿಡ್ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಶೌಚಾಲಯದಲ್ಲಿ ಬಿದ್ದು ಗಂಭೀರ ಸ್ಥಿತಿಯಲ್ಲಿದ್ದರು. ಬದುಕಿಸಲು ಪ್ರಯತ್ನಿಸಿದರೂ ಉಳಿಯಲಿಲ್ಲ’ ಎಂದು ವೈದ್ಯಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಿಧನ ವಾರ್ತೆ

ಪುಟ್ಟಣ್ಣ ಕಣಗಾಲ್ ಪುತ್ರ ರಾಮು



ಬೆಂಗಳೂರು: ಹಿರಿಯ ಚಿತ್ರ ನಿರ್ದೇಶಕ ದಿವಂಗತ ಪುಟ್ಟಣ್ಣ ಕಣಗಾಲ್ ಅವರ ಪುತ್ರ, ನೃತ್ಯ ನಿರ್ದೇಶಕ ರಾಮು (53) ಬುಧವಾರ ಕೋವಿಡ್‌ನಿಂದಾಗಿ ನಿಧನರಾದರು. ಸೋಂಕಿಗೆ ಒಳಗಾಗಿದ್ದ ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಅವರಿಗೆ ಸಕಾಲದಲ್ಲಿ ಆಕ್ಸಿಜನ್ ವ್ಯವಸ್ಥೆ ಇರುವ ಬೆಡ್ ಸಿಕ್ಕಿರಲಿಲ್ಲ.

ಅವರು ಓದಿದ್ದು ಚೆನ್ನೈನಲ್ಲಿ. ನಗರದಲ್ಲಿ ಅವರು ಕಣಗಾಲ್ ನೃತ್ಯಾಲಯ ಹೆಸರಿನ ನಾಟ್ಯ ಶಾಲೆ ನಡೆಸುತ್ತಿದ್ದರು.

ಮೇಕಪ್ ಸೀನಣ್ಣ



ಬೆಂಗಳೂರು: ಚಂದನವನದಲ್ಲಿ ‘ಮೇಕಪ್ ಸೀನಣ್ಣ’ ಎಂದೇ ಗುರುತಿಸಿಕೊಂಡಿದ್ದ ಖ್ಯಾತ ಪ್ರಸಾಧನ ಕಲಾವಿದ ಶ್ರೀನಿವಾಸ್(46) ಕೋವಿಡ್‌ನಿಂದ ನಿಧನರಾಗಿದ್ದಾರೆ.

ಜ್ವರದಿಂದ ಬಳಲುತ್ತಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಉಸಿರಾಟದ ಸಮಸ್ಯೆಯಿಂದ ಬುಧವಾರ ಬೆಳಗ್ಗೆ ಮೃತಪಟ್ಟಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಕಳೆದ 25 ವರ್ಷಗಳಿಂದ ಮೇಕಪ್‌ಮ್ಯಾನ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಹಲವು ಸ್ಟಾರ್ ನಟರಿಗೆ ಬಣ್ಣ ಹಚ್ಚಿದ್ದಾರೆ. ಪ್ರಸ್ತುತ ವರ್ಣಾಲಂಕಾರ ಹಾಗೂ ಕೇಶಾಲಂಕಾರ ಕಲಾವಿದ ಸಂಘದ ಉಪಾಧ್ಯಕ್ಷರಾಗಿದ್ದರು.

ಮೂಗಿಗೆ ನಿಂಬೆರಸ: ಶಿಕ್ಷಕ ಸಾವು

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ಇಲ್ಲಿಯ ನಟರಾಜ ಕಾಲೊನಿಯ ಶಿಕ್ಷಕ ಬಸವರಾಜ (43) ಅವರು ಬುಧವಾರ ಬೆಳಿಗ್ಗೆ ಮೂಗಿನಲ್ಲಿ ನಿಂಬೆರಸ ಹಾಕಿಕೊಂಡಿದ್ದರಿಂದ ಆರೋಗ್ಯದಲ್ಲಿ ಏರುಪೇರಾಗಿ, ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

‘ನಿಂಬೆರಸ ಹಾಕಿಕೊಂಡ ನಂತರ ಎರಡು ಬಾರಿ ವಾಂತಿಯಾಯಿತು. ನಂತರ ನೆಲಕ್ಕೆ ಕುಸಿದಿದ್ದರಿಂದ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆದರೂ ಪ್ರಯೋಜನವಾಗಲಿಲ್ಲ. ಅವರಿಗೆ ಆರೋಗ್ಯದ ಯಾವುದೇ ಸಮಸ್ಯೆ ಇರಲಿಲ್ಲ’ ಎಂದು ಕುಟುಂಬದವರು ‘ಪ್ರಜಾವಾಣಿ’ಗೆ ತಿಳಿಸಿದರು.

ತಾಲ್ಲೂಕು ರಾಮತ್ನಾಳದ ಬಸವರಾಜ ಅವರು 2002ರಲ್ಲಿ ಸಿಂಧನೂರಿನ ಶರಣಬಸವೇಶ್ವರ ಕಾಲೊನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕರಾಗಿ ನೇಮಕವಾಗಿದ್ದರು.


ಬಸವರಾಜ

‘ಮೂಗಿನಲ್ಲಿ ನಿಂಬೆರಸ ಹಾಕಿಕೊಂಡಾಗ ಆಕಸ್ಮಿಕವಾಗಿ ಅದು ಧ್ವನಿ ಪೆಟ್ಟಿಗೆ (ಲ್ಯಾರಿಂಕ್ಸ್) ತಲುಪಿದರೆ ಖಂಡಿತವಾಗಿಯೂ ಉಸಿರಾಟದಲ್ಲಿ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಇದರಿಂದ ಸಾವು ಉಂಟಾಗುವ ಸಾಧ್ಯತೆಯೂ ಇದೆ’ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ರಾಮಕೃಷ್ಣ ಪ್ರತಿಕ್ರಿಯಿಸಿದರು.

ಸೋಮೇಶ್ವರ ರಥೋತ್ಸವ: ಪ್ರಕರಣ ದಾಖಲು

ಉಳ್ಳಾಲ: ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿ ರಥೋತ್ಸವ ನಡೆಸಿದ ಸೋಮೇಶ್ವರ ದೇವಸ್ಥಾನದ ಆಡಳಿತ ಮಂಡಳಿ, ಅಧ್ಯಕ್ಷರ ವಿರುದ್ಧ ಸಾಂಕ್ರಾಮಿಕ ರೋಗ ಹರಡುವಿಕೆ ಕಾಯ್ದೆಯ ಕಲಂ 5 ರಡಿ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಪ್ರಕರಣ ದಾಖಲಾಗಿದೆ.

ಏ.26 ರಂದು ಬ್ರಹ್ಮರಥೋತ್ಸವ ನಡೆದಿತ್ತು. ಈ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಫೋಟೊ, ವಿಡಿಯೊ ವೈರಲ್ ಆಗುತ್ತಿದ್ದಂತೆ ಜಿಲ್ಲಾಧಿಕಾರಿ ಕ್ರಮಕ್ಕೆ ಸೂಚಿಸಿದ್ದರು.

ಪೌಷ್ಟಿಕ ಆಹಾರ ಸೇವಿಸಿ

ಉಮೇಶ ಕತ್ತಿ ವಜಾ ಮಾಡಿ: ಡಿಕೆಶಿ

ಅಕ್ಕಿ ಕೇಳಿದ ರೈತನಿಗೆ ಸಾಯಿ ಎಂದ ಸಚಿವ ಉಮೇಶ ಕತ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರದಿಂದ ಬರುತ್ತಿದ್ದ 5 ಕಿಲೋ ಅಕ್ಕಿಯನ್ನು 2 ಕಿಲೋಗೆ ಇಳಿಸಿರುವುದನ್ನು ಪ್ರಶ್ನಿಸಿದ ಬಡ ರೈತನಿಗೆ, ‘ಸತ್ತರೆ ಸಾಯಿ’ ಎಂದು ಹೇಳಿದ ಆಹಾರ ಸಚಿವ ಉಮೇಶ ಕತ್ತಿ ಅವರನ್ನು ಸಚಿವ ಸ್ಥಾನದಿಂದ ತಕ್ಷಣ ವಜಾಗೊಳಿಸಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಕ್ಕಿ ಕೇಳಿದಾಗ ಈ ರೀತಿ ಹೇಳುವುದಾರೆ ಮಂತ್ರಿಯಾಗಿ ಏಕಿರಬೇಕು. ಕತ್ತಿ ಅವರದು ಉಡಾಫೆ ಮಾತಲ್ಲ, ಹೊಣೆಗಾರಿಕೆ ಪ್ರಶ್ನೆ’ ಎಂದರು.

‘ಕತ್ತಿ ಕ್ಷಮೆ ಕೇಳುವುದು ಬೇಡ. ಕತ್ತಿ ಹೇಳಿಕೆಗೆ ಮುಖ್ಯಮಂತ್ರಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೇರಿ ಬಿಜೆಪಿ ಮುಖಂಡರು ಉತ್ತರಿಸಬೇಕು’ ಎಂದೂ ಆಗ್ರಹಿಸಿದರು.

‘ಪಡಿತರ ಚೀಟಿದಾರರಿಗೆ 2 ಕಿಲೋ ಬದಲು 10 ಕಿಲೋ ಅಕ್ಕಿ ನೀಡಬೇಕು ಎಂದು ಆಗ್ರಹಿಸಿ ಪತ್ರ ಚಳವಳಿ ಮೂಲಕ ಮುಖ್ಯಮಂತ್ರಿಗಳನ್ನು ಆಗ್ರಹಿಸುತ್ತೇವೆ. ಪಕ್ಷದ ಎಲ್ಲ ಜಿಲ್ಲೆಗಳ ಅಧ್ಯಕ್ಷರು ಪದಾಧಿಕಾರಿಗಳು, ಕಾರ್ಯಕರ್ತರು ಇದರಲ್ಲಿ ಭಾಗವಹಿಸಬೇಕು. ಸಾರ್ವಜನಿಕರು ಕೂಡ ಚಳವಳಿಯಲ್ಲಿ ಭಾಗವಹಿಸಬೇಕು’ ಎಂದು ಮನವಿ ಮಾಡಿದರು.

ಸರ್ಕಾರವೇ ಪೂರೈಸಲಿ: ‘ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರವೇ ರೆಮ್‌ಡಿಸಿವಿರ್ ಔಷಧ ಮತ್ತು ಆಕ್ಸಿಜನ್ ಪೂರೈಸಲಿ. ಲಸಿಕೆ ಪಡೆಯಲು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಲು ಬಡವರು, ಅವಿದ್ಯಾವಂತರು, ಮುಗ್ಧರಿಗೆ ಸಾಧ್ಯವಿಲ್ಲ. ಹೀಗಾಗಿ, ಈ ವ್ಯವಸ್ಥೆ ತಪ್ಪಿಸಿ, ಮನೆ ಬಾಗಿಲಿಗೆ ಹೋಗಿ ಲಸಿಕೆ ನೀಡಬೇಕು’ ಎಂದರು.

‘ಕಳೆದ ವರ್ಷ ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡಿದ ಖಾಸಗಿ ಆಸ್ಪತ್ರೆಗಳಿಗೆ ಬಾಕಿ ಉಳಿಸಿಕೊಂಡಿರುವ ಹಣವನ್ನು ಸರ್ಕಾರ ತಕ್ಷಣ ಬಿಡುಗಡೆ ಮಾಡಬೇಕು’ ಎಂದೂ ಶಿವಕುಮಾರ್ ಆಗ್ರಹಿಸಿದರು. ಅದಕ್ಕೂ ಮೊದಲು ಪಕ್ಷದ ಜಿಲ್ಲಾ ಅಧ್ಯಕ್ಷರು ಮತ್ತು ಶಾಸಕರ ಜೊತೆ ಸಭೆ ನಡೆಸಿದರು.

ಪ್ರತಿಭಟನೆ: ಉಮೇಶ ಕತ್ತಿ ಹೇಳಿಕೆ ಖಂಡಿಸಿ ಕಾಂಗ್ರೆಸ್ ಭವನದ ಎದುರು ಪ್ರತಿಭಟನೆ ನಡೆಯಿತು. ಕತ್ತಿ ಅವರ ಅಣಕು ಶವಯಾತ್ರೆ ನಡೆಸಿದ ಕಾರ್ಯಕರ್ತರು ಧಿಕ್ಕಾರ ಕೂಗಿದರು. ಶಿವಕುಮಾರ್ ಹಾಗೂ ಪಕ್ಷದ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಭಾಗವಹಿಸಿದ್ದರು.

ಒಂದನೇ ಪುಟದಿಂದ...

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ‘ನಾನು ಯಾರೊಂದಿಗೂ ಆ ರೀತಿ ಮಾತನಾಡಿಯೇ ಇಲ್ಲ’ ಎಂದು ವಾದಿಸಿದರು. ಆ ಬಳಿಕ, ‘ಸತ್ತು ಹೋಗೋದಾ ಎಂದು ಕೇಳಿದವರಿಗೆ ಏನೆನ್ನುವುದು? ಸತ್ತು ಹೋದರೆ ಒಳ್ಳೆಯದು ಎಂದು ಆಡುಭಾಷೆಯಲ್ಲಿ ಹೇಳಿದ್ದೇನೆ. ಬದುಕು ಎಂದು ಹೇಳುವಷ್ಟು ದೊಡ್ಡ ಮನಸ್ಸು ನನಗಿಲ್ಲ. ರಾಜ್ಯದ ಪ್ರತಿಯೊಬ್ಬರೂ ಇದೇ ರೀತಿ ಕೇಳಿದರೆ ಎಷ್ಟು ಮಂದಿಗೆ ಉತ್ತರ ಕೊಡುವುದು?’ ಎಂದು ಸಮರ್ಥಿಸಿಕೊಂಡಿದ್ದರು.

ದೂರವಾಣಿ ಸಂಭಾಷಣೆ ವಿವರ:
ವ್ಯಕ್ತಿ: 2.ಕೆ.ಜಿ. ಅಕ್ಕಿ ಮಾಡಿದ್ದೀರಲ್ಲಾ ಸಾಲುತ್ತಾ?
ಸಚಿವ: 3 ಕೆ.ಜಿ. ರಾಗಿ ಕೊಡ್ತಿದ್ದೀವಿ.
ವ್ಯಕ್ತಿ: ನಮ್ಮ ಉತ್ತರ ಕರ್ನಾಟಕ ಭಾಗಕ್ಕೆ ರಾಗಿ ಎಲ್ಲಿ ಕೊಡುತ್ತೀರಾ?
ಸಚಿವ: ಉತ್ತರ ಕರ್ನಾಟಕ ಭಾಗಕ್ಕೆ ಜೋಳ ಮತ್ತು ಅಕ್ಕಿ ಮಾಡಿದ್ದೀವಿ.
ವ್ಯಕ್ತಿ: ಸಾಲುತ್ತಾ ಸಾರ್? ಈಗ ಲಾಕ್‌ಡೌನ್ ಬೇರೆ ಇದೆ. ದುಡಿಮೆ ಇಲ್ಲ.
ಸಚಿವ: ಕೇಂದ್ರ ಸರ್ಕಾರ ಕೊಡ್ತಿದೆ. ಮೇ, ಜೂನ್‌ನಲ್ಲಿ 5 ಕೆ.ಜಿ. ಅಕ್ಕಿ ಕೊಡುತ್ತದೆ.
ವ್ಯಕ್ತಿ: ಯಾವಾಗ ಕೊಡ್ತೀರಾ?
ಸಚಿವ: ಬರುವ ತಿಂಗಳು.
ವ್ಯಕ್ತಿ: ಅಲ್ಲಿವರೆಗೆ ಉಪವಾಸ ಇರದಾ ಸರ್? ಸತ್ಹೋಗ್‌ಬಿಡೋದಾ?
ಸಚಿವ: ಸತ್ತು ಹೋದರೆ ಒಳ್ಳೆಯದು. ಅದಕ್ಕಿಂತ, ಅಕ್ಕಿ ಮಾರುವ ದಂಧೆ ಬಂದ್ ಮಾಡಿ. ಮತ್ತೆ ಫೋನ್ ಮಾಡಬೇಡಿ.

ಅಕ್ಕಿ ಕಡಿತಕ್ಕೆ ಬದ್ಧ:ಉಮೇಶ ಕತ್ತಿ

ಬೆಳಗಾವಿ: ‘ಅಕ್ಕಿ ಕಡಿತ ಮಾಡಿರುವ ನಿರ್ಧಾರಕ್ಕೆ ಬದ್ಧವಾಗಿದ್ದೇನೆ. ಜನರಿಗೆ ಪೌಷ್ಟಿಕ ಆಹಾರ ಕೊಡಬೇಕು ಎನ್ನುವುದು ನಮ್ಮ ಉದ್ದೇಶ. ಒಟ್ಟು 5 ಕೆ.ಜಿ. ಪಡಿತರದಲ್ಲಿ ಅಕ್ಕಿಯೊಂದಿಗೆ ಆಯಾ ಭಾಗದ ಜನರ ಆಹಾರ ಪದ್ಧತಿಯಂತೆ ರಾಗಿ ಮತ್ತು ಜೋಳ ಕೊಡಲು ನಿರ್ಧರಿಸಿದ್ದೇವೆ’ ಎಂದು ಆಹಾರ, ನಾಗರಿಕ ಸರಬರಾಜು ಸಚಿವ ಉಮೇಶ ಕತ್ತಿ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ‘ರಾಜ್ಯದ ದಕ್ಷಿಣದ 12 ಜಿಲ್ಲೆಗಳಲ್ಲಿ ಪಡಿತರ ಚೀಟಿಯ ಪ್ರತಿ ಸದಸ್ಯನಿಗೆ 3 ಕೆ.ಜಿ. ರಾಗಿ ಮತ್ತು 2 ಕೆ.ಜಿ. ಅಕ್ಕಿ ನೀಡಲು ನಿರ್ಧರಿಸಲಾಗಿತ್ತು. ಅದರಂತೆ, ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ ರಾಗಿ ಖರೀದಿ ಆಗಿರುವುದರಿಂದ, ರಾಗಿ ವಿತರಣೆಯನ್ನು ಏಪ್ರಿಲ್‌ನಿಂದ ಜಾರಿಗೆ ತರಲಾಗಿದೆ. ರಾಜ್ಯದ ಉತ್ತರದ 12 ಜಿಲ್ಲೆಗಳ ಪ್ರತಿ ಸದಸ್ಯನಿಗೆ 3 ಕೆ.ಜಿ. ಜೋಳ ಹಾಗೂ 2 ಕೆ.ಜಿ. ಅಕ್ಕಿ ನೀಡಲು ಉದ್ದೇಶಿಸಲಾಗಿದೆ. ಆದರೆ, ಜೋಳದ ಕನಿಷ್ಠ ಬೆಂಬಲ ಬೆಲೆಯು ಮಾರುಕಟ್ಟೆ ಬೆಲೆಗಿಂತ ಕಡಿಮೆ ಇದ್ದಿದ್ದರಿಂದ ನಿರ್ದಿಷ್ಟ ಪ್ರಮಾಣದಲ್ಲಿ ಜೋಳ ಖರೀದಿ ಸಾಧ್ಯವಾಗಿಲ್ಲ. ಆದ್ದರಿಂದ, 3 ಕೆ.ಜಿ. ಜೋಳ ಬದಲಾಗಿ 3 ಕೆ.ಜಿ. ಗೋಧಿಯನ್ನು 2 ಕೆ.ಜಿ. ಅಕ್ಕಿಯೊಂದಿಗೆ ವಿತರಿಸಲು ಉದ್ದೇಶಿಸಲಾಗಿದೆ. ಮುಂದಿನ ದಿನಗಳಲ್ಲಿ ಪೂರ್ಣ ಪ್ರಮಾಣದ ಜೋಳ ಲಭ್ಯತೆ ಇದ್ದಲ್ಲಿ 3 ಕೆ.ಜಿ. ಜೋಳ ಮತ್ತು 2 ಕೆ.ಜಿ. ಅಕ್ಕಿಯನ್ನು ನೀಡುವ ಕಾರ್ಯಕ್ರಮ ಜಾರಿಗೊಳಿಸಲಾಗುವುದು’ ಎಂದರು.

‘ಇತರ 6 ಜಿಲ್ಲೆಗಳಲ್ಲಿ ಪ್ರತಿ ಸದಸ್ಯನಿಗೆ 2 ಕೆ.ಜಿ. ಕುಚಲಕ್ಕಿ ಹಾಗೂ 3 ಕೆ.ಜಿ. ಅಕ್ಕಿ ವಿತರಿಸಲಾಗುವುದು’ ಎಂದರು.

‘ಜೋಳಕ್ಕೆ ನಿಗದಿಪಡಿಸಿರುವ ಕನಿಷ್ಠ ಬೆಂಬಲ ಬೆಲೆಯು (₹ 2,640) ಮಾರುಕಟ್ಟೆ ದರಕ್ಕಿಂತ ಕಡಿಮೆ ಇದ್ದ ಕಾರಣ ಅದನ್ನು ₹ 4,785ಕ್ಕೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರವನ್ನು ಕೋರಿದ್ದೇನೆ’ ಎಂದು ಪ್ರತಿಕ್ರಿಯಿಸಿದರು.

ಕ್ಷಮೆ ಕೇಳುವುದೆಲ್ಲ ಬೇಡ. ಮುಖ್ಯಮಂತ್ರಿಯವರಿಗೆ ಜನರ ಬಗ್ಗೆ ಕಾಳಜಿ ಇದ್ದರೆ, ಕತ್ತಿಯನ್ನು ಮಂತ್ರಿ ಸ್ಥಾನದಿಂದ ಕಿತ್ತು ಹಾಕಿ
ಡಿ.ಕೆ.ಶಿವಕುಮಾರ್, ಅಧ್ಯಕ್ಷ, ಕೆಪಿಸಿಸಿ

ನನ್ನಿಂದ ರೈತರು, ಫಲಾನುಭವಿಗಳು ಮತ್ತು ರಾಜ್ಯದ ಜನರ ಮನಸ್ಸಿಗೆ ನೋವಾಗಿದ್ದರೆ ಕ್ಷಮೆ ಕೇಳುತ್ತೇನೆ
ಉಮೇಶ ಕತ್ತಿ , ಸಚಿವ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ

ಹಸಿವಿನಿಂದ ಬಳಲುವ ಜನರ ನೆರವಿಗೆ ಬರಬೇಕಾದ ಆಹಾರ ಸಚಿವರೇ ದರ್ಪದ ಉತ್ತರ ನೀಡಿದ್ದಾರೆ. ಸಂಪುಟದಿಂದ ಕಿತ್ತೊಗೆಯಿರಿ
ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

‘ಡಿಕೆಶಿ ಕಾಂಗ್ರೆಸ್ ಶವಯಾತ್ರೆ ಮಾಡಲಿ’

ಬೆಳಗಾವಿ: ‘ ನನ್ನ ರಾಜೀನಾಮೆ ಕೇಳುವುದಕ್ಕೆ ಡಿ.ಕೆ. ಶಿವಕುಮಾರ್ ಯಾರು? ಅವರಿಗೆ ಏನು ಅಧಿಕಾರವಿದೆ? ಅವರು ಶವಯಾತ್ರೆ ಮಾಡುವುದಿದ್ದರೆ ಕಾಂಗ್ರೆಸ್ ಶವಯಾತ್ರೆ ಮಾಡಲಿ. ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಮನೆಯವರೆಗೆ ಯಾತ್ರೆ ನಡೆಸಲಿ. ಅವರ ಮನೆ ಮುಂದೆಯೇ ಹೂಳಲಿ’ ಎಂದು ಎಂದು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಉಮೇಶ ಕತ್ತಿ ವ್ಯಂಗ್ಯವಾಡಿದರು.

ಪಡಿತರ ಅಕ್ಕಿ ಕಡಿತ ಮಾಡಿರುವುದನ್ನು ಪ್ರಶ್ನಿಸಿದ ರೈತರೊಬ್ಬರಿಗೆ ‘ಸತ್ತು ಹೋದರೆ ಒಳ್ಳೆಯದು’ ಎಂದು ಹೇಳಿದ್ದರ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕತ್ತಿ ರಾಜೀನಾಮೆಗೆ ಒತ್ತಾಯಿಸಿದ್ದಕ್ಕೆ ಅವರು ಹೀಗೆ ಪ್ರತಿಕ್ರಿಯಿಸಿದರು.

‘ಕಾಂಗ್ರೆಸ್‌ನವರಿಗೆ ಮಾಡುವುದಕ್ಕೆ ಕೆಲಸವಿಲ್ಲ. ಇದೇ ಸಿದ್ದರಾಮಯ್ಯ 4 ಕೆ.ಜಿ. ಅಕ್ಕಿ ಕೊಟ್ಟಿದ್ದನ್ನೂ ನೋಡಿದ್ದೇವೆ. ಅವರು ಮುಖ್ಯಮಂತ್ರಿ ಆಗಿದ್ದಾಗ ಬಡವರ ಹೆಸರಿನಲ್ಲಿ ರಾಜಕೀಯ ಮಾಡಿದವರು. ನಮ್ಮ ಸರ್ಕಾರದಿಂದ ಆಹಾರ ಭದ್ರತೆ ಯೋಜನೆಯಲ್ಲಿ ಪೌಷ್ಟಿಕ ಆಹಾರ ಕೊಡುತ್ತಿದ್ದೇವೆ. ಇದರಿಂದ ಜನರು, ರೈತರು ಹಾಗೂ ಪಡಿತರ ಚೀಟಿದಾರರಿಗೆ ಅನುಕೂಲ ಆಗುತ್ತದೆ’ ಎಂದರು.

ಗ್ರೀನ್‌ವುಡ್ ಹೈ ಇಂಟರ್‌ನ್ಯಾಷನಲ್ ಸ್ಕೂಲ್ ವಿದ್ಯಾರ್ಥಿಗಳ ಸತ್ಕಾರ್ಯ

200 ಮಂದಿ ಬಡವರಿಗೆ ಪಲ್ಸ್ ಆಕ್ಸಿಮೀಟರ್

ಪ್ರಜಾವಾಣಿ ವಾರ್ತೆ





ಬೆಂಗಳೂರು: ಗ್ರೀನ್‌ವುಡ್ ಹೈ ಇಂಟರ್‌ನ್ಯಾಷನಲ್ ಸ್ಕೂಲ್ ವಿದ್ಯಾರ್ಥಿಗಳು ಕೋವಿಡ್ ಪೀಡಿತರ ನೆರವಿಗೆ ಧಾವಿಸಿದ್ದು, ದಾನಿಗಳಿಂದ ₹ 2 ಲಕ್ಷ ಹಣವನ್ನು ಸಂಗ್ರಹಿಸುವ ಮೂಲಕ ಬಡ ಕುಟುಂಬಗಳ 200 ಕೋವಿಡ್ ಪೀಡಿತರಿಗೆ ಪಲ್ಸ್ ಆಕ್ಸಿಮೀಟರ್ ಒದಗಿಸಿದ್ದಾರೆ.

ವಿದ್ಯಾರ್ಥಿಗಳ ಈ ಕಾರ್ಯಕ್ಕೆ ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗಿದೆ. ಶಾಲೆಯ ಸ್ನೇಹಾ ರಾಘವನ್ ಮತ್ತು ಶ್ಲೋಕಾ ಅಶೋಕ್ ನೇತೃತ್ವದಲ್ಲಿ 10 ವಿದ್ಯಾರ್ಥಿಗಳು ಸೇರಿ ಕೇವಲ 24 ಗಂಟೆಗಳ ಅವಧಿಯಲ್ಲಿ ಈ ಸತ್ಕಾರ್ಯ ಮಾಡಿದ್ದಾರೆ. ಸರ್ಕಾರೇತರ ಸಂಸ್ಥೆಗಳ ನೆರವನ್ನು ಪಡೆದ ವಿದ್ಯಾರ್ಥಿಗಳು, ಹಣ ಸಂಗ್ರಹಿಸಲು ಆನ್‌ಲೈನ್‌ನಲ್ಲಿ ಪ್ರತ್ಯೇಕ ಪುಟ ತೆರೆದಿದ್ದರು. ವಿವಿಧ ಕಂಪನಿಗಳಿಂದ ಕಡಿಮೆ ದರಕ್ಕೆ ಪಲ್ಸ್ ಆಕ್ಸಿಮೀಟರ್ ಖರೀದಿಸಿದ ಅವರು, ಕೊಳೆಗೇರಿ ನಿವಾಸಿಗಳು ಹಾಗೂ ಬಡಕುಟುಂಬದ ಕೋವಿಡ್ ಪೀಡಿತರಿಗೆ ಒದಗಿಸಿದ್ದಾರೆ.

‘ಸಾಂಕ್ರಾಮಿಕ ಕಾಯಿಲೆಯಾದ ಕೋವಿಡ್‌ಗೆ ಜಗತ್ತು ತಲ್ಲಣಗೊಂಡಿದೆ. ಹೀಗಾಗಿ, ಈ ಅವಧಿಯಲ್ಲಿ ನಾವು ಕೂಡ ಕಷ್ಟದಲ್ಲಿರುವವರಿಗೆ ಏನಾದರೂ ಮಾಡಬೇಕು ಅಂದುಕೊಂಡೆವು. ಸಾಮಾಜಿಕ ಕಾರ್ಯಕರ್ತೆಯಾದ ಅನುಪಮಾ ಪರೇಖ್ ಅವರು ಸೂಕ್ತ ಮಾರ್ಗದರ್ಶನ ನೀಡಿ, ಈ ಕಾರ್ಯಕೈಗೊಳ್ಳಲು ಪ್ರೋತ್ಸಾಹಿಸಿದರು. ಇದೇ ರೀತಿ, ಇನ್ನಷ್ಟು ಸಾಮಾಜಿಕ ಕಾರ್ಯದಲ್ಲಿ ತೊಡಗಿಕೊಳ್ಳಲು ಉತ್ಸುಕನಾಗಿದ್ದೇನೆ.

ಇಂತಹ ಕಾರ್ಯಚಟುವಟಿಯಲ್ಲಿ ತೊಡಗಿಕೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮುಂದೆ ಬರಬೇಕು’ ಎಂದು ಶ್ಲೋಕಾ ಅಶೋಕ್ ತಿಳಿಸಿದರು.

‘ನಿಧಿ ಸಂಗ್ರಹ ಕಾರ್ಯಕ್ಕೆ ಉತ್ತಮವಾದ ಸ್ಪಂದನೆ ದೊರೆಯಿತು. ಈ ಉಪಕ್ರಮವು ನನಗೆ ಹಲವು ಪಾಠಗಳನ್ನು ಕಲಿಸುವ ಜತೆಗೆ ಇಂತಹ ಇನ್ನಷ್ಟು ಕಾರ್ಯಮಾಡಲು ಪ್ರೇರಣೆ ನೀಡಿದೆ’ ಎಂದು ಸ್ನೇಹಾ ರಾಘವನ್ ವಿವರಿಸಿದರು.

ಮುಖ್ಯಮಂತ್ರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ

‘ಆಸ್ಪತ್ರೆಗಳಲ್ಲಿ ಹಾಸಿಗೆ 50 ಪಟ್ಟು ಹೆಚ್ಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಹೆಚ್ಚುತ್ತಿರುವುದರಿಂದ ರಾಜ್ಯದ ಆಸ್ಪತ್ರೆಗಳಲ್ಲಿ ಲಭ್ಯವಿರುವ ಹಾಸಿಗೆಗಳನ್ನು ಕನಿಷ್ಠ 50 ಪಟ್ಟು ಹೆಚ್ಚಿಸಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿರುವ ಅವರು, ಅವಶ್ಯವಿದ್ದರೆ ಶಾಲೆ, ಹಾಸ್ಟೆಲ್, ಹೋಟೆಲ್, ಕಲ್ಯಾಣ ಮಂಟಪ ಮತ್ತಿತರ ಕಡೆಗಳಲ್ಲಿ ತಾತ್ಕಾಲಿಕವಾಗಿ ಬೆಡ್ ವ್ಯವಸ್ಥೆ ಮಾಡಬೇಕು’ ಎಂದೂ ಪ್ರತಿಪಾದಿಸಿದ್ದಾರೆ.

‘ವೈದ್ಯಕೀಯ ಪದವಿ ಅಂತಿಮ ವರ್ಷಗಳಲ್ಲಿರುವ ವೈದ್ಯಕೀಯ, ಅರೆವೈದ್ಯಕೀಯ ವಿದ್ಯಾರ್ಥಿಗಳು, ದಾದಿಯರನ್ನು ಸೋಂಕಿತರ ಆರೈಕೆಗೆ ನೇಮಿಸಬೇಕು. ಸ್ವ-ಇಚ್ಛೆಯಿಂದ ಮುಂದೆ ಬರುವ ರಾಜಕೀಯೇತರ ಸ್ವಯಂ ಸೇವಕರಿಗೆ ತರಬೇತಿ ನೀಡಿ, ತಜ್ಞ ವೈದ್ಯರ ನೇತೃತ್ವದಲ್ಲಿ ತಂಡಗಳನ್ನು ರಚಿಸಿ, ಚಿಕಿತ್ಸೆ ನೀಡಬೇಕು. ನಿವೃತ್ತ ವೈದ್ಯರು, ದಾದಿಯರನ್ನೂ ತಾತ್ಕಾಲಿಕವಾಗಿ ಮರು ನೇಮಕ ಮಾಡಿಕೊಳ್ಳಬೇಕು’ ಎಂದೂ ಆಗ್ರಹಿಸಿದ್ದಾರೆ.


ಸಿದ್ದರಾಮಯ್ಯ

‘ವೆಂಟಿಲೇಟರ್, ಆಕ್ಸಿಜನ್ ಬೆಡ್‌ಗಳನ್ನೂ ಕನಿಷ್ಠ 40 ಪಟ್ಟು ಹೆಚ್ಚಿಸಬೇಕು. ರೆಮ್‌ಡಿಸಿವರ್ ಸೇರಿ ದಂತೆ ಎಲ್ಲ ಜೀವರಕ್ಷಕ ಔಷಧಗಳನ್ನು ಕೇಂದ್ರದಿಂದ ಪಡೆದುಕೊಳ್ಳಬೇಕು. ಬೆಂಗಳೂರಷ್ಟೇ ಅಲ್ಲದೆ, ಉಳಿದ ಜಿಲ್ಲೆಗಳಲ್ಲೂ ಅಗತ್ಯವಿರುವ ವ್ಯವಸ್ಥೆ ಮಾಡಬೇಕು. ಕಾಳಸಂತೆಯಲ್ಲಿ ಔಷಧ ಮಾರಾಟ ಮಾಡುತ್ತಿರುವವರ ಮೇಲೆ ಕ್ರಮ ಕೈಗೊಳ್ಳಬೇಕು. ಖಾಸಗಿ ಆಸ್ಪತ್ರೆಗಳು ರೋಗಿಯಿಂದ ಹೆಚ್ಚು ಹಣ ವಸೂಲಿ ಮಾಡದಂತೆ ಸ್ಪಷ್ಟ ಮಾರ್ಗಸೂಚಿ ಹೊರಡಿಸಬೇಕು’ ಎಂದೂ ಸಲಹೆ ನೀಡಿದ್ದಾರೆ

‘ಕೋವಿಡ್ ಚಿಕಿತ್ಸೆ, ಔಷಧ, ಲಸಿಕೆ ಕುರಿತು ವೈಜ್ಞಾನಿಕವಾದ ಮಾರ್ಗಸೂಚಿಯನ್ನು ತಕ್ಷಣ ಹೊರಡಿಸಬೇಕು. ಸೋಂಕು ತಗಲುವ ಮೊದಲೇ ಸಕ್ಕರೆ ಕಾಯಿಲೆ, ರಕ್ತದೊತ್ತಡ, ಥೈರಾಯ್ಡ್ ಸಮಸ್ಯೆ, ಹೃದಯ, ಕಿಡ್ನಿ, ಲಿವರ್, ಮೆದುಳು ಸಮಸ್ಯೆಗಳಿದ್ದರೆ ಅವುಗಳಿಗೆ ನಿಯಮಿತವಾಗಿ ನೀಡಲಾಗುವ ಔಷಧಗಳನ್ನು ನೀಡುವ ಜೊತೆಗೇ ಕೋವಿಡ್‌ಗೆ ಚಿಕಿತ್ಸೆ ನೀಡಬೇಕು’ ಎಂದೂ ಪತ್ರದಲ್ಲಿ ಹೇಳಿದ್ದಾರೆ.

‘ತಜ್ಞರ ಸಲಹೆಯಂತೆ ಅರ್ಹ ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡಬೇಕು. ಲಸಿಕೆ ತಯಾರಿಸುವ ಕಂಪನಿಗಳು ಭಾರಿ ಪ್ರಮಾಣದಲ್ಲಿ ಲಾಭ ಮಾಡಿಕೊಳ್ಳುವ ಮೂಲಕ ಕಾರ್ಪೊರೇಟ್ ಭ್ರಷ್ಟಾಚಾರಕ್ಕೆ ಕೇಂದ್ರ ಅವಕಾಶ ಮಾಡಿಕೊಡಬಾರದು. ರಾಜ್ಯ ಸರ್ಕಾರ ನಯಾ ಪೈಸೆ ನೀಡದೆ ಲಸಿಕೆಗಳನ್ನು ಪಡೆದು ಕೊಳ್ಳಬೇಕು. ಈ ಬಗ್ಗೆ ಪ್ರಧಾನಿಯನ್ನು ರಾಜ್ಯದ ಸಂಸದರು ಒತ್ತಾಯಿಸಬೇಕು’ ಎಂದೂ ಅವರು ಉಲ್ಲೇಖಿಸಿದ್ದಾರೆ.

ಮತ್ತೆ ‘ಅಗ್ರಿ ವಾರ್‌ರೂಮ್’ ಆರಂಭ

ಬೆಂಗಳೂರು: ರಾಜ್ಯದಲ್ಲಿ ಮೇ 12 ರವರೆಗೆ ಲಾಕ್‌ಡೌನ್ ಅವಧಿಯಲ್ಲಿ ಕೃಷಿ ಚಟುವಟಿಕೆ ತೊಂದರೆ ಆಗದಿರಲೆಂದು ಕೃಷಿ ಇಲಾಖೆ ಪುನಃ ‘ಅಗ್ರಿ ವಾರ್ ರೂಮ್’ ಪ್ರಾರಂಭಿಸಿದೆ.

ಮುಂಗಾರು ಸಂದರ್ಭದಲ್ಲಿ ಕೃಷಿ ಚಟುವಟಿಕೆಗಳಿಗೆ ಕೃಷಿ ಉಪಕರಣಗಳ ಅಗತ್ಯವಿದ್ದು, ಅವುಗಳ ಸಾಗಾಣಿಕೆಗೆ ತೊಂದರೆ ಆಗಬಾರದು. ಅದಕ್ಕಾಗಿ ಈಗಿನಿಂದಲೇ ಅವುಗಳ ವ್ಯವಸ್ಥೆ ಮಾಡಲು ಅಗ್ರಿ ವಾರ್ ರೂಮ್ ನೆರವಾಗಲಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದ್ದಾರೆ.

ಈ ಅಗ್ರಿ ವಾರ್ ರೂಮ್ ಬೆಳಿಗ್ಗೆ 8 ರಿಂದ ರಾತ್ರಿ 8ರವರೆಗೆ ಕಾರ್ಯನಿರ್ವಹಿಸಲಿದೆ. ಕೃಷಿ ಇಲಾಖೆ ಕಚೇರಿಯಲ್ಲಿ ಇದನ್ನು ತೆರೆಯಲಾಗಿದೆ. 080-22210237 ಮತ್ತು 080-22212818 ಸಂಖ್ಯೆಗಳು ಸಹಾಯವಾಣಿಯಾಗಿ ಕಾರ್ಯ ನಿರ್ವಹಿಸಲಿವೆ. ಇದಕ್ಕಾಗಿ ಕೃಷಿ ಪ್ರಧಾನ ಕಚೇರಿಯಲ್ಲಿ ಇಬ್ಬರು ತಾಂತ್ರಿಕ ಅಧಿಕಾರಿಗಳು ಮತ್ತು ಒಬ್ಬ ಉಪ ಕೃಷಿ ನಿರ್ದೇಶಕರನ್ನು ಉಸ್ತುವಾರಿಯನ್ನಾಗಿ ನೇಮಿಸಲಾಗಿದೆ. ಕಳೆದ ವರ್ಷ ಲಾಕ್‌ಡೌನ್ ಸಂದರ್ಭದಲ್ಲೂ ಅಗ್ರಿ ವಾರ್ ರೂಮ್ ತೆರೆಯಲಾಗಿತ್ತು. ಅದರಿಂದ ರೈತರಿಗೆ ಸಾಕಷ್ಟು ಪ್ರಯೋಜನವಾಗಿತ್ತು. ಶೇ 106 ಕ್ಕೂ ಹೆಚ್ಚು ಬಿತ್ತನೆ ಆಗಿತ್ತು ಎಂದು ಪಾಟೀಲ ತಿಳಿಸಿದ್ದಾರೆ.

ಐಸಿಯು ಸಹಿತ ಹಾಸಿಗೆ ಭರ್ತಿ

ಒಂದನೇ ಪುಟದಿಂದ...

ಕಾರ್ಯನಿರ್ವಹಿಸುತ್ತಿರುವ ಐಸಿಯುಗಳಲ್ಲಿ ಈಗಾಗಲೇ ಕೋವಿಡ್ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಹಣ ಕೊಟ್ಟರೂ ವೆಂಟಿಲೇಟರ್ ಸಹಿತ ಐಸಿಯು ಸಿಗದ ಸ್ಥಿತಿ ನಿರ್ಮಾಣವಾಗಿದೆ.

‘ಐಸಿಯು ನಿರ್ವಹಣೆ ಬಿಳಿಯಾನೆ ಸಾಕಿದಂತೆ. ವಾರ್ಷಿಕ ₹ 1 ಕೋಟಿ ವೆಚ್ಚ ಅಗತ್ಯವಿದೆ. ತಜ್ಞ ವೈದ್ಯರು, ದಾದಿಯರು, ಅರೆ ವೈದ್ಯಕೀಯ ಸಿಬ್ಬಂದಿ ಅಗತ್ಯವಿದೆ. ಕೇವಲ ವೆಂಟಿಲೇಟರ್, ಐಸಿಯು ಆರಂಭಿಸುವ ಜೊತೆಗೆ ಅಗತ್ಯ ಸಿಬ್ಬಂದಿಯನ್ನೂ ಒದಗಿಸುವ ವಿಷಯದಲ್ಲೂ ಗಂಭೀರವಾಗಿ ಯೋಚಿಸಬೇಕಾಗಿದೆ. ಮಾನವ ಸಂಪನ್ಮೂಲ ಒದಗಿಸಬೇಕಾದ ಬಗ್ಗೆ ಹೃದ್ರೋಗ ತಜ್ಞ ದೇವಿಪ್ರಸಾದ್ ಶೆಟ್ಟಿ ಕೂಡ ಈಗಾಗಲೇ ಸರ್ಕಾರದ ಗಮನಸೆಳೆದಿದ್ದಾರೆ’ ಎಂದು ಅವರು ಹೇಳಿದರು.

ಅತೀ ಹೆಚ್ಚು ಸೋಂಕಿತರಿರುವ ಬೆಂಗಳೂರಿನಲ್ಲಿ ಆರೋಗ್ಯ ಇಲಾಖೆಯಡಿ ಆಸ್ಪತ್ರೆಗಳಲ್ಲಿರುವ ವೆಂಟಿಲೇಟರ್ ಸಹಿತ 224 ಐಸಿಯು ಬೆಡ್‌ಗಳಲ್ಲಿ 115, ವೆಂಟಿಲೇಟರ್ ಇಲ್ಲದ 221 ಐಸಿಯುಗಳಲ್ಲಿ 130 ಕೋವಿಡ್ ರೋಗಿಗಳಿಗೆ ಮೀಸಲಿಡಲಾಗಿದೆ. ಮಂಗಳವಾರ ರಾತ್ರಿ 10.30ರ ವೇಳೆಗೆ ಎಚ್‌ಡಿಯು ಬೆಡ್‌ಗಳು 115, ವೆಂಟಿಲೇಟರ್ ಸಹಿತ ಐಸಿಯು 14, ಇತರ ಐಸಿಯು ಬೆಡ್ 33 ಖಾಲಿ ಇದ್ದವು.

ಬೆಂಗಳೂರು ಬಿಟ್ಟು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸೇರಿ ಒಟ್ಟಾರೆ ವೆಂಟಿಲೇಟರ್ ಸಹಿತ ಇರುವ 1580 ಐಸಿಯು ಬೆಡ್‌ಗಳಲ್ಲಿ 1,255 ಮತ್ತು ವೆಂಟಿಲೇಟರ್ ಇಲ್ಲದ 860 ಐಸಿಯುಗಳಲ್ಲಿ 704 ಕೋವಿಡ್ ರೋಗಿಗಳಿಗೆ ಮೀಸಲಿಡಲಾಗಿದೆ. ಆದರೆ, ಈ ಪೈಕಿ, ಬಹುತೇಕ ಭರ್ತಿಯಾಗಿದೆ ಎಂದು ವಿವರಿಸುತ್ತಾರೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು.

ಪಲ್ಲಕ್ಕಿ ಮೆರವಣಿಗೆ: ಸ್ವಾಮೀಜಿ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ವಿಜಯಪುರ: ಕರ್ಫ್ಯೂ ನಡುವೆಯೂ ಜಿಲ್ಲೆಯ ಕೊಲ್ಹಾರ ಪಟ್ಟಣದ ದಿಗಂಬರೇಶ್ವರ ಸಂಸ್ಥಾನ ಮಠದ ಪೀಠಾಧಿಪತಿ ಕಲ್ಲಿನಾಥ ಸ್ವಾಮೀಜಿ ದವನದ ಹುಣ್ಣಿಮೆ ಅಂಗವಾಗಿ ಬುಧವಾರ ಪಲ್ಲಕ್ಕಿಯಲ್ಲಿ ಕುಳಿತು ಭಕ್ತರಿಂದ ಮೆರವಣಿಗೆ ಮಾಡಿಸಿಕೊಂಡಿದ್ದಾರೆ. ಸ್ವಾಮೀಜಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಕೊಲ್ಹಾರ ತಹಶೀಲ್ದಾರ್ ಎಸ್.ಡಿ. ಮುರಾಳ ತಿಳಿಸಿದ್ದಾರೆ.

ತಹಶೀಲ್ದಾರ್ ಹಾಗೂ ಪೊಲೀಸರು ಪಲ್ಲಕ್ಕಿ ಮೆರವಣಿಗೆ, ಜಾತ್ರೆ ನಡೆಸದಂತೆ ಸೂಚಿಸಿದ್ದರು. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಭಕ್ತರು ಮಾಸ್ಕ್ ಸಹ ಧರಿಸಿರಲಿಲ್ಲ.

‘ಕಲ್ಲಿನಾಥ ಸ್ವಾಮೀಜಿಗೆ ಪಲ್ಲಕ್ಕಿ ಉತ್ಸವ, ಮೆರವಣಿಗೆ ನಡೆಸದಂತೆ ಸೂಚಿಸಲಾಗಿತ್ತು. ನಿಯಮ ಮೀರಿ ನಡೆಸಿರುವುದು ಗಮನಕ್ಕೆ ಬಂದಿದೆ. ಸ್ವಾಮೀಜಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಎಸ್.ಡಿ.ಮುರಾಳ ‘ಪ್ರಜಾವಾಣಿ’ಗೆ ತಿಳಿಸಿದರು.

ತೇರಿನ ಚಕ್ರಕ್ಕೆ ಸಿಲುಕಿ ವ್ಯಕ್ತಿ ಸಾವು

ವಿಜಯಪುರ: ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಬಸರಕೋಡದಲ್ಲಿ ನಿಷೇಧದ ನಡುವೆಯೂ ಬುಧವಾರ ನಡೆದ ಶ್ರೀಪವಾಡ ಬಸವೇಶ್ವರ ಜಾತ್ರೆಯ ಸಂದರ್ಭದಲ್ಲಿ ತೇರು ಎಳೆಯುವಾಗ ಅದರ ಚಕ್ರಕ್ಕೆ ಸಿಲುಕಿ ಅದೇ ಗ್ರಾಮದ ಕರಿಯಪ್ಪ ಕಿಲ್ಲೇದ (41) ಸಾವನ್ನಪ್ಪಿದ್ದಾರೆ. ದೇವಸ್ಥಾನ ಕಮಿಟಿಯವರು ಜಾತ್ರೆ ರದ್ದು ಮಾಡಿದ್ದು ಸಾರ್ವಜನಿಕರು ಯಾರೂ ಬರಬಾರದು ಎಂದು ಪ್ರಕಟಣೆ ಹೊರಡಿಸಿದ್ದರು. ಆದರೆ, ಬುಧವಾರ ಮಧ್ಯಾಹ್ನ ಪೊಲೀಸರ ಕಣ್ತಪ್ಪಿಸಿ ತೇರನ್ನು ಎಳೆಯುವಾಗ ಈ ದುರಂತ ಸಂಭವಿಸಿದೆ. ಸ್ಥಳಕ್ಕೆ ಡಿವೈಎಸ್‌ಪಿ ಅರುಣ ಕೋಳೂರ ಭೇಟಿ ನೀಡಿದರು. ದೇವ ಸ್ಥಾನ ಕಮಿಟಿ ಮೇಲೆ ಪ್ರಕರಣ ದಾಖಲಿಸಲಾಗಿದೆ.

ಕೋವಿಡ್: ಸರ್ಕಾರ ಎಡವಿದ್ದೆಲ್ಲಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾಯಕಾರಿ ಮಟ್ಟಕ್ಕೆ ಕೋವಿಡ್ ಹರಡುವಿಕೆ ತಡೆಯುವಲ್ಲಿ ಸರ್ಕಾರ ಎಡವಿದ್ದೆಲ್ಲಿ? ಈಗ ತುರ್ತಾಗಿ ಏನು ಮಾಡಬೇಕಿದೆ? ಆರೋಗ್ಯ ವ್ಯವಸ್ಥೆಯಲ್ಲಿ ಆಗಬೇಕಿರುವ ಸುಧಾರಣೆಗಳೇನು? ಎಂಬುದರ ಕುರಿತು ಜನಾಭಿಪ್ರಾಯಕ್ಕೆ ‘ಪ್ರಜಾವಾಣಿ’ ವೇದಿಕೆ ಕಲ್ಪಿಸಿದೆ. ಇದಕ್ಕೆ ಸ್ಪಂದಿಸಿರುವ ನೂರಾರು ಓದುಗರು ಸಲಹೆ ನೀಡಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಮುನ್ನೋಟವಿಲ್ಲದ ಅದಕ್ಷ ಆಡಳಿತ


ಕಳೆದ ನವೆಂಬರ್‌ನಲ್ಲಿ ವಿಜ್ಞಾನಿಗಳು ನೀಡಿದ ಎಚ್ಚರಿಕೆಯನ್ನು ಕೇಂದ್ರ ಸರ್ಕಾರ ನಿರ್ಲಕ್ಷ್ಯ ಮಾಡಿತು. ವಿಜ್ಞಾನಿಗಳ ಮಾತಿಗೆ ಮಹತ್ವ ಬೇಕಿಲ್ಲ ಎಂಬರ್ಥದ ಮಾತುಗಳನ್ನು ಪ್ರಧಾನಿ ಮೋದಿ ಹೇಳಿದರು. ಇದೇ ಉಡಾಫೆ ಮುಂದುವರಿದು, ಗೃಹ ಮಂತ್ರಿ ಚುನಾವಣೆ ಪ್ರಚಾರದಲ್ಲಿ ನಿರತರಾದರು, ಪ್ರಧಾನಿಯೂ ಜೊತೆ ಸೇರಿದರು, ಜನರೂ ಚಪ್ಪಾಳೆ ತಟ್ಟಿದರು. ಭಾಷಣಗಳಲ್ಲಿ ಕೋವಿಡ್ ತಡೆಗೆ ಏನು ಮಾಡಿದ್ದೇವೆ ಎಂಬ ಮಾತಿಲ್ಲ. ಕುಂಭಮೇಳವನ್ನು ಅದ್ದೂರಿಯಾಗಿ ನಡೆಸಲಾಯಿತು. ರಾಜ್ಯ ಸರ್ಕಾರವೂ ನಿರ್ಲಕ್ಷ್ಯ ತಾಳಿತು. ಮುನ್ನೋಟವಿಲ್ಲದ ಅದಕ್ಷ ಆಡಳಿತಕ್ಕೆ ಜನ ಈಗ ಬೆಲೆ ತೆರಬೇಕು.



ಪ್ರೊ.ಪುರುಷೋತ್ತಮ ಬಿಳಿಮಲೆ, ಹಿರಿಯ ಲೇಖಕ

ನರಹತ್ಯೆಗೆ ಮುನ್ನುಡಿ ಬರೆದ ಸರ್ಕಾರ

ಎರಡನೇ ಅಲೆಯ ಖಚಿತತೆ ತಿಳಿದ ಮೇಲೂ ಸರ್ಕಾರ ಸಜ್ಜಾಗಬಹುದಿತ್ತು. ಆದರೆ, ಇದೊಂದು ಜನವಿರೋಧಿ ಸರ್ಕಾರ. ಜನರ ಕಾಳಜಿ ಅವರಿಗೆ ಕೊನೆಯ ಆದ್ಯತೆ. ಇದೊಂದು ನರಹತ್ಯೆಗೆ ಮುನ್ನುಡಿ ಬರೆದ ಸರ್ಕಾರ. ಈಗಲಾದರೂ ವೈದ್ಯರು ದಾದಿಯರನ್ನೊಳಗೊಂಡ ತುರ್ತು ಕಿಯೋಸ್ಕ್‌ಗಳನ್ನೂ ತೆರೆದು ಆತಂಕದಿಂದ ಬರುವ ಎಲ್ಲ ಸೋಂಕಿತರಿಗೆ ಪ್ರಥಮ ಚಿಕಿತ್ಸೆ ಹಾಗು ಸಾಂತ್ವನ ನೀಡುವ ಕೆಲಸವಾಗಬೇಕು.ಅಗತ್ಯವಿರುವವರಿಗೆ ಆನ್‌ಲೈನ್ ಮೂಲಕವೇ ಮೂಲಕವೇ ಆಸ್ಪತ್ರೆಗೆ ದಾಖಲಿಸುವ ಪಾರದರ್ಶಕ ವ್ಯವಸ್ಥೆಯಾಗಬೇಕು.



ವಿ.ಪಿ.ನಿರಂಜನಾರಾಧ್ಯ, ಶಿಕ್ಷಣ ತಜ್ಞ

ರಾಜ‘ಕಾರಣ’ದಿಂದ ದುಸ್ಥಿತಿ

ಸರ್ಕಾರ ಸರಿಯಾದ ನಿರ್ಧಾರ ತೆಗೆದುಕೊಂಡಿಲ್ಲ. ಕೊರೊನಾ ತೀವ್ರ ಗೊಂಡಿರುವ ಸಂದರ್ಭದಲ್ಲೂ ಸಾರ್ವಜನಿಕ ಸಮಾರಂಭ, ಧಾರ್ಮಿಕ ಕಾರ್ಯಕ್ರಮ, ಮದುವೆ, ಚುನಾವಣಾ ಪ್ರಚಾರ, ಮೆರವಣಿಗೆಗಳಿಗೆ ಅವಕಾಶ ನೀಡಿತ್ತು. ರಾಜಕೀಯ ಮುಖಂಡರ ಹೊಂದಾಣಿಕೆಯಿಲ್ಲದೆ, ಇವರ ಕಿತ್ತಾಟದಲ್ಲಿ ಪ್ರಜೆಗಳು ಅಪಾಯಕ್ಕೆ ಸಿಲುಕಿದ್ದಾರೆ. ಸರ್ಕಾರದಿಂದ ನಿರೀಕ್ಷಿಸುವ ಬದಲು ಜನರೇ ಜಾಗೃತರಾಗಬೇಕು.



ಗುರುಸ್ವಾಮಿ, ಹಾವೇರಿ

ಖಾಸಗಿ ಆಸ್ಪತ್ರೆಗಳ ವಶಕ್ಕೆ ಪಡೆಯಬೇಕಿತ್ತು

ರಾಜ್ಯ ಸರ್ಕಾರ ಕೋವಿಡ್ ಎರಡನೇ ಅಲೆ ಎದುರಿಸುವಲ್ಲಿ ಎಡವಿದೆ. ಜನರ ಆರೋಗ್ಯಕ್ಕಿಂತ ಚುನಾವಣಾ ಪ್ರಚಾರಗಳಿಗೆ ಹೆಚ್ಚು ಆದ್ಯತೆ ನೀಡಿದ್ದು ಇದಕ್ಕೆ ಕಾರಣ. ಸರ್ಕಾರ ಮೊದಲೇ ಎಲ್ಲ ಖಾಸಗಿ ಆಸ್ಪತ್ರೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಬೇಕಿತ್ತು. ಇದರಲ್ಲೂ ವಿಫಲವಾಗಿದೆ. ಇನ್ನಾದರೂ ಸೂಕ್ತ ಚಿಕಿತ್ಸೆ, ಉಚಿತ ಲಸಿಕೆ ಮತ್ತು ಆಕ್ಸಿಜನ್ ವ್ಯವಸ್ಥೆ ಮಾಡಿ.



ಶಿವಪ್ರಸಾದ್, ಮಂಡ್ಯ

ಈಗ ನಮ್ಮ ಪಾತ್ರ ಪ್ರಧಾನ

ಶಾಸಕಾಂಗ ಮತ್ತು ಕಾರ್ಯಾಂಗ ಎಷ್ಟೇ ಸಮನ್ವಯದಿಂದ ಕಾರ್ಯನಿರ್ವಹಿಸಿದರೂ ಪ್ರಜ್ಞಾವಂತ ನಾಗರಿಕರಾದ ನಾವೂ ನಮ್ಮ ಪಾತ್ರ ನಿರ್ವಹಿಸಬೇಕು. ಸೋಂಕಿಗೆ ಜಾಗ ನೀಡಿರುವ ನಾವು ಅದರಿಂದ ಅಂತರ ಕಾಯ್ದುಕೊಳ್ಳುತ್ತಿಲ್ಲ. ಮಾಸ್ಕ್ ಧರಿಸುವ ಪಾಲನೆಯೂ ಇಲ್ಲ. ಭಯ ಪಡುವ ಬದಲು ಆರಂಭದಲ್ಲೇ ವೈದ್ಯರಿಂದ ಸಲಹೆ ಪಡೆದು ಗುಣಮುಖರಾಗುವುದು ಬುದ್ಧಿವಂತರ ಲಕ್ಷಣ. ಈ ಪರಿಸ್ಥಿತಿಯಲ್ಲಿ ನಮ್ಮ ಪಾತ್ರವೇ ಪ್ರಧಾನ.



ರೂಪಾ ಚೌಧರಿ, ಧಾರವಾಡ

ನಮ್ಮ ಬೇಜವಾಬ್ದಾರಿ ಕಾರಣ

ಕೋವಿಡ್ ಹತೋಟಿಗೆ ಬಾರದಿರಲು ಎಲ್ಲರ ಬೇಜವಾಬ್ದಾರಿಯೇ ಕಾರಣ. ಕಟ್ಟುನಿಟ್ಟಿನ ಕ್ರಮಗಳ ಕೈಗೊಳ್ಳದೆ, ಸರ್ಕಾರ ಎಲ್ಲ ಚಟುವಟಿಕೆಗಳಿಗೆ ಅನುಮತಿ ನೀಡಿತು. ಪರಿಸ್ಥಿತಿ ವಿಕೋಪಕ್ಕೆ ತಿರುಗಲು ಚುನಾವಣೆಯೂ ಕಾರಣವಾಯಿತು. ಲಾಕ್‌ಡೌನ್ ಮುಂದುವರಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತನ್ನಿ. ಬಡಜನರಿಗೆ ವಸತಿ, ಆಹಾರ ಹಾಗೂ ಮೂಲ ಸೌಕರ್ಯಗಳ ವ್ಯವಸ್ಥೆಗೆ ಹೆಚ್ಚಿನ ಗಮನ ನೀಡಿ.



ವಂದನಾ, ಜೆ.ಪಿ.ನಗರ, ಬೆಂಗಳೂರು

ಅನಗತ್ಯ ಓಡಾಟ–ಪ್ರಾಣಕ್ಕೆ ಸಂಕಟ

ಕೋವಿಡ್ ಮೊದಲ ಹಂತದ ಅಲೆ ತಿಳಿಗೊಳ್ಳುತ್ತಿದ್ದಂತೆ ಕಡಿವಾಣ ಹಾಕಲಾಗಿದ್ದ ಸಾರ್ವಜನಿಕ ಸಂಚಾರ, ಜಾತ್ರೆ, ಸಮಾವೇಶ, ಮದುವೆ ಹಾಗೂ ಇನ್ನಿತರ ಕಾರ್ಯಕ್ರಮಗಳಿಗೆ ದಿಢೀರ್ ಅವಕಾಶ ನೀಡಿದ್ದೇ ಇಂದಿನ ಸ್ಥಿತಿಗೆ ಕಾರಣ. ‘ಮಳೆ ನಿಂತರೂ ಹನಿ ನಿಲ್ಲಲಿಲ್ಲ’ ಎನ್ನುವಂತೆ ಕೊರೊನಾ ನಮ್ಮಿಂದ ದೂರವಾಗಿಲ್ಲ. ಆರೋಗ್ಯ ವ್ಯವಸ್ಥೆಯಲ್ಲಿ ಹೆಚ್ಚಿನ ಸುಧಾರಣೆಗಳು ಆಗಬೇಕಿವೆ.



ಉಮ್ಮೆ ಅಸ್ಮ, ಬಳ್ಳಾರಿ

ನೀವೂ ಪ್ರತಿಕ್ರಿಯಿಸಿ

ಅಪಾಯಕಾರಿ ಮಟ್ಟಕ್ಕೆ ಕೋವಿಡ್ ಹರಡುವಿಕೆ ತಡೆಯುವಲ್ಲಿ ಸರ್ಕಾರ ಎಡವಿದ್ದೆಲ್ಲಿ? ಈಗ ತುರ್ತಾಗಿ ಮಾಡಬೇಕಾದುದೇನು? ಆರೋಗ್ಯ ವ್ಯವಸ್ಥೆಯಲ್ಲಿ ಆಗಬೇಕಾದ ಸುಧಾರಣೆ ಕುರಿತು ನೀವೂ ಬರೆಯಿರಿ.

ನಿಮ್ಮ ವಿಳಾಸ, ಫೋಟೋ, ಫೋನ್ ನಂಬರ್ ಜತೆಗಿರಲಿ. ಆಯ್ದ ಅಭಿಪ್ರಾಯವನ್ನು ಪ್ರಕಟಿಸಲಾಗುವುದು. ಗರಿಷ್ಠ 50 ಪದಗಳ ಮಿತಿ ಇರಲಿ.

96060 38256




ಕೋವಿಡ್ ಸಮಯದಲ್ಲೂ ಸಾಗುತಿರಲಿ ಸ್ವಯಂ ಅಧ್ಯಯನ

ಚನ್ನಬಸಪ್ಪ ರೊಟ್ಟಿ

ಕೋವಿಡ್ ಸಾಂಕ್ರಾಮಿಕ ಎಲ್ಲರಿಗೂ ಒಂದಿಲ್ಲೊಂದು ಸಮಸ್ಯೆ ಒಡ್ಡಿದೆ. ಸ್ಪರ್ಧಾರ್ಥಿಗಳೂ ಇದಕ್ಕೆ ಹೊರತಾಗಿಲ್ಲ. ಲಾಕ್‌ಡೌನ್ ಕಾರಣ ರದ್ದಾದ ಸ್ಪರ್ಧಾತ್ಮಕ ಪರೀಕ್ಷೆಗಳು, ಬಾಗಿಲು ಮುಚ್ಚಿದ ಕೋಚಿಂಗ್ ಕೇಂದ್ರಗಳು, ಬೀಗ ಹಾಕಿದ ಗ್ರಂಥಾಲಯಗಳು, ಅದ್ಯಾವಾಗ ಅಂದುಕೊಂಡ ಗುರಿ ಸಾಧನೆಯೊಂದಿಗೆ ಊರು ಸೇರುತ್ತೇನೆ ಎಂಬ ತವಕ...

ಬೆಂಗಳೂರು, ಧಾರವಾಡ, ಮೈಸೂರು, ವಿಜಯಪುರ, ಕಲಬುರ್ಗಿ... ಮುಂತಾದ ಊರುಗಳಿಗೆ ತರಬೇತಿ ಪಡೆಯಲು ತೆರಳಿರುವ ಲಕ್ಷಾಂತರ ಸ್ಪರ್ಧಾರ್ಥಿಗಳು ಎದುರಿಸುತ್ತಿರುವ ಸಂಕಷ್ಟಗಳಿವು.

ಸರಿಸುಮಾರು ಒಂದು ವರ್ಷದ ಲಾಕ್‌ಡೌನ್ ನಂತರ ಆರಂಭವಾಗಿದ್ದ ಕೋಚಿಂಗ್ ಕೇಂದ್ರಗಳು ಮತ್ತೆ ಬಾಗಿಲು ಮುಚ್ಚಿವೆ. ಕೋವಿಡ್ ಅಬ್ಬರ ಮತ್ತೊಮ್ಮೆ ಹೆಚ್ಚಾಗಿದೆ. ಹೀಗಾಗಿ, ಸ್ಪರ್ಧಾರ್ಥಿಗಳು ತಮ್ಮೂರಿಗೆ ಮರಳಬೇಕಾದ ಅಥವಾ ಈಗಿರುವ ಊರಿನಲ್ಲಿಯೇ ಸುರಕ್ಷಿತವಾಗಿ ಇರಬೇಕಾದ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಇಂಥ ಪರಿಸ್ಥಿತಿಯಲ್ಲಿ ಸ್ಪರ್ಧಾರ್ಥಿಗಳು ತಮ್ಮ ಭವಿಷ್ಯಕ್ಕೆ ತಾವೇ ಹೊಣೆಗಾರರು ಎಂಬುದನ್ನು ಅರಿತು ಸ್ವಯಂ ಅಧ್ಯಯನದಲ್ಲಿ ತೊಡಗುವುದೇ ಜಾಣ್ಮೆ. ಸ್ವಯಂ ಅಧ್ಯಯನಕ್ಕೆ ನೆರವಾಗುವ ಕೆಲ ಅಂಶಗಳು ಹೀಗಿವೆ.



> ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿದ್ದ ಸ್ಪರ್ಧಾರ್ಥಿಗಳಿಗೆ ಕೋವಿಡ್, ಲಾಕ್‌ಡೌನ್‌ನಿಂದಾಗಿ ತೊಂದರೆಯಾಗಿದೆ. ಆದರೆ ಧೃತಿಗೆಡದೆ ಈ ಸಮಯವನ್ನು ಸ್ವಯಂ ಅಧ್ಯಯನಕ್ಕೆ ಬಳಸಿಕೊಳ್ಳುವುದು ಸೂಕ್ತ.

ಮೊಬೈಲ್, ಅಂತರ್ಜಾಲ ಸದ್ಬಳಕೆ ಮಾಡಿಕೊಳ್ಳಿ

ಈಗ ಹೆಚ್ಚು ಕಡಿಮೆ ಪ್ರತಿಯೊಬ್ಬರ ಬಳಿಯೂ ಸ್ಮಾರ್ಟ್‌ಫೋನ್ ಇದೆ. ಅದನ್ನು ಬಳಸಿಕೊಂಡು ಅಧ್ಯಯನಕ್ಕೆ ಅತ್ಯುಪಯುಕ್ತವಾದ gktoday, testbook, sarkariexam, jagranjosh, careerpower, collegedunia, adda247, gradeup, embibe, indiatoday, examsdaily, nextias ನಂಥ ಜಾಲತಾಣಗಳಿಗೆ ಭೇಟಿ ನೀಡಿ, ದಿನನಿತ್ಯದ ಅಪ್‌ಡೇಟ್ ಆಧರಿಸಿ ನೋಟ್ಸ್ ಮಾಡಿಟ್ಟುಕೊಳ್ಳಿ. kpsc, upsc, ibps, ssc, railways ವೆಬ್‌ಸೈಟ್‌ಗಳಿಗೆ ಭೇಟಿ ನೀಡಿ. ಉದ್ಯೋಗಾವಕಾಶಗಳು, ಪಠ್ಯಕ್ರಮ, ಅರ್ಹತೆಗಳ ಮಾಹಿತಿ ಪಡೆಯಿರಿ.

ಉತ್ತಮ ಆಕರ ಗ್ರಂಥಗಳನ್ನು ಓದಿ, ಕಿರುಟಿಪ್ಪಣಿ ಮಾಡಿಕೊಳ್ಳಿ

ನೀವು ಎದುರಿಸುತ್ತಿರುವ ಪರೀಕ್ಷೆಗೆ ಸಂಬಂಧಿಸಿದ ಉತ್ತಮವಾದ ಆಕರ ಗ್ರಂಥಗಳು, ಹಳೆ ಪ್ರಶ್ನೆಪತ್ರಿಕೆಗಳು, ದಿನಪತ್ರಿಕೆಗಳನ್ನು ಸಂಗ್ರಹಿಸಿ. ಈ ನಿಟ್ಟಿನಲ್ಲಿ ಈಗಾಗಲೇ ಪರೀಕ್ಷೆ ಎದುರಿಸಿದವರು, ಬೋಧಕರ ಮಾರ್ಗದರ್ಶನ ಪಡೆಯಿರಿ. ಇದರ ಜೊತೆ 5ರಿಂದ 12ನೇ ತರಗತಿವರೆಗಿನ ಸಿಬಿಎಸ್‌ಇ ಪಠ್ಯಪುಸ್ತಕಗಳನ್ನು ಪರಾಮರ್ಶಿಸಿ. ಈ ಓದನ್ನು ಆಧರಿಸಿ ಕಿರುಟಿಪ್ಪಣಿ ಮಾಡಿಟ್ಟುಕೊಳ್ಳಿ.

ಆನ್‌ಲೈನ್ ಕೋಚಿಂಗ್, ಯೂಟ್ಯೂಬ್ ತರಗತಿಗೆ ಚಂದಾದಾರರಾಗಿ

ಈಚೆಗೆ ಬಹುತೇಕ ತರಬೇತಿ ಕೇಂದ್ರಗಳು ಆನ್‌ಲೈನ್ ತರಬೇತಿಯನ್ನು ಆರಂಭಿಸಿವೆ. ಇರುವುದರಲ್ಲಿಯೇ ಉತ್ತಮವಾದ ಆನ್‌ಲೈನ್ ತರಬೇತಿ ತರಗತಿ ಆಯ್ದುಕೊಂಡು ಅದಕ್ಕೆ ಚಂದಾದಾರರಾಗಿ. ಗುಣಮಟ್ಟದ ಬೋಧನೆಗೆ ಹೆಸರಾದ ಹಲವು ಬೋಧಕರು ತಮ್ಮದೇ ಆದ ಯೂಟ್ಯೂಬ್ ಚಾನೆಲ್‌ಗಳನ್ನು ಆರಂಭಿಸಿದ್ದಾರೆ. ಬಹುತೇಕ ಯೂಟ್ಯೂಬ್ ಪಾಠಗಳು ಉಚಿತವಾಗಿಯೇ ಲಭ್ಯ ಇವೆ. ಇದರ ಲಾಭ ಪಡೆಯಿರಿ.

ಸ್ನೇಹಿತರ ಜೊತೆ ಗುಂಪು ಚರ್ಚೆಯಲ್ಲಿ ಪಾಲ್ಗೊಳ್ಳಿ

ನೀವು ನಿಮ್ಮೂರಿನಲ್ಲೇ ಇರಿ ಅಥವಾ ಪರ ಊರಿನಲ್ಲೇ ಇರಿ. ಸಮಾನಮನಸ್ಕ, ಪರೀಕ್ಷೆಗೆ ಸಿದ್ಧರಾಗುತ್ತಿರುವ ಸ್ನೇಹಿತರನ್ನು ಗುರುತಿಸಿ. ಅವರ ಜತೆಗೂಡಿ ಸ್ಟಡಿ ಗ್ರೂಪ್ ರಚಿಸಿಕೊಳ್ಳಿ. ಗುಂಪಿನ ಸದಸ್ಯರ ಸಂಖ್ಯೆ 4ನ್ನು ಮೀರದಿರಲಿ. ಆ ಸ್ನೇಹಿತರ ಜೊತೆಗೂಡಿ ಅಧ್ಯಯನ ಸಂಬಂಧಿತ ಚರ್ಚೆ ಕೈಗೊಳ್ಳಿ. ಚರ್ಚೆ ಗೂಗಲ್ ಮೀಟ್ ಅಥವಾ ಝೂಮ್ ಅಪ್ಲಿಕೇಷನ್ ಮೂಲಕವಾದರೂ ನಡೆಯಲಿ.

ಸಮರ್ಪಕವಾದ ವೇಳಾಪಟ್ಟಿ ಸಿದ್ಧಪಡಿಸಿಕೊಳ್ಳಿ

ನಿಮ್ಮ ಆಸಕ್ತಿ, ಅಗತ್ಯಕ್ಕೆ ತಕ್ಕಂತೆ ಅಧ್ಯಯನದ ವೇಳಾಪಟ್ಟಿ ಸಿದ್ಧಪಡಿಸಿಕೊಂಡು ಓದಿ. ಒಂದು ದಿನಕ್ಕೆ 12 ಗಂಟೆ ಓದು, 7 ಗಂಟೆ ನಿದ್ದೆ, ಊಟ ತಿಂಡಿಗೆ 2 ಗಂಟೆ, ಮನರಂಜನೆಗೆ 1 ಗಂಟೆ, ದಿನನಿತ್ಯದ ಕೆಲಸಗಳಿಗೆ 2 ಗಂಟೆ ಹೀಗೆ ವೇಳೆಯನ್ನು ಹೊಂದಿಸಿಕೊಳ್ಳಿ. ಓದಿನ 12 ಗಂಟೆಗಳನ್ನು ಸಮವಾಗಿ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿ ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಿಕೊಂಡು ಆ ಅವಧಿಯಲ್ಲಿ ಓದು, ಬರವಣಿಗೆ, ಹಳೆಯ ಪ್ರಶ್ನೆಪತ್ರಿಕೆಗಳ ಪರಾಮರ್ಶೆ ಮತ್ತು ವಿಷಯ ಪುನಾರಾವರ್ತನೆಗೂ ಸಮಯ ಮೀಸಲಿಡಿ.

ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಿ

ನಿಮ್ಮ ಬಗ್ಗೆ ನಿಮಗೆ ಅಭಿಮಾನವಿರಲಿ. ನನ್ನಿಂದ ಮಾಡಲು ಸಾಧ್ಯವಿದೆ ಎಂಬ ಭಾವ ನಿಮ್ಮದಾಗಿರಲಿ. ವಿಷಮ ಪರಿಸ್ಥಿತಿಗಳು ಹಾಗೂ ಪರೀಕ್ಷೆಗಳೇ ಅಂತಿಮವಲ್ಲ, ಈ ಬಾರಿ ಸೋಲಾದರೂ ಪರವಾಗಿಲ್ಲ. ಮತ್ತೊಮ್ಮೆ ಗೆದ್ದೇ ಗೆಲ್ಲುತ್ತೇನೆ ಎಂಬ ಆತ್ಮವಿಶ್ವಾಸ ಬೆಳೆಸಿಕೊಳ್ಳಿ.

(ಲೇಖಕರು: ನಿರ್ದೇಶಕರು, ಸ್ಟೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಪ್ರಶ್ನೋತ್ತರ

ಸಾಮಾನ್ಯ ಅಧ್ಯಯನ

ಇತಿಹಾಸ

(ಮುಂದುವರಿದ ಭಾಗ)

16) ಕೆಳಗಿನ ಯಾವುದು ಭಾರತದಲ್ಲಿ ಇರುವ ಮಧ್ಯಶಿಲಾಯುಗದ ಪ್ರಮುಖ ತಾಣವಾಗಿದೆ?

ಎ) ಗುಜರಾತಿನ ಸಬರಮತಿ ಬಿ) ಮಹಾರಾಷ್ಟ್ರದ ಅಹ್ಮದ್‌ನಗರ
ಸಿ) ಕರ್ನಾಟಕದ ಬಳ್ಳಾರಿ ಡಿ) ಮೇಲಿನ ಎಲ್ಲವೂ

ಉತ್ತರ: (ಡಿ)

ವಿವರಣೆ: ರಾಜಸ್ಥಾನದ ಅಜ್ಮೀರ, ಗುಜರಾತಿನ ಸಬರಮತಿ, ಮಹಾರಾಷ್ಟ್ರದ ಅಹ್ಮದ್‌ನಗರ, ಕರ್ನಾಟಕದ ಬಳ್ಳಾರಿ ಜಿಲ್ಲೆಯ ಸಂಗನಕಲ್ಲು ಮತ್ತು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಭಾರತದಲ್ಲಿದ್ದ ಮಧ್ಯಶಿಲಾಯುಗದ ಪ್ರಮುಖ ತಾಣಗಳಾಗಿವೆ.

17) ಸ್ವಾಮಿ ದಯಾನಂದ ಸರಸ್ವತಿಯವರ ಪ್ರಕಾರ ಆರ್ಯರ ಮೂಲ ಯಾವುದು?

ಎ) ಟಿಬೆಟ್ ಬಿ) ಉತ್ತರ ಧ್ರುವ
ಸಿ) ಮಧ್ಯ ಏಷಿಯಾ ಡಿ) ಆಗ್ನೇಯ ಏಷಿಯಾ

ಉತ್ತರ: (ಎ)

ವಿವರಣೆ: ಸ್ವಾಮಿ ದಯಾನಂದ ಸರಸ್ವತಿಯವರು ಆರ್ಯರ ಮೂಲ ಟಿಬೆಟ್ ಎಂದು ಹೇಳಿದ್ದಾರೆ.

18) ಇಮ್ಮಡಿ ಪುಲಿಕೇಶಿಯ ಆಸ್ಥಾನ ಕವಿಯಾಗಿದ್ದ ರವಿಕೀರ್ತಿಯು ಈ ಕೆಳಗಿನ ಯಾವ ದೇವಾಲಯವನ್ನು ನಿರ್ಮಿಸಿದನು?

ಎ) ವಿರೂಪಾಕ್ಷ ದೇವಾಲಯ ಬಿ) ಮೇಗುತಿ ದೇವಾಲಯ
ಸಿ) ಭೋಗ ನಂದೀಶ್ವರ ದೇವಾಲಯ ಡಿ) ಕಲ್ಲೇಶ್ವರ ದೇವಾಲಯ

ಉತ್ತರ: (ಬಿ)

ವಿವರಣೆ: ಜೈನ ಮೆಗುತಿ ದೇವಸ್ಥಾನವು ಗಳಗನಾಥ ಸಮೂಹಕ್ಕೆ ಸೇರಿದ್ದು, ಐಹೊಳೆಯ ಸಣ್ಣ ಬೆಟ್ಟದ ತುದಿಯಲ್ಲಿದೆ. ಶಾಸನಗಳ ಪ್ರಕಾರ, ಈ ದೇವಾಲಯವನ್ನು ಕ್ರಿ.ಶ 634 ರಲ್ಲಿ 2ನೇ ಪುಲಕೇಶಿಯ ದಂಡನಾಯಕ ಮತ್ತು ಮಂತ್ರಿಯಾಗಿದ್ದ ರವಿಕೀರ್ತಿ ನಿರ್ಮಿಸಿದ್ದಾರೆ. ಈ ದೇವಾಲಯ ಪೂರ್ಣಗೊಂಡಿಲ್ಲವಾದರೂ, ಅವುಗಳ ಕೆತ್ತನೆ ಮತ್ತು ಶೈಲಿಯು ಬಾದಾಮಿ ಗುಹೆ ದೇವಾಲಯಗಳು ಮತ್ತು ಆ ಕಾಲದ ಇತರ ದೇವಾಲಯಗಳಿಗಿಂತ ಹೆಚ್ಚು ಪರಿಷ್ಕರಿಸಲ್ಪಟ್ಟಿದೆ.

19) ಶಾತವಾಹನರ ಕಾಲದಲ್ಲಿ ನಗರಾಡಳಿತವು ಈ ಕೆಳಗಿನ ಯಾರ ಕೈಯಲ್ಲಿತ್ತು.?

ಎ) ನಿಗಮ ಸಭಾ ಬಿ) ಆಗಮ ಸಭಾ
ಸಿ) ಸಮಿತಿ ಡಿ) ವಿಧಾತಾ

ಉತ್ತರ : (ಎ)

ವಿವರಣೆ: ಶಾತವಾಹನರು ಶಾಸ್ತ್ರಗಳ ಆಡಳಿತ ಮಾರ್ಗಸೂಚಿಗಳನ್ನು ಅನುಸರಿಸಿದರು. ಶಾಸನಗಳು ನಗರ (ನಗರ), ನಿಗಮಾ (ಮಾರುಕಟ್ಟೆ ಪಟ್ಟಣ) ಮತ್ತು ಗಾಮಾ (ಗ್ರಾಮ) ಎಂಬ ಮೂರು ಬಗೆಯ ವಸಾಹತುಗಳನ್ನು ಉಲ್ಲೇಖಿಸುತ್ತವೆ. ಶಾತವಾಹನರ ಕಾಲದಲ್ಲಿ ಪಟ್ಟಣ ಆಡಳಿತವು ನಿಗಮಸಭೆಯ ಕೈಯಲ್ಲಿತ್ತು.

20) ಹಲಾ ರಚಿಸಿದ ಕೃತಿ 'ಗಾಥಾ ಸಪ್ತಶತಿ' ಯಾವ ಭಾಷೆಯಲ್ಲಿದೆ?

ಎ) ಪ್ರಾಕೃತ ಬಿ) ಸಂಸ್ಕೃತ ಸಿ) ತಮಿಳು ಡಿ) ಕನ್ನಡ

ಉತ್ತರ : (ಎ)

ವಿವರಣೆ: 'ಗಥಾ ಸಪ್ತಶತಿ' ಮಹಾರಾಷ್ಟ್ರ ಪ್ರಾಕೃತ ಭಾಷೆಯಲ್ಲಿರುವ ಭಾರತೀಯ ಕವನಗಳ ಪ್ರಾಚೀನ ಸಂಗ್ರಹವಾಗಿದೆ. ಕವನಗಳು ಪ್ರೀತಿ ಮತ್ತು ಪ್ರೀತಿಯ ಸಂತೋಷದ ಬಗ್ಗೆ ಇವೆ. ಈ ಸಂಗ್ರಹವು 1ನೇ ಶತಮಾನದಲ್ಲಿದ್ದ ರಾಜ ಹಲಾನ ಗುಣಲಕ್ಷಣ ಬಗ್ಗೆ ಇವೆ.

21) ಕೆಳಗಿನ ಯಾವುದು ಬೌದ್ಧ ಧರ್ಮದ ನೀತಿ ಸಂಹಿತೆಯಲ್ಲಿ ಸೇರಿಲ್ಲ?

ಎ) ಹಳದಿ ಬಟ್ಟೆ ಬಿ) ಭಿಕ್ಷಾಪಾತ್ರೆ
ಸಿ) ಸೂಜಿ ದಾರ ಡಿ) ದಿನಕ್ಕೆ ಎರಡು ಹೊತ್ತು ಊಟ

ಉತ್ತರ : (ಡಿ)

ವಿವರಣೆ: ಬೌದ್ಧ ಧರ್ಮದ ನೀತಿ ಸಂಹಿತೆ: 1. ಹಳದಿ ಬಟ್ಟೆ, 2. ಭಿಕ್ಷಾಪಾತ್ರೆ, 3. ಸೂಜಿ ದಾರ 4. ದಿನಕ್ಕೆ ಒಂದು ಹೊತ್ತು ಊಟ.

22) 'ಪಬ್ಬಜ್ಜಾ' ಎಂಬುದು ಏನು?

ಎ) ಬೌದ್ಧ ಸಂಘದಲ್ಲಿ ತೆಗೆದುಕೊಳ್ಳುವ ಆರಂಭಿಕ ದೀಕ್ಷೆ
ಬಿ) ಜೈನ ಧರ್ಮದಲ್ಲಿ ಕೈಗೊಳ್ಳುವ ಸಲ್ಲೇಖನ ವ್ರತ
ಸಿ) ಬೌದ್ಧ ಮಂದಿರದ ಹೆಸರು
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ : (ಎ)

ವಿವರಣೆ: ಬುದ್ಧನು ತನ್ನ ಅನುಯಾಯಿಗಳು ಪಬ್ಬಜ್ಜಾ ಮತ್ತು ಉಪಸಂಪದಾ ಉನ್ನತ ದೀಕ್ಷೆಗಳನ್ನು ಕೈಗೊಳ್ಳಬೇಕೆಂದು ಅಪೇಕ್ಷಿಸಿದ್ದನು, ಪಬ್ಬಜ್ಜಾ ಎಂದರೆ ಗೃಹಸ್ಥರು ಭಿಕ್ಷುಗಳ ಸಂಘ ಜೀವನದೊಳಗೆ ಕಾಲಿರಿಸುವ ಆರಂಭಿಕ ಶಿಷ್ಯತ್ವದ ಮಾರ್ಗವಾಗಿದೆ.

(ಪ್ರಶ್ನೋತ್ತರ ಸಂಯೋಜನೆ: www.iasjnana.com, 9916399276)

ಪ್ರಜಾವಾಣಿ ಉದ್ಯೋಗ ವಾರ್ತೆ

ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ ಉದ್ಯೋಗ

ಕರ್ನಾಟಕ ಗ್ರಾಮೀಣ ಬ್ಯಾಂಕ್ ಆರ್ಥಿಕ ಸಲಹೆಗಾರರ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಹುದ್ದೆಗೆ ನೇಮಕಾತಿಯನ್ನು ಗುತ್ತಿಗೆ ಆಧಾರದ ಮೇಲೆ ಕರೆಯಲಾಗಿದ್ದು ಆಸ್ತಕರು ಅರ್ಜಿ ಸಲ್ಲಿಸಬಹುದಾಗಿದೆ.

- **ಹುದ್ದೆ:** ಆರ್ಥಿಕ ಸಲಹೆಗಾರರು
- **ಸ್ಥಳ:** ಮಂಡ್ಯ, ಚಾಮರಾಜನಗರ, ತುಮಕೂರು ಹಾಗೂ ಯಾದಗಿರಿ
- **ವಯೋಮಿತಿ:** ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳಿಗೆ ಗರಿಷ್ಠ 62 ವರ್ಷ ಮೀರಿರಬಾರದು.
- **ಅರ್ಜಿ ಶುಲ್ಕ:** ಇಲ್ಲ
- **ಆಯ್ಕೆ ಪ್ರಕ್ರಿಯೆ:** ಲಿಖಿತ ಪರೀಕ್ಷೆ ಹಾಗೂ ಸಂದರ್ಶನ
- **ಅರ್ಜಿ ಸಲ್ಲಿಕೆ ವಿಧಾನ:** ಕರ್ನಾಟಕ ಗ್ರಾಮೀಣ ಬ್ಯಾಂಕ್, ಬ್ರಾಂಚ್ ಆಫೀಸ್ ಬಳ್ಳಾರಿ, ಕರ್ನಾಟಕ ಈ ವಿಳಾಸಕ್ಕೆ ಅರ್ಜಿ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸಬೇಕು.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಮೇ 15, 2021
- **ಹೆಚ್ಚಿನ ಮಾಹಿತಿಗೆ:** https://karnatakagraminbank.com/news

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

THE BLIND BOY – by Colley Cibber

ಇಂಗ್ಲಿಷ್

ಎಸ್ಸೆಸ್ಸೆಲ್ಸಿ

The poem "The Blind Boy" written by Colley Cibber describes experiences of a young boy who cannot see with his eyes. The poem highlights the suffering and life experiences of a young blind boy. The poet tries to express what a blind boy feels and what the world and the worldly things are for him. The poem has been divided into five stanzas have four lines each. The rhyme scheme of the poem is ABAB CDCD. There are no deep words and meaning. The lines are quite simple.

In the first stanza, the speaker in the poem is blind boy himself. He asks the others to help him understand what is "LIGHT" which he has often heard other saying. It is something which he can never enjoy. Nor all those blessings which light has.

In the second stanza, the blind boy says that people often 'talk of wondrous things' which they see with their eyes. The people often say that 'the sun shines bright'. However, he can only feel it (which is warm). But he wonders how the Sun can "make it day or night. The lines are quite profound and express a blind person's unfamiliarity with the day and dark as everything is dark for him.

In the third stanza, the blind boy says that unlike others, he himself makes his day as well as night. When he sleeps, it is night for him and whenever he awakes and plays, it becomes his day. The day never goes away until he keeps awake or playing. IN these lines for the first time, the blind boy seems to be proud of his blindness rather than sorry for his condition.

And in next stanza, the blind boy says that he feels quite sorrowful and grieved when he listens to the cries of others for his miserable condition (It is through their mourns, he comes to know that he is miserable). According to him, he has patience and hence will be able to bear a loss (of his eyesight) which he can never imagine or experience as he has never seen light or the world.

In the final stanza, the blind boy requests others not to destroy his happiness by taking and mourning about something which he can never have an eyesight. He asks them to let him sing that he is a king of his little dark world through in reality he is just "a poor blind boy".

(ನಿನ್ನೆ ಪ್ರಕಟವಾದ 'A Great Martyr Ever Cherished' ಪಾಠದಲ್ಲಿ ಕ್ಯಾಪ್ಟನ್ ಹನೀಫ್‌ವುದ್ದೀನ್ ಫೋಟೊ ಬದಲು ಮೇಜರ್ ಮೋಹಿತ್ ಶರ್ಮಾ ಫೋಟೊ ಪ್ರಕಟವಾಗಿದೆ. ಇದಕ್ಕಾಗಿ ವಿಷಾದಿಸುತ್ತೇವೆ.)


ನಾಮಕರಣ

ರಸಾಯನ ಶಾಸ್ತ್ರ

ದ್ವಿತೀಯ ಪಿಯುಸಿ

ಆಲ್ಕೈಲ್ ಹ್ಯಾಲೈಡ್‌ಗಳ ಸಾಮಾನ್ಯ ಹೆಸರನ್ನು, ಹ್ಯಾಲೈಡ್‌ನೊಂದಿಗಿರುವ ಆಲ್ಕೈಲ್ ಗುಂಪನ್ನು ಆಧರಿಸಿ ನೀಡುವುದು. ಐಯೂಪ್ಯಾಕ್ (IUPAC) ಪದ್ಧತಿಯ ನಾಮಕರಣದಲ್ಲಿ ಆಲ್ಕೈಲ್ ಹ್ಯಾಲೈಡ್‌ಗಳನ್ನು ಹ್ಯಾಲೋ ಆದೇಶಿತ (subsituted) ಹೈಡ್ರೋಕಾರ್ಬನ್‌ಗಳೆಂದು ಹೆಸರಿಸುವುದು.

ಹ್ಯಾಲೋ ಆರೀನ್‌ಗಳ ಸಾಮಾನ್ಯ ಹೆಸರು ಮತ್ತು ಐಯೂಪ್ಯಾಕ್ (IUPAC) ಹೆಸರು ಒಂದೇ ಆಗಿದೆ. ಡೈ ಹ್ಯಾಲೋಜನ್‌ಗಳ ಸಾಮಾನ್ಯ ಹೆಸರಿನಲ್ಲಿ o, m-, p- ಪೂರ್ವ ಪ್ರತ್ಯಯಗಳನ್ನು ಬಳಸುವುದು. ಆದರೆ ಐಯೂಪ್ಯಾಕ್ ಪದ್ಧತಿಯಲ್ಲಿ ಕ್ರಮವಾಗಿ 1,2: 1,3 ಮತ್ತು 1,4 : ಸಂಖ್ಯಾ ವಾಚಕವನ್ನು ಬಳಸುವುದು.



ಒಂದೇ ಬಗೆಯ ಹ್ಯಾಲೋಜನ್ ಅನ್ನು ಹೊಂದಿರುವ ಡೈ ಹ್ಯಾಲೋ ಆಲ್ಕೇನ್‌ಗಳನ್ನು ಆಲ್ಕೈಲೀಡಿನ್ ಅಥವಾ ಆಲ್ಕೈಲೀನ್ ಡೈ ಹ್ಯಾಲೈಡ್‌ಗಳು ಎನ್ನುವರು.

ಒಂದೇ ಬಗೆಯ ಹ್ಯಾಲೋಜನ್ ಅನ್ನು ಹೊಂದಿರುವ ಡೈ ಹ್ಯಾಲೋ ಸಂಯುಕ್ತಗಳನ್ನು ಜೆಮಿನಲ್ ಹ್ಯಾಲೈಡ್‌ಗಳು (ಹ್ಯಾಲೋಜನ್ ಪರಮಾಣುಗಳು ಒಂದೇ ಕಾರ್ಬನ್‌ಗೆ ಬಂಧಿಸಿರುವ) ಮತ್ತು ವಿಸಿನಲ್ ಹ್ಯಾಲೈಡ್‌ಗಳು (ಹ್ಯಾಲೋಜನ್ ಪರಮಾಣುಗಳು ಅಕ್ಕಪಕ್ಕದ ಕಾರ್ಬನ್‌ನೊಂದಿಗಿರುವ) ಎಂದು ವರ್ಗೀಕರಿಸಿದೆ.

ಸಾಮಾನ್ಯ ಪದ್ಧತಿಯಲ್ಲಿ ಜೆಮಿನಲ್-ಡೈ ಹ್ಯಾಲೈಡ್‌ಗಳನ್ನು ಆಲ್ಕೈಲೀಡಿನ್ ಹ್ಯಾಲೈಡ್‌ಗಳೆಂದು ಮತ್ತು ವಿಸಿನಲ್ ಡೈ ಹ್ಯಾಲೈಡ್‌ಗಳನ್ನು ಆಲ್ಕೈಲೀನ್ ಡೈ ಹ್ಯಾಲೈಡ್‌ಗಳೆಂದು ಹೆಸರಿಸುತ್ತಾರೆ. IUPAC ಪದ್ಧತಿಯಲ್ಲಿ ಅವುಗಳನ್ನು ಡೈ ಹ್ಯಾಲೋ ಆಲ್ಕೇನ್‌ಗಳೆಂದು ಹೆಸರಿಸುತ್ತಾರೆ.



$H_3C - CHCL_2$

ಸಾಮಾನ್ಯ ಹೆಸರು: ಈಥಿಲೀಡಿನ್ ಕ್ಲೋರೈಡ್
IUPAC ಹೆಸರು: 1,1 ಡೈ ಕ್ಲೋರೋಈಥೇನ್

$H_2C - CH_2$ (each C bearing Cl)

ಈಥಿಲೀಡಿನ್ ಡೈ ಕ್ಲೋರೈಡ್
1,2 ಡೈ ಕ್ಲೋರೋಈಥೇನ್

ಕೆಲವು ಹ್ಯಾಲೈಡ್‌ಗಳ ಸಾಮಾನ್ಯ ಮತ್ತು (IUPAC) ಹೆಸರುಗಳು

ರಚನೆ	ಸಾಮಾನ್ಯ ಹೆಸರು	(IUPAC) ಹೆಸರು
$CH_3CH_2CH(Cl)CH_3$	ದ್ವಿತೀಯಕ –ಬ್ಯೂಟೈಲ್ ಕ್ಲೋರೈಡ್	ಕ್ಲೋರೋ ಬ್ಯೂಟೇನ್
$(CH_3)_3CCH_2Br$	ನಿಯೋ –ಪೆಂಟೈಲ್ ಬ್ರೋಮೈಡ್	1–ಬ್ರೋಮೋ 2–ಡೈ ಮೀಥೈಲ್ ಪ್ರೊಪೇನ್
$(CH_3)_3CBr$	ತೃತೀಯಕ–ಬ್ಯೂಟೈಲ್ ಬ್ರೋಮೈಡ್	2–ಬ್ರೋಮೋ, 2–ಮೀಥೈಲ್ ಪ್ರೊಪೇನ್
$CH_2 = CHCl$	ವಿನೈಲ್ ಕ್ಲೋರೈಡ್	ಕ್ಲೋರೋ ಈಥೀನ್
$CH_2 = CHCH_2Br$	ಅಲೈಲ್ ಬ್ರೋಮೈಡ್	3–ಬ್ರೋಮೋಪ್ರೋಪೀನ್
	0–ಕ್ಲೋರೋಟಾಲೀನ್	1–ಕ್ಲೋರೋ–2–ಮೀಥೈಲ್ ಬೆಂಝೀನ್ ಅಥವಾ 2–ಕ್ಲೋರೋ ಟಾಲೀನ್
	ಬೆಂಝೈಲ್ ಕ್ಲೋರೈಡ್	ಕ್ಲೋರೋಫಿನೈಲ್ ಮಿಥೇನ್
$CH_2\,Cl_2$	ಮಿಥಿಲೀನ್ ಕ್ಲೋರೈಡ್	ಡೈಕ್ಲೋರೋಮೀಥೇನ್
$CH\,Cl_3$	ಕ್ಲೋರೋಫಾರ್ಮ್	ಟ್ರೈಕ್ಲೋರೋಮೀಥೇನ್
$CHBr_3$	ಬ್ರೋಮೋಫಾರ್ಮ	ಟ್ರೈಕ್ಲೋರೋಮೀಥೇನ್
CCl_4	ಕಾರ್ಬನ್ ಟೆಟ್ರಾಕ್ಲೋರೈಡ್	ಟೆಟ್ರಾಕ್ಲೋರೋಮೀಥೇನ್
$CH_5CH_2CH_2F$	$n-$ ಪ್ರೋಪೈಲ್ ಫ್ಲೋರೈಡ್	$I-$ ಫ್ಲೋರೋಪ್ರೊಪೇನ್

C-X ಬಂಧ

ಹ್ಯಾಲೋಜನ್ ಪರಮಾಣುಗಳು ಕಾರ್ಬನ್‌ಗಿಂತ ಹೆಚ್ಚು ವಿದ್ಯುದೃಣೀಯವಾದ್ದರಿಂದ ಆಲ್ಕೈಲ್ ಹ್ಯಾಲೈಡ್‌ಗಳಲ್ಲಿ ಕಾರ್ಬನ್ ಹ್ಯಾಲೋಜನ್ ಬಂಧವು ಧ್ರುವೀಯವಾಗಿದೆ. ಕಾರ್ಬನ್ ಪರಮಾಣುವು ಭಾಗಶಃ ಧನಾತ್ಮಕ ಆವೇಶವನ್ನು ಹ್ಯಾಲೋಜನ್ ಪರಮಾಣುವು ಭಾಗಶಃ ಋಣಾತ್ಮಕ ಆವೇಶವನ್ನು ಹೊಂದಿದೆ.

$$-C^{\delta+} - X^{\delta-}$$

ಆವರ್ತಕ ಕೋಷ್ಟಕದಲ್ಲಿ ಹ್ಯಾಲೋಜನ್ ಪರಮಾಣುವಿನ ಗಾತ್ರವು ಗುಂಪಿನಿಂದ ಕೆಳಕ್ಕೆ ಹೋದಂತೆ ಹೆಚ್ಚುತ್ತಾ ಹೋಗುವುದರಿಂದ ಫ್ಲೋರಿನ್ ಪರಮಾಣುವು ಅತ್ಯಂತ ಚಿಕ್ಕದಾಗಿದೆ ಮತ್ತು ಅಯೋಡಿನ್ ಪರಮಾಣುವು ಅತ್ಯಂತ ದೊಡ್ಡದಾಗಿದೆ. ಪರಿಣಾಮವಾಗಿ C-F ನಿಂದ C-I ವರೆಗೆ ಕಾರ್ಬನ್-ಹ್ಯಾಲೋಜನ್ ಬಂಧದ ಅಂತರ ಹೆಚ್ಚುವುದು.

ತಯಾರಿಕಾ ವಿಧಾನಗಳು

ಆಲ್ಕೋಹಾಲ್‌ಗಳಿಂದ: ಆಲ್ಕೋಹಾಲ್ ಅನ್ನು ಥಯೋನಿಲ್ ಕ್ಲೋರೈಡ್\ಫಾಸ್ಪರಸ್ ಹ್ಯಾಲೈಡ್‌ಗಳು ಅಥವಾ ಪ್ರಬಲ ಹ್ಯಾಲೋಜನ್ ಆಮ್ಲಗಳೊಂದಿಗೆ ಪ್ರಕ್ರಿಯಿಸಿದಾಗ ಹ್ಯಾಲೋಜನ್ ಪರಮಾಣುವು ಹೈಡ್ರಾಕ್ಸಿಲ್ ಗುಂಪನ್ನು ಪ್ರತಿಪಾದಿಸುತ್ತದೆ. ಸಾಮಾನ್ಯವಾಗಿ ಕೆಂಪು ರಂಜಕವನ್ನು ಬ್ರೋಮಿನ್ ಮತ್ತು ಅಯೋಡಿನ್‌ನೊಂದಿಗೆ ವರ್ತಿಸಿ ಕ್ರಮವಾಗಿ ಫಾಸ್ಪರಸ್ ಟ್ರೈಬ್ರೋಮೈಡ್ ಮತ್ತು ಫಾಸ್ಪರಸ್ ಟ್ರೈ ಅಯೋಡೈಡ್ ಅನ್ನು ತಯಾರಿಸುತ್ತಾರೆ.

$$3R - OH + PX_3 \rightarrow 3R - X + H_3PO_3\ (X = Cl,\ Br)$$

$$R - OH + PCl_3 \rightarrow R - Cl + POCl_3 + HCl$$

$$R - OH \xrightarrow[X_2 = Br_2,\ I_2]{red\ P/X_2} R - X$$

$$R - OH + SOCl_2 \rightarrow R - Cl + SO_2 + HCl$$

ಪ್ರೈಮರಿ (ಪ್ರಾಥಮಿಕ), ಸೆಕೆಂಡರಿ (ದ್ವಿತೀಯಕ) ಆಲ್ಕೋಹಾಲ್‌ಗಳು ಹ್ಯಾಲೋಜನ್ ಆಮ್ಲಗಳೊಂದಿಗೆ (HX) ಪ್ರತಿಕ್ರಿಯೆಗೊಳಿಸಲು $ZnCl_2$ ಕ್ರಿಯಾವರ್ಧಕದ ಅಗತ್ಯವಿರುತ್ತದೆ. ಟರ್ಶರಿ ಆಲ್ಕೋಹಾಲ್‌ನೊಂದಿಗೆ ಸಾರಯುಕ್ತ ಹೈಡ್ರೋಕ್ಲೋರಿಕ್ ಆಮ್ಲವನ್ನು ಕೇವಲ ಕುಲುಕುವುದರಿಂದ ರಾಸಾಯನಿಕ ಕ್ರಿಯೆಯನ್ನು ನಡೆಸಬಹುದು.

$$R - OH + HX \xrightarrow{zncl_2} R - X + H_2O$$

ಹ್ಯಾಲೋಜನ್ ಆಮ್ಲದೊಂದಿಗೆ ಆಲ್ಕೋಹಾಲ್‌ನ ಕ್ರಿಯಾಪಟುತ್ವವು $3^0 > 2^0 > 1^0$ ಕ್ರಮದಲ್ಲಿದೆ.

ಆರೈಲ್ ಹ್ಯಾಲೈಡ್‌ಗಳ ತಯಾರಿಕೆಗೆ ಮೇಲಿನ ವಿಧಾನವು ಅನ್ವಯಿಸುವುದಿಲ್ಲ. ಏಕೆಂದರೆ ಫಿನಾಲ್‌ನಲ್ಲಿ ಕಾರ್ಬನ್ ಆಕ್ಸಿಜನ್ ಬಂಧವು ಭಾಗಶಃ ದ್ವಿಬಂಧ ಲಕ್ಷಣವನ್ನು ಹೊಂದಿದ್ದು, ಬಲಿಷ್ಠವಾಗಿರುತ್ತದೆ. ಅದನ್ನು ಒಡೆಯುವುದು ಕಠಿಣ.

(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)



❦ ಸುಭಾಷಿತ ❦

ಮಾನವ ಜೀವನದ ಪರಮ ಉದ್ದೇಶ ಮತ್ತು ಗುರಿಯು ಪ್ರೀತಿಸುವುದನ್ನು ರೂಢಿಸಿಕೊಳ್ಳುವುದೇ ಆಗಿದೆ.

–ರಾಮಕೃಷ್ಣ ಪರಮಹಂಸ

ಮರುವಲಸೆಯ ಅಪಾಯ ಕಡೆಗಣಿಸಬೇಡಿ ಗ್ರಾಮಗಳನ್ನು ಸೋಂಕಿನಿಂದ ಕಾಪಾಡಿ

ಕೋವಿಡ್ ವ್ಯಾಪಕವಾಗಿ ಹರಡುವುದನ್ನು ತಡೆಯಲು ರಾಜ್ಯ ಸರ್ಕಾರವು 14 ದಿನಗಳ ಕರ್ಫ್ಯೂ ಘೋಷಿಸಿದ ಬೆನ್ನಲ್ಲೇ ಬೆಂಗಳೂರು ಸಹಿತ ಪ್ರಮುಖ ನಗರಗಳಿಂದ ಹಳ್ಳಿಗಳಿಗೆ ದೊಡ್ಡ ಸಂಖ್ಯೆಯಲ್ಲಿ ಮರುವಲಸೆ ನಡೆದಿದೆ. ಸುದೀರ್ಘ ಕರ್ಫ್ಯೂ ಅವಧಿಯಲ್ಲಿ ಯಾವುದೇ ಆದಾಯವಿಲ್ಲದೆ ಬಡ ಕುಟುಂಬಗಳು ದೊಡ್ಡ ನಗರಗಳಲ್ಲಿ ಬದುಕು ಸಾಗಿಸುವುದು ಕಷ್ಟ. ಸ್ವಂತ ಊರುಗಳಿಗೆ ತೆರಳಿದರೆ ಆರೋಗ್ಯವನ್ನಾದರೂ ರಕ್ಷಣೆ ಮಾಡಿಕೊಳ್ಳಬಹುದು ಎಂಬ ಆಶಯ ಈ ಮಹಾವಲಸೆಯ ಹಿಂದಿದೆ. ಯಾವುದೇ ಗಳಿಕೆಯಿಲ್ಲದೆ ಬೆಂಗಳೂರಿನಂತಹ ನಗರದಲ್ಲಿ ದುಬಾರಿ ಮನೆಬಾಡಿಗೆ ತೆತ್ತು ಸುಮ್ಮನೇ ಕಾಲ ಕಳೆಯುವುದು ಕಾರ್ಮಿಕ ವರ್ಗದ ಪಾಲಿಗಂತೂ ಆಗದ ಮಾತು. ಅವರ ಧಾವಂತ ಸ್ವಯಂವೇದ್ಯ. ಆದರೆ, ಕರ್ಫ್ಯೂ ಜಾರಿಗೊಳಿಸುವ ಮುನ್ನ ಪೂರ್ವಸಿದ್ಧತೆ ಮಾಡಿಕೊಳ್ಳುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ಎಡವಿದೆ. ಗ್ರಾಮೀಣ ಭಾಗಗಳತ್ತ ಮರುವಲಸೆ ನಡೆಯಲಿದೆ ಎನ್ನುವುದು ಗೊತ್ತಿದ್ದೂ ಕರ್ಫ್ಯೂ ಘೋಷಣೆಗೆ ಮುನ್ನ ಕಟ್ಟುನಿಟ್ಟಿನ ತಪಾಸಣೆಗಾಗಲೀ ಕ್ವಾರಂಟೈನ್‌ಗಾಗಲೀ ಯಾವುದೇ ವ್ಯವಸ್ಥೆಯನ್ನು ಮಾಡಿಕೊಳ್ಳಲಿಲ್ಲ. ರಾಜ್ಯದ ಶೇಕಡ 60ರಷ್ಟು ಸೋಂಕು ಪ್ರಕರಣಗಳು ವರದಿ ಆಗುತ್ತಿರುವ ಬೆಂಗಳೂರಿನಿಂದ ಸೋಂಕಿತರೇನಾದರೂ ಹಳ್ಳಿಗಳಿಗೆ ವಲಸೆ ಹೋದರೆ ಸಾಂಕ್ರಾಮಿಕ ಉಲ್ಬಣಗೊಳ್ಳಬಹುದು ಎನ್ನುವ ಆತಂಕ ಸರ್ಕಾರವನ್ನು ಕಾಡದೇ ಇರುವುದು ಸೋಜಿಗ. ದೊಡ್ಡ ನಗರಗಳಿಂದ ವಾಪಸ್ ಹೋದವರನ್ನು ಯಾವ ಸೋಂಕು ಪತ್ತೆ ಪರೀಕ್ಷೆಗೂ ಒಳಪಡಿಸಿಲ್ಲ. ಹೀಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸೋಂಕು ಏನಾದರೂ ವ್ಯಾಪಕವಾಗಿ ಹರಡಿದರೆ ಅದಕ್ಕೆ ಸರ್ಕಾರದ ನಿರ್ಲಕ್ಷ್ಯವಲ್ಲದೆ ಬೇರೇನೂ ಕಾರಣವಲ್ಲ. ಹೊರ ಊರುಗಳಿಂದ ಹಳ್ಳಿಗಳಿಗೆ ಮರಳಿರುವ ಜನರ ಮೇಲೆ ನಿಗಾ ವಹಿಸುವಂತೆ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಸೂಚನೆಯೇನೋ ಹೊರಟಿದೆ. ಆದರೆ, ಹೊರಗಿನಿಂದ ಬಂದವರನ್ನು ಯಾವುದೇ ಪರೀಕ್ಷೆ ಮಾಡದೆ ಮೊದಲು ಹಾಗೇ ಬಿಟ್ಟುಕೊಂಡು, ಬಳಿಕ ನಿಗಾ ಇಡುವಂತೆ ಸೂಚನೆ ನೀಡಿದರೆ ಏನು ಪ್ರಯೋಜನ?



ಗ್ರಾಮೀಣ ಪ್ರದೇಶಗಳಲ್ಲಿ ಕೊರೊನಾ ಸೋಂಕು ಹರಡುವಿಕೆಯನ್ನು ತಡೆಯಲು ಸಮರೋಪಾದಿಯಲ್ಲಿ ಕೆಲಸ ಮಾಡಲು ಸರ್ಕಾರವು ಸ್ಥಳೀಯ ಆಡಳಿತ ಯಂತ್ರವನ್ನು ಚುರುಕುಗೊಳಿಸಬೇಕಾದುದು ತುರ್ತು ಅಗತ್ಯ

ಗ್ರಾಮೀಣಾಭಿವೃದ್ಧಿ ಇಲಾಖೆ ಬರೀ ಸುತ್ತೋಲೆ ಹೊರಡಿಸಿ ಸುಮ್ಮನೆ ಕುಳಿತುಕೊಳ್ಳುವಷ್ಟು ಪರಿಸ್ಥಿತಿ ಸರಳವಾಗಿಲ್ಲ. ವೈದ್ಯ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿರುವ ಬೆಂಗಳೂರು ನಗರವೇ ಕೋವಿಡ್ ಸಾಂಕ್ರಾಮಿಕದಿಂದ ತತ್ತರಿಸಿದೆ. ಹಾಗಿರುವಾಗ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ ಮತ್ತು ತಜ್ಞ ವೈದ್ಯ ಸಿಬ್ಬಂದಿ ಇಲ್ಲದ ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರ ಮತ್ತು ಗ್ರಾಮ ಮಟ್ಟದಲ್ಲಿ ಸೋಂಕು ಹರಡಿದರೆ ಪರಿಣಾಮ ಭೀಕರವಾಗಲಿದೆ. ಈ ಹಿನ್ನೆಲೆಯಲ್ಲಿ ಸೋಂಕು ತಡೆಗೆ ಸಮರೋಪಾದಿಯಲ್ಲಿ ಕೆಲಸ ಮಾಡಲು ಸರ್ಕಾರವು ಸ್ಥಳೀಯ ಆಡಳಿತ ಯಂತ್ರವನ್ನು ಚುರುಕುಗೊಳಿಸಬೇಕಿದೆ. ತಾಲ್ಲೂಕು ದಂಡಾಧಿಕಾರಿಗಳಾದ ತಹಶೀಲ್ದಾರರು ಪ್ರತಿದಿನವೂ ಆಯಾ ತಾಲ್ಲೂಕಿನ ಕೋವಿಡ್ ಪರಿಸ್ಥಿತಿಯ ಅವಲೋಕನ ನಡೆಸಿ, ಯಾವ ಪ್ರದೇಶದಲ್ಲಿ ಆದ್ಯತೆಯ ಮೇಲೆ ತುರ್ತು ಕ್ರಮಗಳ ಅಗತ್ಯವಿದೆ ಎನ್ನುವುದನ್ನು ಪ್ರಕಟಿಸಬೇಕು. ತಾಲ್ಲೂಕು ಆಸ್ಪತ್ರೆಗಳಲ್ಲಿ ಇರುವ ಕೊರತೆಗಳನ್ನು ಸರಿಪಡಿಸಲು ಮತ್ತು ತುರ್ತು ವೈದ್ಯಕೀಯ ನೆರವು ಒದಗಿಸಲು ಸ್ಥಳೀಯ ಸ್ವಯಂಸೇವಾ ಸಂಸ್ಥೆಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಂಘಟಿತ ಕ್ರಮಗಳನ್ನು ಕೈಗೊಳ್ಳಬೇಕು. ನಗರಗಳಿಂದ ಗ್ರಾಮೀಣ ಪ್ರದೇಶಗಳಿಗೆ ವಾಪಸ್ ಹೋಗಿರುವ ದುಡಿಯುವ ಕೈಗಳಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಒಳಗೊಂಡಂತೆ ವಿವಿಧ ಯೋಜನೆಗಳಡಿ ತಕ್ಷಣಕ್ಕೆ ಕೆಲಸ ದೊರಕಿಸುವ ಕಾಮಗಾರಿಗಳನ್ನೂ ಆಯಾ ಜಿಲ್ಲಾ ಪಂಚಾಯಿತಿಗಳು ತುರ್ತಾಗಿ ಕೈಗೆತ್ತಿಕೊಳ್ಳಬೇಕು. ಪ್ರಾಥಮಿಕ ಹಂತದ ಸೋಂಕುಪೀಡಿತರ ಐಸೊಲೇಷನ್‌ಗೆ ಬೇಕಾದ ಪ್ರತ್ಯೇಕ ವ್ಯವಸ್ಥೆಗಳನ್ನೂ ತಾಲ್ಲೂಕು ಮಟ್ಟದಲ್ಲಿ ಕೈಗೊಳ್ಳಬೇಕು. ಮುಖ್ಯವಾಗಿ ಆಯಾ ಭಾಗದ ಶಾಸಕರು ಈ ವಿಷಯದಲ್ಲಿ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಬೇಕು. ತಾಲ್ಲೂಕು ಮಟ್ಟದಲ್ಲೇ ಕೋವಿಡ್ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಿ ಸಂಕಷ್ಟದಲ್ಲಿರುವ ರೋಗಿಗಳಿಗೆ ನೆರವಾಗಲು ಪ್ರತಿಯೊಬ್ಬ ಶಾಸಕರೂ ಮುಂದಾದರೆ, ಗ್ರಾಮೀಣ ಭಾಗದಲ್ಲಿ ಸೋಂಕು ವ್ಯಾಪಕವಾಗಿ ಹರಡದಂತೆ ಮಾಡಬಹುದು. ಹಾಗೆಯೇ ಪರಿಸ್ಥಿತಿ ಬಿಗಡಾಯಿಸುವವರೆಗೆ ಕಾಯದೆ ಸೋಂಕಿತರಿಗೆ ಪರಿಣಾಮಕಾರಿ ಚಿಕಿತ್ಸೆ ಒದಗಿಸುವ ಮೂಲಕ ಸಾವು ನೋವನ್ನು ಕನಿಷ್ಠ ಮಟ್ಟಕ್ಕೆ ಇಳಿಸುವ ದಿಸೆಯಲ್ಲಿಯೂ ಈಗಿನಿಂದಲೇ ಕಾರ್ಯೋನ್ಮುಖರಾಗಬೇಕು.

ದಿನದ ಟ್ವೀಟ್

ಯಶಸ್ಸಿಗೆ ಬೇಕಾದದ್ದು...



ಯಶಸ್ಸು ಎಂಬುದು ಕಾಕತಾಳೀಯವಾಗಿ ಸಿಗುವಂತಹದ್ದಲ್ಲ. ಅದಕ್ಕೆ ಸಮರ್ಪಣಾ ಮನೋಭಾವ ಬೇಕಾಗುತ್ತದೆ. ನಾನು ಕೋವಿಡ್ ಆಸ್ಪತ್ರೆಗೆ ಭೇಟಿ ನೀಡಿದಾಗ, ಕೋವಿಡ್‌ಪೀಡಿತ ಯುವಕನೊಬ್ಬ ಅಲ್ಲಿ ಸಿ.ಎ ಪರೀಕ್ಷೆಗೆ ಅಧ್ಯಯನ ನಡೆಸುತ್ತಿದ್ದುದನ್ನು ಕಂಡೆ. ಸಮರ್ಪಣಾ ಮನೋಭಾವವು ನೀವು ನೋವನ್ನು ಮರೆಯುವಂತೆ ಮಾಡುತ್ತದೆ. ಆ ಬಳಿಕ ಸಿಗುವ ಯಶಸ್ಸು ಕೇವಲ ಔಪಚಾರಿಕ ಅಷ್ಟೆ.

ವಿಜಯ್, ಐಎಎಸ್ ಅಧಿಕಾರಿ, ಒಡಿಶಾ

25 ವರ್ಷಗಳ ಹಿಂದೆ

ಸೋಮವಾರ, 29-4-1996

• **ದೇಶದಲ್ಲಿ 69 ಕಡೆ ಮರು ಮತದಾನ**

ನವದೆಹಲಿ, ಏ. 28 (ಯುಎನ್ಐ)– ಶನಿವಾರ ನಡೆದ ಮೊದಲ ಹಂತದ ಮತದಾನದ ವೇಳೆಯಲ್ಲಿ ಅಕ್ರಮ ನಡೆದಿರುವ ಹಿನ್ನೆಲೆಯಲ್ಲಿ ಕರ್ನಾಟಕದ ಒಂದು ಮತಗಟ್ಟೆಯೂ ಸೇರಿದಂತೆ ವಿವಿಧ ರಾಜ್ಯಗಳ 69 ಮತಗಟ್ಟೆಗಳಲ್ಲಿ ಏ. 30ರಂದು ಮರು ಮತದಾನ ನಡೆಸುವಂತೆ ಚುನಾವಣಾ ಆಯೋಗ ಇಂದು ಆದೇಶಿಸಿದೆ. ಇದರಲ್ಲಿ ಪ್ರಧಾನಿ ಪಿ.ವಿ.ನರಸಿಂಹ ರಾವ್ ಸ್ಪರ್ಧಿಸಿರುವ ಆಂಧ್ರ ಪ್ರದೇಶದ ನಂದ್ಯಾಲ ಕ್ಷೇತ್ರದ 17 ಮತಗಟ್ಟೆಗಳೂ ಸೇರಿವೆ.

ಕರ್ನಾಟಕ, ಅಸ್ಸಾಂ, ಹರಿಯಾಣ, ತಮಿಳುನಾಡು, ರಾಜಸ್ಥಾನ, ಆಂಧ್ರ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳಲ್ಲಿ ನಿನ್ನೆ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಅಕ್ರಮ ಮತದಾನ ನಡೆದಿರುವ ಬಗ್ಗೆ ಆಯಾ ರಾಜ್ಯಗಳ ಚುನಾವಣಾಧಿಕಾರಿಗಳು ಆಯೋಗಕ್ಕೆ ವರದಿ ಮಾಡಿದ್ದಾರೆ ಎಂದು ಆಯೋಗದ ವಕ್ತಾರರು ತಿಳಿಸಿದ್ದಾರೆ.

• **ಕಡೆಗಣಿಸಿದ ಸಲಹೆ: ಶೇಷನ್ ವಿಷಾದ**

ನವದೆಹಲಿ, ಏ. 28 (ಪಿಟಿಐ)– ಚುನಾವಣೆಗಳಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳು ಮಾಡುವ ಚುನಾವಣಾ ವೆಚ್ಚವನ್ನು ಕಡಿಮೆ ಮಾಡಲು ಚುನಾವಣಾ ಕಾನೂನಿಗೆ ತಿದ್ದುಪಡಿ ಮಾಡಬೇಕೆಂದು ಚುನಾವಣಾ ಆಯೋಗ ಮಾಡಿರುವ ಶಿಫಾರಸುಗಳನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸದಿರುವ ಬಗ್ಗೆ ಮುಖ್ಯ ಚುನಾವಣಾ ಆಯುಕ್ತ ಟಿ.ಎನ್. ಶೇಷನ್ ಟಿ.ವಿ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 29-4-1971

• **ಸಂಯುಕ್ತ ಸಮಾಜವಾದಿ ಪಕ್ಷ ಹೋಳು: ರಾಜನಾರಾಯಣ್ 'ದರ್ಪ' ಧಿಕ್ಕರಿಸಿ ಪ್ರತಿ ಸಮ್ಮೇಳನ**

ಪಟ್ನಾ, ಏ. 28– ಸಂಯುಕ್ತ ಸಮಾಜವಾದಿ ಪಕ್ಷ ಇಂದು ಎರಡಾಗಿ ಒಡೆಯಿತು.

ಪಕ್ಷದ ಮಾಜಿ ಅಧ್ಯಕ್ಷ ಎಸ್.ಎಂ.ಜೋಶಿ ಮತ್ತು ಪ್ರಧಾನ ಕಾರ್ಯದರ್ಶಿ ಜಾರ್ಜ್ ಫರ್ನಾಂಡಿಸ್ ಅವರ ನಾಯಕತ್ವದಲ್ಲಿ ಅನೇಕ ಪ್ರತಿನಿಧಿಗಳು ಮತ್ತು ಕಾರ್ಯಕರ್ತರು ಇಂದು ಅದರ ವಿಶೇಷ ಸಮಾವೇಶದಿಂದ ಹೊರಬಂದು ಪ್ರತ್ಯೇಕ ಸಮ್ಮೇಳನ ನಡೆಸಿದುದರಿಂದ, ಕಳೆದ ಡಿಸೆಂಬರ್‌ನಲ್ಲಿ ಪುಣೆ ಅಧಿವೇಶನದಲ್ಲಿ ಕಾಣಿಸಿಕೊಂಡಿದ್ದ ಪಕ್ಷದಲ್ಲಿನ ಒಡಕು ವಿಧ್ಯುಕ್ತವಾದಂತಾಗಿದೆ.

ಅಧಿಕೃತ ಸಮಾವೇಶದಲ್ಲಿ ಮತ್ತು ನಂತರ ಪ್ರತಿ ಸಮ್ಮೇಳನದಲ್ಲಿ ಮಾತನಾಡಿದ ಫರ್ನಾಂಡಿಸ್ ಅವರು 'ರಾಜನಾರಾಯಣ್ ಅವರ ಅಸಹನೀಯ ನಡವಳಿಕೆ ಮತ್ತು ದರ್ಪದ ಧೋರಣೆ' ಕಾರಣ ತಾವು ಪ್ರತ್ಯೇಕ ಪಕ್ಷ ರಚಿಸುತ್ತಿರುವುದಾಗಿ ನುಡಿದರು.

• **ನವೆಂಬರ್ 1ರಿಂದ ಎಲ್ಲ ಮಟ್ಟದಲ್ಲಿ ಕನ್ನಡದಲ್ಲೇ ಆಡಳಿತಕ್ಕೆ ಆಗ್ರಹ**

ಬೆಂಗಳೂರು, ಏ. 28– ಜೂನ್ ಒಂದರಿಂದ ಜಿಲ್ಲಾ ಮಟ್ಟದಲ್ಲಿ ಹಾಗೂ ನವೆಂಬರ್ ಒಂದರಿಂದ ಎಲ್ಲ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ.ನಾರಾಯಣ ಅವರು ರಾಜ್ಯಪಾಲ ಶ್ರೀ ಧರ್ಮವೀರ ಅವರಿಗೆ ಮೂರು ಅಂಶಗಳ ಮನವಿ ಸಲ್ಲಿಸಲಿದ್ದಾರೆ.

ಹಿಂದಿನ ಪ್ಲೇಗ್ ಕಾಲಕ್ಕೂ ಈಗಿನ ಕೊರೊನಾ ಕಾಲಕ್ಕೂ ನಮ್ಮ ಮನಃಸ್ಥಿತಿ ಬದಲಾಗಿದೆಯೇ?

'ಪ್ಲೇಗ್ ಸಾಹಿತ್ಯ' ಎಂಬ ಕೈಗನ್ನಡಿ



ವಿಶ್ಲೇಷಣೆ

ಪ್ರೊ. ಶಿವಲಿಂಗಸ್ವಾಮಿ ಎಚ್.ಕೆ.

ಕಳೆದ ಆರು ತಿಂಗಳಿನಿಂದ ತಾವು ಕೊರೊನೋತ್ತರ ಕಾಲಘಟ್ಟದಲ್ಲಿ ಇದ್ದೇವೆ ಎಂದು ನಮ್ಮಲ್ಲಿ ಅನೇಕರು ಭಾವಿಸಿದ್ದರು. ಕೊರೊನಾ ವೈರಸ್ ಮುಗಿದ ಕತೆ ಎಂಬುದು ಬಹುತೇಕರ ಮಾತುಗಳಲ್ಲಿ ಧ್ವನಿಸುತ್ತಿತ್ತು. ಕೊರೊನಾ ಸೋಂಕಿನ ತೀವ್ರತೆ ಹೆಚ್ಚಾಗಿದ್ದಾಗ ತಾವು ಕಳೆದ ಆತಂಕದ ದಿನಗಳನ್ನು ಮೆಲುಕು ಹಾಕುವುದರಲ್ಲಿ ಎಲ್ಲರೂ ಮಗ್ನರಾಗಿದ್ದರು. ಸದ್ಯ ಮುಗಿಯಿತಲ್ಲಾ ಎಂಬ ನಿಟ್ಟುಸಿರಿನೊಂದಿಗೆ ಹೆಚ್ಚು ಸುಖಿಸುವ ತವಕದಲ್ಲಿದ್ದರು. ಆದರೆ ಕೊರೊನಾ ಮುಗಿದ ಕತೆ ಎಂಬುದು ವೈಜ್ಞಾನಿಕವಾಗಿ ದೃಢಪಟ್ಟ ಸಂಗತಿಯಲ್ಲ ಎಂಬುದು ಯಾರ ಮನಸ್ಸಿನಲ್ಲಿಯೂ ಇದ್ದಂತೆ ತೋರಲಿಲ್ಲ.

ಕೊರೊನಾ ಪೀಡಿತರ ಸಂಖ್ಯೆ ಕಡಿಮೆಯಾಗುತ್ತಿದ್ದ ಸೂಚನೆಗಳು ದೊರೆತೊಡನೆಯೇ ಎಲ್ಲರೂ ತಮ್ಮ ಅನುಕೂಲಕ್ಕೆ ತಕ್ಕಂತೆ ವ್ಯಾಖ್ಯಾನಗಳನ್ನು ಮಾಡತೊಡಗಿದರು. ನ್ಯೂ ನಾರ್ಮಲ್ ಪರಿಸ್ಥಿತಿ ಮುಗಿದಿದ್ದು ಹಳೆ ದಿನಗಳು ಮರುಕಳಿಸಿದವು ಎಂಬ ಭಾವ ಎಲ್ಲರನ್ನೂ ಆವರಿಸಿಕೊಂಡಿತು. ಕೋವಿಡ್ ನಿಬಂಧನೆಗಳನ್ನು ಗಾಳಿಗೆ ತೂರಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಜನರು ಮದುವೆ ಮುಂತಾದ ಸಂಭ್ರಮಗಳಲ್ಲಿ ನಿರ್ಭೀತಿಯಿಂದ ಪಾಲ್ಗೊಳ್ಳುವುದು ಸರ್ವೇ ಸಾಮಾನ್ಯವಾಗಿತ್ತು. ಇವೆಲ್ಲದರ ಫಲಿತಾಂಶವೇ ಇಂದು ತೀವ್ರವಾಗಿರುವ ಕೋವಿಡ್ ಎರಡನೇ ಅಲೆ.

ಕೋವಿಡ್ ಮಹಾಮಾರಿಯು ಜಗತ್ತನ್ನು 2019ರ ನವೆಂಬರ್‌ನಿಂದ ಆಕ್ರಮಿಸಿಕೊಂಡು ಜನರನ್ನು ಸಂಕಷ್ಟಕ್ಕೆ ತಳ್ಳತೊಡಗಿತು. ಸಾಂಕ್ರಾಮಿಕಗಳು ಜಗತ್ತನ್ನು ಆವರಿಸಿಕೊಂಡಾಗ ಜನರ ವರ್ತನೆ ಹೇಗಿರುತ್ತದೆ, ಸಾಂಕ್ರಾಮಿಕಗಳನ್ನು ತಡೆಗಟ್ಟಲು ಸರ್ಕಾರಗಳು ತೆಗೆದುಕೊಳ್ಳುವ ಕ್ರಮಗಳು ಹೇಗಿರುತ್ತವೆ ಮತ್ತು ಆ ಕ್ರಮಗಳಿಗೆ ಜನರ ಪ್ರತಿಕ್ರಿಯೆ ಹೇಗಿರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ನಮಗೆ ಪ್ಲೇಗ್ ಕುರಿತ ಸಾಹಿತ್ಯಗಳು ಇಂದಿಗೂ ಬಹಳ ಪ್ರಸ್ತುತ ಎನಿಸುತ್ತವೆ. ಈ ಸಾಹಿತ್ಯಗಳು ಸೃಷ್ಟಿಯಾಗಿ ಸರಿಸುಮಾರು ಶತಮಾನವೇ ಕಳೆದಿದ್ದರೂ ಸಾಂಕ್ರಾಮಿಕಗಳ ಸಂದರ್ಭಗಳಲ್ಲಿ ನಮ್ಮ ವರ್ತನೆ ಅಂದು ಹೇಗಿತ್ತೋ ಇಂದಿಗೂ ಹಾಗೆಯೇ ಇದೆ ಎಂಬುದನ್ನು ಅವು ಅದ್ಭುತವಾಗಿ ಸಾಬೀತುಪಡಿಸುತ್ತವೆ.

ಪ್ರತೀ ಬಾರಿ ಮನುಕುಲವು ಸಾಂಕ್ರಾಮಿಕದ ದಾಳಿಗೆ ತುತ್ತಾದ ಸಂದರ್ಭಗಳಲ್ಲಿ ಎಲ್ಲರ ವರ್ತನೆಗಳಲ್ಲಿ ಅತ್ಯಂತ ಗಮನಾರ್ಹವಾದ ಏಕರೂಪತೆ ಇರುತ್ತದೆ ಎಂದು ಪ್ಲೇಗ್ ಕುರಿತ ಈ ಸಾಹಿತ್ಯಗಳು ಪ್ರತಿಪಾದಿಸುತ್ತವೆ. ಬಹಳ ಪ್ರಮುಖವಾಗಿ, ಸಾಂಕ್ರಾಮಿಕಗಳ ಸುಳಿವು ದೊರೆತ ಮೊದಲ ಕೆಲ ದಿನಗಳಲ್ಲಿ ಆತಂಕ ಮನೆ ಮಾಡುತ್ತದೆ. ತಮ್ಮ ಮುಂದಿನ ನಡೆಯ ಕುರಿತಾಗಿ ಆಹಾರ ಸಾಮಗ್ರಿಗಳ ಸಂಗ್ರಹಕ್ಕೆ ಆದ್ಯತೆ ನೀಡುತ್ತಾರೆ. ಇದನ್ನು ಇಂಗ್ಲಿಷಿನಲ್ಲಿ 'ಪ್ಯಾನಿಕ್ ಬೈಯಿಂಗ್' ಎಂದು ಕರೆಯುತ್ತಾರೆ. ಇದು ಈಗ ಹೆಚ್ಚು ಕಂಡುಬಂದದ್ದು ಸ್ಯಾನಿಟೈಸರ್ ಮತ್ತು ಹ್ಯಾಂಡ್‌ವಾಷ್‌ಗಳ ವಿಷಯದಲ್ಲಿ. ತಮಗೆಷ್ಟು ಬೇಕು ಎಂದು ಯೋಚಿಸುವ ಬದಲಾಗಿ, ಆತಂಕದ ಕಾರಣದಿಂದ ತಮ್ಮ ಕ್ಷೇಮಕ್ಕಾಗಿ ಏನಾದರೂ ಮಾಡಲು ಸಿದ್ಧ ಎಂಬ ಮನಃಸ್ಥಿತಿಯಲ್ಲಿ ಕೊಳ್ಳುವುದನ್ನೇ ಪ್ಯಾನಿಕ್ ಬೈಯಿಂಗ್ ಎನ್ನುವುದು.

ಸಾಂಕ್ರಾಮಿಕಗಳ ವಿಷಯದಲ್ಲಿ ಮನುಷ್ಯನ ವರ್ತನೆ ಬದಲಾಗದೇ ಉಳಿದಿರುವುದಕ್ಕೆ ಮತ್ತೊಂದು ಉದಾಹರಣೆಯೆಂದರೆ, ತಮ್ಮ ಜವಾಬ್ದಾರಿಯನ್ನು ಅರಿಯದೆ ಸರ್ಕಾರಗಳನ್ನು ದೂರುವ ಪ್ರಕ್ರಿಯೆ. ಸಾಂಕ್ರಾಮಿಕಗಳು ಎರಗಿದಾಗ ಮನುಷ್ಯರು ಒಬ್ಬರಿಂದ ಒಬ್ಬರು ದೂರ ಇರಬೇಕಾಗಿದ್ದು, ಸಹಾಯಹಸ್ತ ಚಾಚಲು ಸೂಕ್ತ ತರಬೇತಿ ಇರಬೇಕಾಗುತ್ತದೆ. ತರಬೇತಿಯಿರುವ ಆರೋಗ್ಯ ಕಾರ್ಯಕರ್ತರ ಸಂಖ್ಯೆ ಕಡಿಮೆಯಿದ್ದಾಗ, ನಮ್ಮ ಕ್ಷೇಮವನ್ನು ನಾವು ನೋಡಿಕೊಳ್ಳಲು ಆದಷ್ಟು ಅಂತರ ಕಾಪಾಡಿಕೊಳ್ಳಬೇಕಿರುತ್ತದೆ. ಸರ್ಕಾರವನ್ನು ದೂಷಿಸುವ ಬದಲು, ಪ್ರಭುಗಳಷ್ಟೇ ಅಲ್ಲ ಪ್ರಜೆಗಳು ಸಹ ಈ ಸಾಂಕ್ರಾಮಿಕ ನಿಯಂತ್ರಣ ಪ್ರಕ್ರಿಯೆಯಲ್ಲಿ ಪಾಲುದಾರರು ಎಂದು ಅರ್ಥಮಾಡಿಕೊಳ್ಳಬೇಕಿದೆ.

ಸಾಂಕ್ರಾಮಿಕಗಳ ಸಮಯದಲ್ಲಿ ಮನುಷ್ಯರ ವರ್ತನೆಯನ್ನು 1912ರಲ್ಲಿ ಪ್ರಕಟವಾದ ಅಮೆರಿಕದ ಜ್ಯಾಕ್ ಲಂಡನ್ ಅವರ ಕಾದಂಬರಿ 'ದಿ ಸ್ಕಾರ್ಲೆಟ್ ಪ್ಲೇಗ್' ಬಹಳ ಆಸಕ್ತಿದಾಯಕವಾಗಿ ಪ್ರಸ್ತುತಪಡಿಸುತ್ತದೆ. ಕಾದಂಬರಿಯ ಕಥಾನಾಯಕ ಜೇಮ್ಸ್ ಸ್ಮಿತ್ ಈ ಕತೆಯ ನಿರೂಪಕನೂ ಆಗಿ, ಜನರು ಅನುಭವಿಸುವ ಮಾನಸಿಕ ಮತ್ತು ದೈಹಿಕ ಆಘಾತಗಳ ಬಗ್ಗೆ ವಿವರಿಸುತ್ತಾನೆ. ಅವನ ತರಗತಿಯ ವಿದ್ಯಾರ್ಥಿನಿಯೊಬ್ಬಳ ಸಾವು, ಭಯಾನಕವಾದ ಸ್ಕಾರ್ಲೆಟ್ ಪ್ಲೇಗ್ ಸೋಂಕಿನಿಂದ ಆಗಿರುತ್ತದೆ. ಜನರು ತಮ್ಮ ಜೀವ ಉಳಿಸಿಕೊಳ್ಳಲು ಮಾಡುವ ಪ್ರಯತ್ನಗಳನ್ನು ವಿವರಿಸುವ ಜೇಮ್ಸ್, ಇಂದು ನಾವು ಹೇಗೆ ನಮ್ಮ ಹಿಂದಿನ ಕಾಲದ ವೈಭವವನ್ನು ನೆನಪಿಸಿಕೊಂಡು ಕೊರಗುತ್ತೇವೆಯೋ ಹಾಗೆಯೇ ಸಾಮಾಜಿಕ ಜೀವನದ ಸುಖವನ್ನು ಸ್ಮರಿಸಿಕೊಂಡು ಕೊರಗುತ್ತಾನೆ.

ಯುರೋಪಿನ ಆಲ್ಬರ್ಟ್ ಕಮು ಎಂಬ ಅಸ್ತಿತ್ವವಾದಿಯು 1947ರಲ್ಲಿ 'ದಿ ಪ್ಲೇಗ್' ಎಂಬ ಕಾದಂಬರಿಯನ್ನು ಪ್ರಕಟಿಸಿದರು. ಈ ಕಾದಂಬರಿಯು ಜ್ಯಾಕ್ ಲಂಡನ್ ಅವರ ಕಾದಂಬರಿಗಿಂತ ಇನ್ನೂ ಹೆಚ್ಚಿನ ಮಟ್ಟದಲ್ಲಿ ನಮ್ಮ ಇಂದಿನ ಪರಿಸ್ಥಿತಿಗೆ ಕನ್ನಡಿ ಹಿಡಿಯುತ್ತದೆ. ಡಾ. ರಿಯು ಈ ಕಾದಂಬರಿಯ ಕಥಾನಾಯಕ. ಓರಾನ್ ಎಂಬ ನಗರದಲ್ಲಿ ಇಲಿಗಳು ಸಾಯುತ್ತಿರುವುದನ್ನು ಕಂಡ ವೈದ್ಯನು ಕೂಡಲೇ ಎಚ್ಚೆತ್ತುಕೊಂಡು ಸರ್ಕಾರವನ್ನು ಎಚ್ಚರಿಸುವ ಪ್ರಯತ್ನ ಮಾಡುತ್ತಾನೆ. ಆದರೆ ಅವನ ಮಾತನ್ನು ನಂಬದ ಸರ್ಕಾರ ಇದಕ್ಕೆ ಪ್ರತಿಕ್ರಿಯಿಸಲು ಯಾವುದೇ ಆಸಕ್ತಿಯನ್ನು ತೋರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ನಾವು ನಮ್ಮ ಇಂದಿನ ಪರಿಸ್ಥಿತಿಯನ್ನು ಅವಲೋಕಿಸಬೇಕಿದೆ.

ಚೀನಾದ ವುಹಾನ್ ನಗರದಲ್ಲಿ ಕೊರೊನಾ ವೈರಸ್ ಎಂಬುದೊಂದು ಹುಟ್ಟಿಕೊಂಡು ಬೀದಿ ಬೀದಿಗಳಲ್ಲಿ ಹೆಣಗಳು ಉರುಳುತ್ತಿವೆ ಎಂಬುದು ಇಡೀ ಜಗತ್ತಿಗೇ ತಿಳಿದಿತ್ತು. ಆದರೆ ಅಚ್ಚರಿಯ ಸಂಗತಿಯೆಂದರೆ, ಜಗತ್ತಿನ ಯಾವ ದೇಶವೂ ಇದನ್ನು ನಿಯಂತ್ರಿಸಲು ಅಗತ್ಯವಾದಷ್ಟು ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ.

ಈ ಕಾದಂಬರಿಗಳು ತೋರಿಸಿರುವಂತೆ, ಸಾಂಕ್ರಾಮಿಕಗಳ ಸಮಯದಲ್ಲಿ ನಮ್ಮ ವರ್ತನೆಗಳು ಶತಮಾನಗಳು ಕಳೆದರೂ ಬದಲಾಗದೇ ಉಳಿದಿವೆ. ಇಬ್ಬರೂ ಕಾದಂಬರಿಕಾರರು ವರ್ಣಿಸುವಂತೆ, ಕೋವಿಡ್ ಬಿಕ್ಕಟ್ಟು ನಮ್ಮ ಮೇಲೆ ಎರಗಿದಾಗ ನಾವು ಪ್ರಕಟಪಡಿಸಿದ್ದು ನಮ್ಮ ಉಡಾಫೆತನ ಮತ್ತು ಬುದ್ಧಿ ಹೇಳುವವರ ಮಾತಿನಲ್ಲಿ ಅಪನಂಬಿಕೆ. ಪರಿಸ್ಥಿತಿ ಕೈಮೀರಿ ಸರ್ಕಾರವು ಲಾಕ್‌ಡೌನ್ ಹೇರಿದಾಗ ಸತತ ಕ್ವಾರಂಟೈನ್ ಅನುಭವಿಸಬೇಕಾಗಿ ಬಂತು.

ಜಗತ್ತು ಎದುರಿಸುತ್ತಿರುವ ಕೋವಿಡ್ ಬಿಕ್ಕಟ್ಟಿಗೆ ಇಸ್ರೇಲಿನ ಇತಿಹಾಸಕಾರ ಯುವಲ್ ನೋವಾ ಹರಾರಿ ಅವರು 'ರೀಡರ್ಸ್ ಡೈಜೆಸ್ಟ್'ನ 2000ದ ಮೇ-ಜೂನ್ ಸಂಚಿಕೆಯಲ್ಲಿ ತಮ್ಮ ಲೇಖನದ ಮೂಲಕ ಪರಿಹಾರವನ್ನು ಸೂಚಿಸಿದ್ದಾರೆ.

ಹಿಂದೆಲ್ಲ ಸಾಂಕ್ರಾಮಿಕಗಳು ತಲೆದೋರಿದಾಗ ಜನರ ವರ್ತನೆಗೆ ವಿಜ್ಞಾನದ ಕೊರತೆ ಅಥವಾ ಆಸ್ಪತ್ರೆಗಳ ಮೂಲ ಸೌಕರ್ಯಗಳಲ್ಲಿನ ನ್ಯೂನತೆ ಕಾರಣವಾಗಿರಬಹುದು ಮತ್ತು ಸೋಂಕು ಹರಡುವುದರ ಬಗ್ಗೆ ನೀಡಬೇಕಿರುವ ಸೂಚನೆಗಳನ್ನು ಜನರಿಗೆ ತಲುಪಿಸುವುದು ಸುಲಭವಾಗದೇ ಇದ್ದಿರಬಹುದು. ಆದರೆ ಒಂದು ವೈರಸ್ಸನ್ನು ನಾವು ಎದುರಿಸಲು ಸಾಧ್ಯವಾಗುವುದು ನಮ್ಮ ನಮ್ಮಲ್ಲಿ ಅಪನಂಬಿಕೆಯ ಕಾರಣದಿಂದ ಅಂತರವನ್ನು ಹೆಚ್ಚಿಸಿಕೊಳ್ಳುವುದರಿಂದ ಅಲ್ಲ, ಬದಲಾಗಿ ನಮ್ಮ ಮತ್ತು ವೈರಸ್ ಪ್ರಪಂಚದ ನಡುವೆ ಅಂತರ ಕಾಯ್ದುಕೊಳ್ಳುವ ಮೂಲಕ ಎಂದು ಹರಾರಿ ಅಭಿಪ್ರಾಯಪಡುತ್ತಾರೆ.

ಮನುಕುಲದಲ್ಲಿ ನಮ್ಮ ನಮ್ಮ ನಡುವೆ ಅಪನಂಬಿಕೆ ಇದ್ದರೆ ಅದು ವೈರಸ್ಸಿನ ವಿಜಯವಾಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ನಾವೆಲ್ಲ ಪ್ರತ್ಯೇಕೀಕರಣ, ಹೊರ ದೇಶಗಳ ಜನರ ಬಗ್ಗೆ ಹಗೆತನ ಮತ್ತು ಅಪನಂಬಿಕೆಗಳಿಂದ ಬಳಲುತ್ತಿದ್ದೇವೆ. ಇದರ ಬದಲಾಗಿ ವೈದ್ಯರು, ಸರ್ಕಾರಗಳು ಮತ್ತು ವಿಜ್ಞಾನಿಗಳು ಹೇಳಿದಂತೆ ಕೇಳಿ, ಪರಸ್ಪರ ದೈಹಿಕ ಅಂತರವನ್ನು ಕಾಯ್ದುಕೊಂಡರೂ ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ಒಬ್ಬರಿಂದ ಒಬ್ಬರು ದೂರವಾಗದೇ ಇರೋಣ ಎನ್ನುವ ಹರಾರಿ ಅವರ ಆಶಯವನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ನಮ್ಮದಾಗಿದೆ.



ಚುರುಮುರಿ



ಗೈಡ್‌ಲೈನ್ಸ್ (ಕಡೆ)ಗಣನೆ!

• ಎಸ್.ಬಿ.ರಂಗನಾಥ್

ಹೊರಗಿನಿಂದ ಬಂದ ನನ್ನನ್ನು ನೋಡುತ್ತಿದ್ದಂತೆ, ಸರ್ವಾಲಂಕಾರಭೂಷಿತೆಯಾಗಿದ್ದ ಮಡದಿ ಧುಮುಗುಟ್ಟುತ್ತಾ 'ಇದ್ಯಾಕ್ರೀ ಕುಂಟ್ತಿದೀರಾ' ಎಂದಳು.

'ಹಾಲಿನ ಅಂಗ್ಡಿಗೆ ಹೋಗೋವಾಗ ಮಾಸ್ಕ್ ಮರೆತಿದ್ದೆ. ಪೊಲೀಸ್ ಬಂದಾಂತ ಹೆದರಿ ಓಡೋವಾಗ ಬಿದ್ಬಿಟ್ಟೆ. ಆಮೇಲೆ ನೋಡಿದ್ರೆ ಅವ್ನು ಪೊಲೀಸಲ್ಲ, ಯೂನಿಫಾರಮ್‌ನಲ್ಲಿದ್ದ ಮಾಲ್‌ನ ಸೆಕ್ಯೂರಿಟಿ ಗಾರ್ಡ್!' ಎಂದೆ.

'ಲಾಕ್‌ಡೌನು, ಕರ್ಫ್ಯೂ ಶುರುವಾಗಿದೆ, ದಂಡ ಹಾಕ್ತಾರೆ, ತಪರಾಕಿ ಬೀಳ್ತಾವೆ ಅನ್ನೋ ಪ್ರಜ್ಞೆ ಬೇಡ್ವೆ? ಅಷ್ಟೊಂದು ಗೈಡ್‌ಲೈನ್ಸ್ ಕೊಟ್ಟಿದಾರೆ. ನಿಮ್ಮಂಥೋರಿಗೆ ಹಂಗೇ ಆಗ್ಬೇಕು, ಪೊಲೀಸೂ ಗಾರ್ಡೂ ಗೊತ್ತಾಗ್ದಂತ ಬುದ್ದೂಗಳು!'

'ಅವಸರದಲ್ಲಿ ಕನ್ನಡಕಾನೂ ಬಿಟ್ಹೋಗಿದ್ದೆ... ಅದ್ಸರಿ ನೀನು ಫ್ರೆಂಡ್ ಮಗಳ ಮದುವೆ ಮುಹೂರ್ತಕ್ಕೇಂತ ಬೆಳಿಗ್ಗೇನೇ ಹೋಗಿದ್ಯಲ್ಲ...?'

'ಹೋಗಿದ್ದೆರೀ. ಕಲ್ಯಾಣ ಮಂಟಪದಲ್ಲಿ ಪೊಲೀಸ್ರು, ರೆವಿನ್ಯೂ ಅಧಿಕಾರಿಗಳು ಸಂಖ್ಯಾಮಿತಿ ಮೀರಿದೇಂತ ಫೈನ್ ಹಾಕ್ತಿದ್ರು. ಅದಕ್ಕಿಂತ ಹೆಚ್ಚಿಗೆ ಜನ ಆದ್ರು ಅಂತ ನನ್ನನ್ನ ವಾಪಸ್ ಕಳಿಸಿದ್ರು... ಹೀಗಿದ್ದಾಗ ಆಕೆ ಮನೆಗೆ ಬಂದು ಇನ್ವಿಟೇಷನ್ ಯಾಕೆ ಕೊಡ್ಬೇಕಿತ್ತು? ಅವ್ಳು ಕೈಗೆ ಸಿಗ್ಲಿ...'

'ಆಗಿನ್ನೂ ಈ ನಿರ್ಬಂಧ ಬಂದಿರ್ಲಿಲ್ಲ. ಗೈಡ್‌ಲೈನ್ಸ್‌ನಲ್ಲಿ ಮದುವೆ ಪ್ರವೇಶ ಮಿತೀನೂ ಸೇರಿರೋದನ್ನ ನೀನು ಗಮನಿಸಲಿಲ್ಲ ಅನ್ಸುತ್ತೆ'.

'ಹಾಗಿದ್ರೆ, ಆಕೆ ನಿನ್ನೇನಾದ್ರೂ ಹೇಳ್ಬೇಕಿತ್ತಲ್ವೇ?'

'ಪೇಪರ್‌ಗೆ ಹಾಕ್ಸಿರ್ತಾರೆ'.

ಅಷ್ಟರಲ್ಲಿ ಬಂದ ನಮ್ಮ ಮಗ ಹೈಸ್ಕೂಲ್ ವಿದ್ಯಾರ್ಥಿ, ಲೋಕಲ್ ಪತ್ರಿಕೆ ತೋರಿಸಿದಾಗ ನಮ್ಮಾಕೆ ಸುಸ್ತು!

ನಾನು, 'ಥೂ, ಎಲ್ಲಾ ಈ ಕೋವಿಡ್ ಮಾರಿಯ ಹಾವಳಿ' ಎಂದೆ.

ಮಗ, 'ಅಪ್ಪಾ, ಇದ್ರಿಂದ ಕೆಲವ್ರಿಗೆ ಒಳ್ಳೇದಾಗಿದೆಯಲ್ಲಾ!' ಎಂದ.

ಅವನಮ್ಮ 'ಯಾರಿಗೋ?' ಎಂದು ಕಣ್ಣು ಕೆಂಪಗೆ ಮಾಡಿದಳು.

'ನಂಗೆ ಮೊಬೈಲ್ ಕೊಡಿಸಿದ್ರಿ. ಪರೀಕ್ಷೆ ಬರೀದೇನೆ ನಾನು ಪಾಸಾಗಿದೀನಿ... ವರ್ಷವಿಡೀ ರಜಾ ಮಜಾ...!'

ನನ್ನಾಕೆ ಮಗನತ್ತ ಎಸೆದ ವ್ಯಾನಿಟಿ ಬ್ಯಾಗ್‌ಗೆ, ಅವನಿಗೆ ರಕ್ಷಣೆ ನೀಡಿದ ನನ್ನ ಎದೆ ಗುರಾಣಿಯಾಯಿತು!

ಸಂಗತ

ಕೊರೊನಾ ಬಲೆಯಲ್ಲಿ ಕಲೆ

ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮೀಸಲಾದ ಹಣವನ್ನು ಕಲಾವಿದರ ಆರೋಗ್ಯಕ್ಕೆ, ಅವರ ದೈನಂದಿನ ಜೀವನಕ್ಕೆ ವಿನಿಯೋಗಿಸಬೇಕಾದ ಹೊತ್ತು ಇದು

• ಡಾ. ಕೆ.ಎಸ್.ಪವಿತ್ರ

ಏಪ್ರಿಲ್ 29, ವಿಶ್ವ ನೃತ್ಯ ದಿನ. ಸತತವಾಗಿ ಎರಡು ವರ್ಷಗಳ ಕಾಲ ನೃತ್ಯದಿನದ ಸಂಭ್ರಮ ಇಲ್ಲವಾಗಿದೆ. ನೃತ್ಯ-ಸಂಗೀತ ಕಾರ್ಯಕ್ರಮಗಳು ನಿಂತಿರುವುದಕ್ಕೆ, ರಂಜನೆ ಇಲ್ಲದಿರುವುದಕ್ಕೆ ಕಲಾವಿದರು-ಜನ ಬೇಸರಿಸುತ್ತಿದ್ದಾರೆ ಎನ್ನುವುದನ್ನು ಸಂಕಟ-ನೋವು-ಜೀವನ್ಮರಣಗಳ ಈ ಹೊತ್ತಿನಲ್ಲಿ ನಾವು ಬದಿಗಿರಿಸಿ ಬಿಡಬಹುದು. ಆದರೆ ಕಲಾಕ್ಷೇತ್ರದ ಮುಂದುವರಿಕೆಯ ಪ್ರಶ್ನೆ ಅದಕ್ಕಿಂತ ಬಹು ಸಂಕೀರ್ಣವಾದದ್ದು.

ಸಾಂಸ್ಕೃತಿಕ ಕ್ಷೇತ್ರವು ಜಗತ್ತಿನಾದ್ಯಂತ ಕೋಟ್ಯಂತರ ಜನರಿಗೆ ಅನ್ನ ನೀಡುತ್ತದೆ. ಚಲನಚಿತ್ರ ಕ್ಷೇತ್ರವೊಂದರಲ್ಲಿಯೇ ಒಂದು ಕೋಟಿ ಜನ ಉದ್ಯೋಗಗಳನ್ನು ಕಳೆದುಕೊಂಡಿದ್ದಾರೆ. ಯುನೆಸ್ಕೊ ವರದಿಯ ಪ್ರಕಾರ, ಜಗತ್ತಿನ ಮೂರನೇ ಒಂದರಷ್ಟು ಆರ್ಟ್ ಗ್ಯಾಲರಿಗಳು ತಮ್ಮ ಸಿಬ್ಬಂದಿಯಲ್ಲಿ ಅರ್ಧಕ್ಕಿಂತ ಹೆಚ್ಚು ಜನರನ್ನು ಕೆಲಸದಿಂದ ತೆಗೆದುಹಾಕಿವೆ. 6 ತಿಂಗಳುಗಳ ಮುಚ್ಚುವಿಕೆಯಿಂದ ಕಲಾ ಉದ್ಯಮವು ಸಾವಿರ ಕೋಟಿ ಡಾಲರ್‌ಗಳ ಪ್ರಾಯೋಜಕತ್ವ ಕಳೆದುಕೊಂಡಿದೆ. ಪ್ರಕಟಣಾ ಉದ್ಯಮ ಶೇ 7.5ರಷ್ಟು ಕುಸಿದಿದೆ.

ಪ್ರಸ್ತುತ ಬಿಕ್ಕಟ್ಟಿನಿಂದ 'ದೀರ್ಘಕಾಲಿಕ' ಎನ್ನುವಂತಹ ಪರಿಣಾಮಗಳನ್ನು ಸಾಂಸ್ಕೃತಿಕ ಕ್ಷೇತ್ರ ಹೊಂದಲಿದೆ. ಅದರಲ್ಲಿಯೂ ಕೊರೊನಾ ಸೋಂಕು ತಡೆಗಟ್ಟುವ ಕೌಶಲವಾದ ಅಂತರ ಕಾಯ್ದುಕೊಳ್ಳುವಿಕೆಯು ಸಿನಿಮಾ ಹಾಲ್- ಪ್ರದರ್ಶನಗಳು- ಸಭಾಂಗಣ- ಮ್ಯೂಸಿಯಂಗಳನ್ನು ಕಳವಳಕ್ಕೆ ಈಡು ಮಾಡಿದೆ.

ಜನ ಸಾಯುತ್ತಿದ್ದಾರೆ, ಕಲೆಯ ಬಗ್ಗೆ, ಮನರಂಜನೆಯ ಬಗ್ಗೆ ಚರ್ಚಿಸಲು ಇದು ಸಮಯವೇ ಎಂದು ಯಾರಾದರೂ ಕೇಳಬಹುದು. ಆದರೆ ಕಲೆಯ-ಮನರಂಜನೆಯ ಮತ್ತೊಂದು ಆಯಾಮದ ಬಗೆಗೆ ನಾವು ಗಮನ ಹರಿಸಬೇಕಾದ ಸಂದರ್ಭವೂ ಇದಾಗಿದೆ.

ಕೋವಿಡ್‌ನಿಂದ ಉಂಟಾದ ಪರಿಸ್ಥಿತಿಯ 'ಥೀಮ್'ಗಳ ಚಿತ್ರಕಲಾ ಪ್ರದರ್ಶನ ಅಲ್ಲಲ್ಲಿ ನಡೆದಿದೆ. ಲಾಕ್‌ಡೌನ್‌ನ ಸಮಯದಲ್ಲಿ ತಮ್ಮ ಅಧ್ಯಯನವನ್ನು ಗಂಭೀರವಾಗಿ ನಡೆಸಿ, ಕಲಾಲೋಕಕ್ಕೆ ಮತ್ತಷ್ಟನ್ನು ಕೊಟ್ಟ ಕಲಾವಿದರಿದ್ದಾರೆ. ಕಲೆಯ ಹೊಸ ಡಿಜಿಟಲ್ ರೂಪಗಳು ಆಕೃತಿ ಪಡೆದುಕೊಳ್ಳತೊಡಗಿವೆ. 'ಕೊರೊನಾ ನಂತರದ ಕಲೆಯ ಯುಗ' ಎಂಬ ಹೊಸ ಹಂತವನ್ನೇ ನಾವು ಮುಂದೆ ಚರಿತ್ರೆಯಲ್ಲಿ ಗುರುತಿಸಬೇಕಾಗಿ ಬರಬಹುದು.

ಕಲಾವಿದರ ಸ್ಥಿತಿ ಭಾರತದಲ್ಲಿ ಈ ಮೊದಲಿನಿಂದಲೂ ಆರ್ಥಿಕವಾಗಿ 'ಸಬಲ' ಎನ್ನುವಂತೆ ಇರಲಿಲ್ಲವಷ್ಟೆ. ನಾವು 'ಕಲೆ ಬೆಲೆ ಕಟ್ಟಲಾಗದ್ದು' ಎಂಬ ಮಾತನ್ನು ಹೇಳುತ್ತಲೇ, ಕಲೆಗೆ ತಕ್ಕುದಾದ ಬೆಲೆ ನೀಡಲು ಹಿಂಜರಿಯುವವರು. ಸರ್ಕಾರದ ಅನುದಾನ-ಧನಸಹಾಯಗಳು ಕಾಲಕ್ಕೆ ಸರಿಯಾಗಿ ಬರುವುದು ಕೋವಿಡ್ ಪೂರ್ವದಲ್ಲಿಯೂ ಕಡಿಮೆಯೇ ಇತ್ತು. ಅಂದಮೇಲೆ ಈಗ ಹೇಗೆ ಅವು ಕಲಾವಿದರಿಗೆ ಸರಿಯಾದ ಸಮಯಕ್ಕೆ ತಲುಪಿಯಾವು? ಅದೂ ಕಾರ್ಯಕ್ರಮಗಳೇ ನಡೆಯದಿದ್ದಾಗ!

'ಆನ್‌ಲೈನ್ ಕಾರ್ಯಕ್ರಮಗಳಿಗೇಕೆ ದುಡ್ಡು ಕೊಡಬೇಕು' ಎಂಬ ತಾತ್ಸಾರ ಸಾಮಾನ್ಯ. ಒಬ್ಬರು ಹಿರಿಯ ಕಲಾವಿದರು ಹೇಳಿದಂತೆ, 'ಈ ಬಾರಿ ಲಾಕ್‌ಡೌನ್ ಇನ್ನೂ ಮುಂದುವರಿದರೆ, ನಾವು ಕೋವಿಡ್‌ನಿಂದ ಸಾಯುವುದಿಲ್ಲ, ಆದರೆ ಹಸಿವೆಯಿಂದ ಸಾಯುತ್ತೇವೆ'. ಡಿಜಿಟಲ್ ಮೀಡಿಯಾದಲ್ಲಿ ಈ ಹಿಂದೆ ಕಲೆ ಇರಲಿಲ್ಲವೆಂದಲ್ಲ, ಆದರೆ ಆರ್ಥಿಕ ಲಾಭ ಬೇಕೆಂದರೆ 'ಜೀವಂತ ಅನುಭವ'ಗಳನ್ನು ಕಲಾವಿದ ಸೃಷ್ಟಿಸಲೇಬೇಕಿತ್ತು. ಹಾಗಾಗಿ ಸಂಗೀತ-ನೃತ್ಯ ಕಲಾವಿದರು ಪ್ರವಾಸ ಮಾಡುತ್ತಿದ್ದರು, ವಿದೇಶಗಳಲ್ಲಿ ಕಾರ್ಯಕ್ರಮ, ಎಲ್ಲ ರೀತಿಯ ಉತ್ಸವಗಳು, ಕಲಾ ಜಾತ್ರೆಗಳು; ಈಗ ಇವ್ಯಾವುವೂ ಇಲ್ಲ. ನೇರ, ವ್ಯಕ್ತಿಗತ ಎಲ್ಲವೂ 'ಲೈವ್ ಆನ್‌ಲೈನ್' ಆಗಿಬಿಟ್ಟಿವೆ.



ಕಲಾಕ್ಷೇತ್ರ ಹೀಗೆ ಗೊಂದಲದಲ್ಲಿ, ಅನಿಶ್ಚಿತತೆಯಲ್ಲಿ ಬದುಕುತ್ತಿರಬೇಕಾದರೆ, ಗಾಯದ ಮೇಲೆ ಉಪ್ಪು ಸವರಿದಂತೆ ಹಲವು ಕಲಾವಿದರು ಕೋವಿಡ್‌ಗೆ ಬಲಿಯಾಗಿದ್ದಾರೆ. ಮತ್ತೆ ಕೆಲವರು ಬೇರೆ ಬೇರೆ ಕಾಯಿಲೆಗಳಿಂದ ಅಕಾಲಿಕ ಮರಣಕ್ಕೀಡಾಗಿದ್ದಾರೆ. ಇವೆಲ್ಲವೂ ಕಲಾಕ್ಷೇತ್ರದ ಮಾನಸಿಕ ಸ್ಥೈರ್ಯ ಕುಸಿಯುವಂತೆ ಮಾಡಿವೆ. ಹೊಸ ಹೊಸ ಡಿಜಿಟಲ್ ವಿಧಾನಗಳು ಪ್ರದರ್ಶನದ ತುಡಿತವನ್ನು ಸಮಾಧಾನಪಡಿಸಬಹುದೇ ಹೊರತು, ಆರ್ಥಿಕವಾಗಿ ಪ್ರಯೋಜನ ತರುವ ಸಾಧ್ಯತೆಯಿಲ್ಲ. ಹಾಗಾಗಿ ಈಗ ಕಾಯಿಲೆಯಾದರೆ ಚಿಕಿತ್ಸೆ ಪಡೆಯಲು ಕೂಡ ಬಹಳಷ್ಟು ಕಲಾವಿದರ ಬಳಿ ದುಡ್ಡಿಲ್ಲ.

ಕಲಾವಿದರು- ಸಿನಿಮಾ, ನೃತ್ಯ, ಸಂಗೀತ, ನಾಟಕ ಯಾವುದೇ ಪ್ರಕಾರಕ್ಕೆ ಸೇರಿರಲಿ, ಅವರದ್ದು 'ಸೃಷ್ಟಿಸುವ' ಕೆಲಸ. ಸೃಜನಶೀಲತೆಗೆ ಬೇಕಾದದ್ದು ಮಾನಸಿಕ ಸ್ವಾಸ್ಥ್ಯ. ಅಕಾಡೆಮಿಗಳು, ಸಂಬಂಧಿಸಿದ ಇಲಾಖೆಗಳು, ಕಾರ್ಯಕ್ರಮ ಆಯೋಜಿಸುವ ಸಂಘ ಸಂಸ್ಥೆಗಳು ಕಾರ್ಯಕ್ರಮಗಳಿಗೆ ಮೀಸಲಾದ ಹಣವನ್ನು ಕಲಾವಿದರ ಆರೋಗ್ಯಕ್ಕೆ, ಅವರ ದೈನಂದಿನ ಜೀವನಕ್ಕೆ ವಿನಿಯೋಗಿಸಬೇಕಾದ ಹೊತ್ತು ಇದು. ಇಲ್ಲಿಯವರೆಗೆ ಸಮಾಜದ ಮನಸ್ಸುಗಳನ್ನು ರಂಜಿಸುತ್ತ ಬಂದಿರುವ ವಿವಿಧ ವರ್ಗದ ಕಲಾವಿದರನ್ನು, ಅವರ ಸೃಜನಶೀಲತೆಯನ್ನು ಸಮಾಜ ಇಂದು ಕಾಪಾಡಿಕೊಳ್ಳಬೇಕಾಗಿದೆ.

ಕಲಾಕ್ಷೇತ್ರಕ್ಕೆ ಕೋವಿಡ್ ಕಲಿಸಿರುವ ಜೀವನ ಪಾಠಗಳು ಬಹಳಷ್ಟು. ಮೂಲಭೂತವಾದ ಆರೋಗ್ಯಕ್ಕೇ ಆದ್ಯತೆ. ಕೆಲವೊಮ್ಮೆ ವಾಸ್ತವ ಕಟುವಾಗಿರುತ್ತದೆ, ಮುಂದಿನ ಹಾದಿ ಸ್ಪಷ್ಟವಾಗದಿರಬಹುದು. ಆಗ ನಮ್ಮ ಮುಂದೆ ಇರುವ ಪರಿಹಾರವೆಂದರೆ, ಹಲ್ಲು ಕಚ್ಚಿ ಸುಮ್ಮನಿದ್ದು, ಸಹಿಸಿ, ಆ ಅವಧಿಯನ್ನು ಹಾದು ಮುಗಿಸುವುದಷ್ಟೆ. ಕಲೆಯ ಅಗಾಧ ಶಕ್ತಿಯೇ ಅಂತಹ ಸಹನಶೀಲತೆಯನ್ನು ನಮಗೆ ತಂದುಕೊಡಬೇಕಾಗಿದೆ.

ವಾಚಕರ ವಾಣಿ

ಸೋಂಕಿತರ ಗುರುತು ಸಿಗುವಂತಾಗಲಿ

ಕೋವಿಡ್– 19 ಮೊದಲ ಅಲೆಯ ಸಂದರ್ಭದಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು (ಬಿಬಿಎಂಪಿ) ಸೋಂಕಿತ ವ್ಯಕ್ತಿಯ ಕೈಗೆ ಸೀಲ್ ಹಾಕುವ, ಮನೆಯ ಗೋಡೆಯ ಮೇಲೆ ಸೂಚನಾ ಫಲಕ ಅಂಟಿಸುವ ಮೂಲಕ ಅಕ್ಕಪಕ್ಕದವರು ಮುನ್ನೆಚ್ಚರಿಕೆ ವಹಿಸುವಂತೆ ಮಾಡಿತ್ತು. ಆದರೆ, ಈ ಸಲ ಅಕ್ಕಪಕ್ಕದ ಬೀದಿಯಲ್ಲಿ ಹೋಗಲಿ, ನಮ್ಮ ಮನೆಯ ಸುತ್ತಮುತ್ತ ಕೋವಿಡ್ ಪೀಡಿತರು ಇದ್ದರೂ ನಮಗೆ ಗೊತ್ತಾಗುತ್ತಿಲ್ಲ. ಇದು ನೆರೆಹೊರೆಯಲ್ಲಿ ಸೋಂಕು ಹರಡುವಿಕೆಗೆ ಕಾರಣವಾಗುತ್ತಿದೆ. ಇದನ್ನು ತಡೆಯಲು ಸರ್ಕಾರ ಗಮನಹರಿಸಲಿ. ಯಾವುದೇ ಸಣ್ಣ ನಿರ್ಲಕ್ಷ್ಯಕ್ಕಾಗಿ ಮುಂದೆ ನಾವು ದೊಡ್ಡ ಬೆಲೆ ತೆರಬೇಕಾಗಿ ಬರಬಹುದು.

ವೀಣಾ ಸುಬ್ರಹ್ಮಣ್ಯ, ಬೆಂಗಳೂರು

ಆಸ್ತಿ ತೆರಿಗೆ ಪಾವತಿ ಅವಧಿ ವಿಸ್ತರಿಸಿ

ಕೊರೊನಾ ಸೋಂಕಿನ ಹಾವಳಿಯಿಂದ ವರ್ತಕರು ಬಳಲಿ ಬೆಂಡಾಗಿದ್ದಾರೆ. ಲಾಕ್‌ಡೌನ್ ಅವಧಿಯ ನಷ್ಟವನ್ನು ಸರಿದೂಗಿಸಲಾಗುತ್ತಿಲ್ಲ. ಪುರಸಭೆ ಹಾಗೂ ಪಾಲಿಕೆಗಳಿಗೆ ವಾರ್ಷಿಕ ಆಸ್ತಿ ತೆರಿಗೆ ಸಂದಾಯ ಮಾಡಲು ಇದೇ 30 ಕೊನೆಯ ದಿನ. ಅಷ್ಟರಲ್ಲಿ ಪಾವತಿಸಿದರೆ ಶೇ 5ರಷ್ಟು ವಿನಾಯಿತಿ ಸಿಗುತ್ತದೆ. ಮೇ 1ರ ನಂತರ ಪಾವತಿಸಿದರೆ ದಂಡ ಬೀಳಲಿದೆ. ಸರ್ಕಾರ ಶೇ 5ರ ವಿನಾಯಿತಿ ಅವಧಿಯನ್ನು ಕನಿಷ್ಠ ಮೂರು ತಿಂಗಳ ಕಾಲ ವಿಸ್ತರಿಸಿ ಜನಸಾಮಾನ್ಯರ ಕಷ್ಟಕ್ಕೆ ಸ್ಪಂದಿಸಬೇಕು.

ಕೆ.ಶ್ರೀನಿವಾಸ ರಾವ್, ಹರಪನಹಳ್ಳಿ

ಕಹಿ ಸತ್ಯ

ಸದಾ ಗಿಜಿಗುಡುವ ರಸ್ತೆಯಲ್ಲಿ
ಈಗ ಸ್ಮಶಾನಮೌನ
ಆದರೆ...
ಯಾವಾಗಲೂ ಶಾಂತವಾಗಿ
ಇರುತ್ತಿದ್ದ
ಸ್ಮಶಾನದಲ್ಲಿ
ಗಿಜಿಗಿಜಿ...!

ವಿ.ವಿಜಯೇಂದ್ರ ರಾವ್, ಬೆಂಗಳೂರು

ಗಾಬರಿ ಹುಟ್ಟಿಸುತ್ತಿದೆ ಆಸ್ಪತ್ರೆ ವೆಚ್ಚ

ಜನರು ಕೊರೊನಾ ಪಾಸಿಟಿವ್‌ಗಿಂತ ಹೆಚ್ಚಾಗಿ ಆಸ್ಪತ್ರೆಯ ವೆಚ್ಚದ ಬಗ್ಗೆ ಗಾಬರಿಗೊಳ್ಳುತ್ತಿದ್ದಾರೆ. ಈ ಸಂದರ್ಭದಲ್ಲಿ ಆಸ್ಪತ್ರೆಗಳ ಮಾಲೀಕರು ಮುಂದೆ ಬಂದು, ರೋಗಿಗೆ ತಗಲುವ ಔಷಧದ ವೆಚ್ಚವನ್ನು ಮಾತ್ರ ಸರ್ಕಾರದಿಂದ ಪಡೆದುಕೊಂಡು ಉತ್ತಮ ಚಿಕಿತ್ಸೆ ಕೊಟ್ಟರೆ, ಸಾಮಾಜಿಕ ಬದ್ಧತೆ ಹಾಗೂ ಕಾಳಜಿಯನ್ನು ತೋರಿದಂತಾಗುತ್ತದೆ, ಮಾನವೀಯತೆಯನ್ನು ಎತ್ತಿ ಹಿಡಿದಂತೆಯೂ ಆಗುತ್ತದೆ.

ಕೋವಿಡ್ ನಿಯಂತ್ರಣದಲ್ಲಿ ಸರ್ಕಾರದ ಜೊತೆಗೆ ನಾಗರಿಕರಾದ ನಾವು ಕೂಡ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ. ಸಾರ್ವಜನಿಕ ಸ್ಥಳದಲ್ಲಿ ಮಾಸ್ಕ್ ಹಾಕದೆ ಓಡಾಡುವ ಜನರಿಗೆ ಛೀಮಾರಿ ಹಾಕಿ, ಸಾರ್ವಜನಿಕರ ಆರೋಗ್ಯ ರಕ್ಷಣೆ ಮಾಡುವ ಕೆಲಸಕ್ಕೆ ಮುಂದಾಗಬೇಕಾಗಿದೆ.

ಡಾ. ಎನ್.ಸತೀಶ್ ಗೌಡ, ಬೆಂಗಳೂರು

ಲಸಿಕೆ ನೀಡಿಕೆ: ಹಿರಿಯರಿಗಿರಲಿ ಆದ್ಯತೆ

18 ವರ್ಷ ಮೇಲ್ಪಟ್ಟವರೆಲ್ಲರಿಗೂ ಮೇ 1ರಿಂದ ಉಚಿತ ಲಸಿಕೆ ನೀಡಲು ಸರ್ಕಾರ ನಿರ್ಧರಿಸಿರುವುದು ಸ್ವಾಗತಾರ್ಹ. ಆದರೆ ಈಗಾಗಲೇ ಒಂದು ವ್ಯಾಕ್ಸಿನ್ ತೆಗೆದುಕೊಂಡಿರುವ ಹಿರಿಯ ನಾಗರಿಕರು ಮೇ 1ರ ನಂತರ ಎರಡನೇ ಚುಚ್ಚುಮದ್ದು ತೆಗೆದುಕೊಳ್ಳಲು ದೀರ್ಘಾವಧಿ ಕಾಯಬೇಕಾಗುತ್ತದೆ. ಅಲ್ಲದೆ ಇನ್ನು ಕೆಲವು ಹಿರಿಯ ನಾಗರಿಕರು ಮೊದಲನೇ ಚುಚ್ಚುಮದ್ದನ್ನು ಇನ್ನೂ ತೆಗೆದುಕೊಂಡಿಲ್ಲ. ಈ ದೃಷ್ಟಿಯಿಂದ ಮೇ 1ರ ನಂತರ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಿರಿಯ ನಾಗರಿಕರಿಗೆ ಪ್ರತ್ಯೇಕ ಸರದಿಯಲ್ಲಿ ನಿಂತು ಲಸಿಕೆ ಪಡೆಯಲು ಅವಕಾಶ ಮಾಡಿಕೊಡಬೇಕು. ಇಲ್ಲವಾದರೆ ಬೆಳಿಗ್ಗೆ 60 ವರ್ಷದ ಒಳಗಿನವರಿಗೆ, ಮಧ್ಯಾಹ್ನ ಹಿರಿಯ ನಾಗರಿಕರಿಗೆ ಚುಚ್ಚುಮದ್ದು ನೀಡುವ ವ್ಯವಸ್ಥೆ ಮಾಡಿದರೆ ತುಂಬಾ ಉಪಕಾರವಾಗುತ್ತದೆ.

ಡಾ. ಬಿ.ಗೋಪಾಲ್ ಸಿಂಗ್, ಮೈಸೂರು

ಹೇಳಿಕೆ ಓದಿಕೊಳ್ಳದಿರಲು ದೃಷ್ಟಿಹೀನತೆ ಕಾರಣ?

ಜಿಂದಾಲ್ ಸ್ಟೀಲ್ ವೆಸ್ಟರ್ನ್‌ಗೆ (ಜೆಎಸ್‌ಡಬ್ಲ್ಯು) ಸರ್ಕಾರದ ಜಮೀನು ಪರಭಾರೆಗೆ ಸಂಬಂಧಿಸಿದಂತೆ ಸಚಿವ ಆನಂದ ಸಿಂಗ್ ಮೌನವಾಗಿರುವ ಕುರಿತ ವರದಿ (ಪ್ರ.ವಾ., ಏ. 28) ನೋಡಿ, ಅವರಿಗೆ ಸಂಬಂಧಿಸಿದ ಪ್ರಕರಣವೊಂದು ನಮಗೆ ನೆನಪಾಯಿತು. 2019ರಲ್ಲಿ ಜೆಡಿಎಸ್- ಕಾಂಗ್ರೆಸ್ ಸಮ್ಮಿಶ್ರ ಸರ್ಕಾರವು ಜಿಂದಾಲ್ ಸ್ಟೀಲ್ ಕಂಪನಿಗೆ ಹೊಸಪೇಟೆ ತಾಲ್ಲೂಕಿನಲ್ಲಿ 3,667 ಎಕರೆ ಜಮೀನು ಪರಭಾರೆಗೆ ಮುಂದಾಗಿದ್ದಾಗ, ಕಾಂಗ್ರೆಸ್ ಪಕ್ಷದ ಶಾಸಕರಾಗಿದ್ದ ಆನಂದ ಸಿಂಗ್ ಈ ವಿಚಾರವನ್ನು ತೀಕ್ಷ್ಣವಾಗಿ ವಿರೋಧಿಸಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಕ್ಷೇತ್ರದ ಜನರಿಗೆ ಪೂಜನೀಯರಾದರು. ಅದೇ ಜಮೀನನ್ನು ಪ್ರಸ್ತುತ ಸರ್ಕಾರ ಪರಭಾರೆ ಮಾಡುತ್ತಿರುವ ವಿಚಾರದಲ್ಲಿ ಅವರ ತತ್‌ಕ್ಷಣದ ವಿರೋಧ ವ್ಯಕ್ತವಾಗಿಲ್ಲದಿರುವುದರ ಹಿಂದೆ, ಅವರ ಹಿಂದಿನ ಹೇಳಿಕೆಗಳನ್ನು ಓದಿಕೊಳ್ಳಲು ಶಾಸಕ ಗಣೇಶ್ ಉಂಟುಮಾಡಿದ ದೃಷ್ಟಿಹೀನತೆಯೇ ಕಾರಣವಿರಬೇಕು.

2019ರ ಜನವರಿ ತಿಂಗಳಲ್ಲಿ ಬಿಜೆಪಿಯವರ 'ಆಪರೇಷನ್ ಕಮಲ'ದಿಂದ ಕಾಂಗ್ರೆಸ್ ಶಾಸಕರನ್ನು ದೂರವಿರಿಸಲು ಡಿ.ಕೆ.ಶಿವಕುಮಾರ್ ಮುಂದಾಳತ್ವದಲ್ಲಿ, ಬಿಡದಿಯ ಸಮೀಪ ಇರುವ ಈಗಲ್‌ಟನ್ ರೆಸಾರ್ಟ್‌ನಲ್ಲಿ ಇರಿಸಲಾಗಿತ್ತು. ಅದೊಂದು ರಾತ್ರಿ ಕಂಪ್ಲಿ ಶಾಸಕ ಗಣೇಶ್ ಮತ್ತು ಹೊಸಪೇಟೆ ಕಾಂಗ್ರೆಸ್ ಶಾಸಕರಾಗಿದ್ದ ಆನಂದ ಸಿಂಗ್ ಅವರು ಪಾನಮತ್ತರಾಗಿ ಹೊಡೆದಾಡಿಕೊಂಡು, ಬಿಡದಿ ಪೊಲೀಸ್ ಠಾಣೆಯಲ್ಲಿ ಗಣೇಶ್ ಅವರ ವಿರುದ್ಧ ಕೊಲೆ ಯತ್ನದ ಪ್ರಕರಣವೊಂದು ಆನಂದ ಸಿಂಗ್ ಅವರ ದೂರಿನ ಅನ್ವಯ ದಾಖಲಾಗಿತ್ತು. ಗಣೇಶ್ ಅವರು ನಿರೀಕ್ಷಣಾ ಜಾಮೀನಿಗಾಗಿ ಜನಪ್ರತಿನಿಧಿಗಳ ನ್ಯಾಯಾಲಯದ ಮೊರೆ ಹೊಕ್ಕರು. ಅವರ ಈ ಅರ್ಜಿಗೆ ತಕರಾರು ಸಲ್ಲಿಸಿದ ಸರ್ಕಾರಿ ಅಭಿಯೋಜಕರು, ಆನಂದ ಸಿಂಗ್ ಅವರ ಎರಡೂ ಕಣ್ಣುಗಳಿಗೆ ಭಾರಿ ಪೆಟ್ಟಾಗಿ ಶೇ 80ರಷ್ಟು ದೃಷ್ಟಿ ಇಲ್ಲವಾಗಿದೆ ಎಂದು ವೈದ್ಯಕೀಯ ದಾಖಲೆಗಳನ್ನೂ ಹಾಜರುಪಡಿಸಿದ್ದರು. ಆನಂದ ಸಿಂಗ್ ಅವರಿಗೆ ಉಂಟಾಗಿದ್ದ ದೃಷ್ಟಿ ನಷ್ಟದ ಕಾರಣ, ನ್ಯಾಯಾಧೀಶರಾದ ರಾಮಚಂದ್ರ ಹುದ್ದಾರ್ ಅವರು ಗಣೇಶ್ ಅವರ ಅರ್ಜಿಯನ್ನು ತಿರಸ್ಕರಿಸಿದ್ದರು. ಈಗ ಸಚಿವರಾಗಿರುವ ಆನಂದ ಸಿಂಗ್ ಅವರಿಗೆ ನೋಟದ ಕುಂದಿನಿಂದಾಗಿ ತಮ್ಮ ಹಿಂದಿನ ಹೇಳಿಕೆಗಳನ್ನು ಓದಿಕೊಳ್ಳಲು ಸಾಧ್ಯವಿಲ್ಲದೆ ಹೊಸ ನಿರ್ಧಾರದಲ್ಲಿ ಭಾಗಿಯಾಗುತ್ತಿರುವುದು ಮಹಾಜನರಿಗೆ ತಪ್ಪೆನಿಸಬಾರದು, ಅಷ್ಟೆ...

ಸಿ.ಎಚ್.ಹನುಮಂತರಾಯ, ಸೂರ್ಯ ಮುಕುಂದರಾಜ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎಚ್ಚರ ತಪ್ಪಿದ ಪ್ರಚಾರ
ಈಗ ಕೋವಿಡ್ ಅಬ್ಬರ



ಸಿದ್ಧಾರೂಢ ಸ್ವಾಮೀಜಿಯ ರಥೋತ್ಸವದಲ್ಲಿ ಮಾರ್ಚ್ 12ರಂದು ಸಾವಿರಾರು ಜನರು ಸೇರಿದ್ದರು

ಕೋವಿಡ್–19ರ ಎರಡನೇ ಅಲೆಯು ಜನರು ಮತ್ತು ಸರ್ಕಾರದ ಕೈಮೀರಿ ಹೋದಂತೆ ಕಾಣಿಸುತ್ತಿದೆ. ರಾಜ್ಯದಲ್ಲಿ ಲಾಕ್‌ಡೌನ್ ಮತ್ತೆ ಹೇರಿಕೆಯಾಗಿದೆ. ಕಳೆದೆರಡು ತಿಂಗಳಲ್ಲಿ ಸ್ವಲ್ಪ ಎಚ್ಚರ ವಹಿಸಿದ್ದರೆ ಪರಿಸ್ಥಿತಿ ಅಪಾಯಕಾರಿ ಮಟ್ಟ ತಲುಪುತ್ತಿರಲಿಲ್ಲ ಎಂದು ತಜ್ಞರು ಹೇಳುತ್ತಿದ್ದಾರೆ. ಕೋವಿಡ್ ತಡೆ ಮಾರ್ಗಸೂಚಿಗಳೆಲ್ಲವನ್ನೂ ಗಾಳಿಗೆ ತೂರಿ ರಾಜಕೀಯ, ಧಾರ್ಮಿಕ ನಾಯಕರು ಬೀದಿಗಿಳಿದದ್ದು ಕೋವಿಡ್ ಹರಡಲು ದೊಡ್ಡ ಮಟ್ಟದಲ್ಲಿ ಕಾರಣವಾಗಿದೆ. ಜಾತ್ರೆ, ಉರುಸ್‌ಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಜನರು ಕೂಡ ಎಚ್ಚರ ತಪ್ಪಿದ್ದಕ್ಕೆ ಈಗ ಬೆಲೆ ತೆರಬೇಕಾಗಿದೆ

ಸಮಾವೇಶಗಳಿಂದ ಸಂಕಷ್ಟ

ಕೋವಿಡ್ ಮೊದಲನೇ ಅಲೆ ಜನವರಿ ವೇಳೆಗೆ ತನ್ನ ಪ್ರಭಾವ ತಗ್ಗಿಸಿಕೊಂಡಿತು. ಹೀಗಾಗಿ ಸರ್ಕಾರಕ್ಕೂ, ಜನರಿಗೂ ಕೋವಿಡ್ ಹೋಗಿಯೇಬಿಟ್ಟಿತು ಎಂಬ ಭಾವ ಬಂದಿದ್ದು ಸುಳ್ಳಲ್ಲ. ಏಳೆಂಟು ತಿಂಗಳ ಕಾಲ ಕೈಕಟ್ಟಿ ಕುಳಿತುಕೊಂಡಿದ್ದ ಜನರು, ಸಂಘಟನೆಗಳು, ಸಂಸ್ಥೆಗಳ ಕಾರ್ಯಕರ್ತರು ವಿವಿಧ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಜಾತಿ ಸಮುದಾಯಗಳು ಮೀಸಲಾತಿಗಾಗಿ ನಡೆಸಿದ ಎರಡು ಬೃಹತ್ ಹೋರಾಟಗಳು ಇದೇ ಅವಧಿಯಲ್ಲಿ ಜರುಗಿದವು.

2ಎ ಪ್ರವರ್ಗಕ್ಕೆ ಸೇರಿಸುವಂತೆ ಪಂಚಮಸಾಲಿ ಲಿಂಗಾಯತರು ದೊಡ್ಡ ದನಿ ಎತ್ತಿದರು. ಹರಿಹರ ಹಾಗೂ ಕೂಡಲಸಂಗಮದ ಪೀಠಾಧ್ಯಕ್ಷರು ತಮ್ಮ ಸಮುದಾಯದ ಜನರಿಗೆ ನ್ಯಾಯ ದೊರಕಿಸಿಕೊಡಲು ಬೀದಿಗಿಳಿದರು. ಸಮುದಾಯದ ವಿದ್ಯಾರ್ಥಿಗಳು ಹಾಗೂ ಯುವಜನರಿಗೆ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲಾತಿ ಸಿಗಬೇಕು ಎಂಬ ಹಕ್ಕೊತ್ತಾಯ ಮಂಡಿಸಿದರು. ಅವರ ಪಾದಯಾತ್ರೆಯು ಜನವರಿ 14ರಂದು ಕೂಡಲಸಂಗಮದಿಂದ ಆರಂಭಗೊಂಡು ಫೆಬ್ರುವರಿ 22ರಂದು ಬೆಂಗಳೂರು ತಲುಪಿತು. ಮಾರ್ಗದುದ್ದಕ್ಕೂ ದೊಡ್ಡ ಪಟ್ಟಣಗಳಲ್ಲಿ ಸಾವಿರಾರು ಜನರು ಪಾದಯಾತ್ರೆಯನ್ನು ಬರಮಾಡಿಕೊಂಡರು.

ಬೆಂಗಳೂರಿನಲ್ಲಿ ಕೊನೆಯ ದಿನ ಬೃಹತ್ ಸಮಾವೇಶ ನಡೆಯಿತು. ನಿಷೇಧಾಜ್ಞೆ ಇದ್ದರೂ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಮುಂದಾದರು. ಸಮಾವೇಶ ಸ್ಥಳದಿಂದ ಹೊರಟ ಗುಂಪುಗಳನ್ನು ಕಾವೇರಿ ಜಂಕ್ಷನ್ ಬಳಿ ಪೊಲೀಸರು ತಡೆದರು. ಈ ವೇಳೆ ಜನರು ತಮ್ಮ ನಡುವೆ ಅಂತರ ಕಾಯ್ದುಕೊಳ್ಳುವ ಗೋಜಿಗೆ ಹೋಗಲಿಲ್ಲ. ಮಾಸ್ಕ್ ಧರಿಸಿದ್ದವರು ಕೆಲವೇ ಜನ.


ಇನ್ನು ಕುರುಬ ಸಮುದಾಯದ ಮೀಸಲಾತಿ ಹೋರಾಟವು ಸಹ ಕೋವಿಡ್ ನಡುವೆಯೇ ಜರುಗಿತು. ತಮ್ಮನ್ನು ಎಸ್‌ಟಿ ಪ್ರವರ್ಗಕ್ಕೆ ಸೇರಿಸಬೇಕು ಎಂದು ಆಗ್ರಹಿಸಿ ಕುರುಬ ಸಮುದಾಯದ ಸಾವಿರಾರು ಜನರು ಕಾಗಿನೆಲೆ ಪೀಠಾಧ್ಯಕ್ಷ ನಿರಂಜನಾನಂದಪುರಿ ಸ್ವಾಮೀಜಿ ಅವರ ನೇತೃತ್ವದಲ್ಲಿ ಬೀದಿಗಿಳಿದರು. ಜನವರಿ 15ರಿಂದ ಫೆಬ್ರುವರಿ 4ರ ವರೆಗೆ 340 ಕಿ.ಮೀ. ಪಾದಯಾತ್ರೆ ಕೈಗೊಳ್ಳಲಾಗಿತ್ತು. ಪಾದಯಾತ್ರೆಯುದ್ದಕ್ಕೂ ಜನರು ಅಲ್ಲಲ್ಲಿ ಸಮಾವೇಶಗೊಂಡು ಚರ್ಚಿಸುತ್ತಿದ್ದರು. ಬೆಂಗಳೂರು ತಲುಪಿದಾಗ, ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಮೈದಾನದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿತ್ತು. ಕೋವಿಡ್ ಮಾರ್ಗಸೂಚಿಗಳು ಅದಾಗಲೇ ತಮ್ಮ ಔಚಿತ್ಯ ಕಳೆದುಕೊಂಡಿದ್ದರಿಂದ ಲಕ್ಷಾಂತರ ಜನರು ಗುಂಪುಗುಂಪಾಗಿ ಬಂದು ಸಮಾವೇಶದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು.

ಈ ಎರಡೂ ಸಮಾವೇಶಗಳನ್ನು ಹೊರತಪಡಿಸಿ ರಾಜ್ಯದ ನಾನಾ ಕಡೆ ದಿನಂಪ್ರತಿ ಪ್ರತಿಭಟನೆಗಳು, ಹಕ್ಕೊತ್ತಾಯ ಮೆರವಣಿಗೆಗಳು, ಸಂಘಗಳ ಸಮಾವೇಶಗಳು, ಮದುವೆ ಸಮಾರಂಭಗಳು ನಡೆದವು.



ಬಸವಕಲ್ಯಾಣದಲ್ಲಿ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಚಾರ

ಮಾರ್ಚ್ ಆರಂಭದಿಂದಲೇ ಎರಡನೇ ಅಲೆ



ಜನರ ಜೀವ ಪಣಕ್ಕಿಟ್ಟು ನಾಯಕರ ಪ್ರಚಾರ

ದೇಶದ ಐದು ವಿಧಾನಸಭೆಗಳಿಗೆ ಚುನಾವಣೆ ಘೋಷಣೆಯಾದ ನಂತರ ವಿವಿಧ ರಾಜಕೀಯ ಪಕ್ಷಗಳ ಮುಖಂಡರೇ ಕೋವಿಡ್ ಮಾರ್ಗಸೂಚಿಯನ್ನು ಗಾಳಿಗೆ ತೂರಿದ್ದರು ಎಂಬ ಆರೋಪವಿದೆ. ನಾಲ್ಕು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ವಿವಿಧ ಪಕ್ಷಗಳ ನಾಯಕರು ಆಯೋಜಿಸಿದ್ದ ಸಭೆಗಳಲ್ಲಿ ಸಾವಿರಾರು ಜನರು ಸೇರಿದ್ದರು. ಅದಾಗಲೇ ದೇಶದಲ್ಲಿ ಕೋವಿಡ್‌ನ ಎರಡನೇ ಅಲೆಯು ಕಾಣಿಸಿಕೊಂಡು, ಐದು ರಾಜ್ಯಗಳಲ್ಲಿ ತೀವ್ರಗೊಂಡಿತ್ತು.

ಈ ಚುನಾವಣೆಗಳ ಜತೆಗೆ ಅನೇಕ ರಾಜ್ಯಗಳಲ್ಲಿ ಲೋಕಸಭೆ ಹಾಗೂ ವಿಧಾನಸಭೆಯ ತೆರವಾದ ಕ್ಷೇತ್ರಗಳಿಗೆ ಉಪಚುನಾವಣೆಗಳು ನಡೆದವು. ಈ ಸಂದರ್ಭದಲ್ಲೂ ರಾಜಕಾರಣಿಗಳು ಎಲ್ಲ ನಿಯಮಗಳನ್ನು ಗಾಳಿಗೆ ತೂರಿದ್ದರು. ಕರ್ನಾಟಕದಲ್ಲಿ ಬೆಳಗಾವಿ ಲೋಕಸಭಾ ಕ್ಷೇತ್ರ ಮತ್ತು ಮಸ್ಕಿ ಹಾಗೂ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಿತು. ಆಡಳಿತ ಹಾಗೂ ವಿರೋಧಪಕ್ಷಗಳು ಈ ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ಪರಿಗಣಿಸಿದವು. ಆದರೆ, ಪ್ರಚಾರದ ಸಂದರ್ಭದಲ್ಲಿ ಕೋವಿಡ್ ತಡೆ ಮಾರ್ಗಸೂಚಿ ಪಾಲಿಸದೇ ಇದ್ದರೆ ಪಿಡುಗು ಅಪಾಯಕಾರಿಯಾಗಿ ಹರಡಬಹುದು ಎಂಬುದನ್ನು ಗಣನೆಗೇ ತೆಗೆದುಕೊಳ್ಳಲಿಲ್ಲ. ಪ್ರಮುಖ ಪಕ್ಷಗಳ ನಾಯಕರು ಸಾವಿರಾರು ಜನರನ್ನು ಸೇರಿಸಿ ಸಭೆಗಳನ್ನು ನಡೆಸಿದ್ದರು. ಇಂಥ ಸಭೆಗಳಲ್ಲಿ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಲಾಗಿತ್ತು. ಸಭೆಗಳಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ ಹಾಗೂ ಹಲವು ನಾಯಕರಿಗೆ ಕೋವಿಡ್ ದೃಢಪಟ್ಟು ಆಸ್ಪತ್ರೆಗೆ ದಾಖಲಾಗುವಂತಾಗಿತ್ತು. ಜ್ವರದ ನಡುವೆಯೂ ಈ ನಾಯಕರು ಪ್ರಚಾರ ನಡೆಸಿದ್ದರು ಎಂಬುದು ಇವರಲ್ಲಿದ್ದ ಅಸಡ್ಡೆಯ ಪ್ರಮಾಣವನ್ನು ಸೂಚಿಸುತ್ತದೆ.

ಮತದಾನ ಮುಗಿಯುವ ವೇಳೆಗೆ ಇನ್ನಷ್ಟು ನಾಯಕರು ಆಸ್ಪತ್ರೆ ದಾಖಲಾಗುವಂತಾಗಿದೆ. ಇಂಥ ಪ್ರಚಾರ ಸಭೆಗಳಲ್ಲಿ ಪಾಲ್ಗೊಂಡು ಕೋವಿಡ್ ಅಂಟಿಸಿಕೊಂಡವರ ಸಂಖ್ಯೆ ನೂರಾರು ಇರಬಹುದು ಎಂದು ಹೇಳಲಾಗಿದೆ.

ಉಪಚುನಾವಣೆ ವೇಳೆ ಮತ್ತು ನಂತರ ಕೋವಿಡ್ ಪೀಡಿತರಾದ ನಾಯಕರು

- ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ
- ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ
- ವಿಧಾನಪರಿಷತ್ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ
- ವಿಧಾನಸಭೆ ಉಪಸಭಾಧ್ಯಕ್ಷ ಆನಂದ ಮಾಮನಿ
- ಶಾಸಕಿ ಲಕ್ಷ್ಮಿ ಹೆಬ್ಬಾಳಕರ
- ಶಾಸಕ ರಮೇಶ ಜಾರಕಿಹೊಳಿ (ಪ್ರಚಾರಕ್ಕೆ ಹೋಗಿಲ್ಲ)
- ಬೆಳಗಾವಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಂಗಲಾ ಅಂಗಡಿ
- ಕುಡಚಿ ಶಾಸಕ ಪಿ. ರಾಜೀವ.
- ಮಸ್ಕಿ ವಿಧಾನಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ

ಚಾಟಿ ಬೀಸಿದ್ದ ಹೈಕೋರ್ಟ್

ಕೋವಿಡ್ ನಿಯಮ ಉಲ್ಲಂಘಿಸಿದವರ ವಿರುದ್ಧ ಚುನಾವಣಾ ಆಯೋಗ ಮೌನವಾಗಿದ್ದರೂ, ಹೈಕೋರ್ಟ್ ಮಾತ್ರ ಅಸಮಾಧಾನ ವ್ಯಕ್ತಪಡಿಸಿತ್ತು. ಅಷ್ಟೇ ಅಲ್ಲ, ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿತ್ತು. ಇಂಥವರ ವಿರುದ್ಧ ಕ್ರಮ ಕೈಗೊಳ್ಳಲು ಹಿಂಜರಿದ ಪೊಲೀಸರ ವಿರುದ್ಧವೂ ಚಾಟಿ ಬೀಸಿತ್ತು.

‘ನಿಯಮ ಪಾಲನೆಯ ವಿಚಾರದಲ್ಲಿ ರಾಜಕೀಯ ಮತ್ತು ಧಾರ್ಮಿಕ ಮುಖಂಡರು ಮಾದರಿಯಾಗಿ ಇರಬೇಕಿತ್ತು. ಆದರೆ, ಅದು ಆಗುತ್ತಿಲ್ಲ. ಈ ಕಾರಣದಿಂದ ಅವರ ವಿರುದ್ಧವೇ ಕ್ರಮಗಳು ತ್ವರಿತವಾಗಿ ಜಾರಿಯಾಗಬೇಕು. ಆದರೆ ಸಂಘಟಕರ ವಿರುದ್ಧ ಮಾತ್ರ ಪೊಲೀಸರು ದೂರು ದಾಖಲಿಸುತ್ತಿದ್ದಾರೆ’ ಎಂದು ಪೀಠ ಆಕ್ಷೇಪಿಸಿತ್ತು. ಆದರೆ, ಇದರ ನಂತರವೂ ಯಾವುದೇ ಪ್ರಮುಖ ರಾಜಕಾರಣಿ ಅಥವಾ ಧಾರ್ಮಿಕ ಮುಖಂಡರ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿರುವ ಬಗ್ಗೆ ವರದಿಯಾಗಿಲ್ಲ

ಬೆಂಗಳೂರಿನ ಲೆಟ್ಜ್‌ಕಿಟ್ ಫೌಂಡೇಷನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠವು ‘ಈ ಆದೇಶದ ಸಾರಾಂಶವನ್ನು ಕೂಡಲೇ ಡಿಜಿಪಿ ಅವರಿಗೆ ರವಾನಿಸಬೇಕು. ಲಿಖಿತ ಆದೇಶದ ಪ್ರತಿಗಾಗಿ ಕಾಯಬಾರದು’ ಎಂದೂ ಸರ್ಕಾರದ ಪರ ವಕೀಲರಿಗೆ ಸೂಚನೆ ನೀಡಿತ್ತು.

ಜಾತ್ರೆಗಳಿಂದ ವೇಗೋತ್ಕರ್ಷ

ಕೋವಿಡ್ ಎರಡನೇ ಅಲೆಯು ರಾಜ್ಯದಲ್ಲಿ ಭಾರಿ ಸಂಚಲನ ಸೃಷ್ಟಿಸಿದೆ. ಏಪ್ರಿಲ್ ತಿಂಗಳು ಆರಂಭವಾಗುವ ಮುನ್ನ ಇದ್ದ ಪರಿಸ್ಥಿತಿ, ತಿಂಗಳು ಮುಗಿಯುವ ಹೊತ್ತಿಗೆ ಪೂರ್ತಿ ಬದಲಾಗಿದೆ. ಇದಕ್ಕೂ ಮುಂಚಿನ ಕೆಲ ತಿಂಗಳಲ್ಲಿ ಜನರು ಧಾರ್ಮಿಕ ಆಚರಣೆಗಳ ಹೆಸರಿನಲ್ಲಿ ನಿಯಮಾವಳಿಗಳನ್ನು ಗಾಳಿಗೆ ತೂರಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಜನವರಿಯಿಂದ ಏಪ್ರಿಲ್ ಆರಂಭದವರೆಗೂ ನಾಡಿನಾದ್ಯಂತ ನಡೆದ ಜಾತ್ರೆಗಳು, ರಥೋತ್ಸವಗಳು ಕೋವಿಡ್ ಪಿಡುಗು ಬಿಕ್ಕಟ್ಟಿನ ರೂಪ ತಾಳಲು ಕಾರಣ ಎನ್ನುತ್ತಾರೆ ತಜ್ಞರು.

ಬಳ್ಳಾರಿ ಜಿಲ್ಲೆಯಲ್ಲಿ ಮಾರ್ಚ್ 1ರಂದು ನಡೆದ ಮೈಲಾರ ಜಾತ್ರೆಯಲ್ಲಿ ಸುಮಾರು 2 ಲಕ್ಷ ಜನ ಸೇರಿದ್ದರು. ಮಾರ್ಚ್ 15ರಂದು ನಡೆದ ಕುರುವತ್ತಿ ಜಾತ್ರೆ, ಕೊಟ್ಟೂರಿನ ಕೊಟ್ಟೂರೇಶ್ವರ ರಥೋತ್ಸವದಲ್ಲಿ ಸಾವಿರಾರು ಮಂದಿ ಇದ್ದರು. ಮಾರ್ಚ್ 1ರಂದು ಜರುಗಿದ ಧಾರವಾಡ ಜಿಲ್ಲೆಯ ಗರಗ ಮಡಿವಾಳೇಶ್ವರ ಜಾತ್ರೆ, ಹುಬ್ಬಳ್ಳಿಯಲ್ಲಿ ಮಾರ್ಚ್ 12ರಂದು ನಡೆದ ಸಿದ್ಧಾರೂಢ ಮಠದ ಜಾತ್ರಾ ಮಹೋತ್ಸವವೂ ಸಹಸ್ರಾರು ಭಕ್ತರ ಸಂಗಮಕ್ಕೆ ಸಾಕ್ಷಿಯಾಗಿದ್ದವು.

ಬೆಳಗಾವಿ ಜಿಲ್ಲೆ ಬೈಲಹೊಂಗಲ ಸಮೀಪದ ಹಾರೂಗೊಪ್ಪ ಗ್ರಾಮದಲ್ಲಿ ಫೆ.26ರಂದು ಉಳುವಿ ಚನ್ನಬಸವೇಶ್ವರ ಜಾತ್ರೆ, ಬೈಲಹೊಂಗಲ ತಾಲ್ಲೂಕಿನ ನಯಾನಗರ ಗ್ರಾಮದಲ್ಲಿ ಮಾರ್ಚ್ 14ರಂದು ನಡೆದ ಬಸವೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ, ಅದ್ದೂರಿ ರಥೋತ್ಸವಗಳು ಜನಸ್ತೋಮಕ್ಕೆ ಕಾರಣವಾಗಿದ್ದವು. ಚಿಕ್ಕೋಡಿ ತಾಲ್ಲೂಕಿನ ಅಂಕಲಿ ಗ್ರಾಮದ ಸಿದ್ಧೇಶ್ವರ ಜಾತ್ರೆ ಅಂಗವಾಗಿ ಮಾರ್ಚ್ 15ರಂದು ಹಮ್ಮಿಕೊಂಡಿದ್ದ ಶೌರ್ಯ ಪ್ರದರ್ಶನ, ಚಿಕ್ಕೋಡಿ ತಾಲ್ಲೂಕಿನ ನೇಜ್ ಗ್ರಾಮದೇವರಾದ ಕಾಡಸಿದ್ದೇಶ್ವರ ಜಾತ್ರೆ ಪ್ರಯುಕ್ತ ಮಾರ್ಚ್ 21ರಂದು ನಡೆದ ಜಂಗಿ ನಿಕಾಲಿ ಕುಸ್ತಿ ಪಂದ್ಯಾವಳಿ, ಚಿಕ್ಕೋಡಿ ತಾಲ್ಲೂಕಿನ ಕೇರೂರ ಗ್ರಾಮದಲ್ಲಿ ಮಾರ್ಚ್ 22ರಂದು ನಡೆದ ಅರಣ್ಯಸಿದ್ದೇಶ್ವರ ಜಾತ್ರೆ ಅಂಗವಾಗಿ ನಡೆದ ಪಲ್ಲಕ್ಕಿ ಮೇಲೆ ಭಂಡಾರ ಹಾರಿಸುವ ಕಾರ್ಯಕ್ರಮಗಳಲ್ಲಿ ಜನಸಾಗರವೇ ಸೇರಿತ್ತು.

ವಿಜಯಪುರ ಜಿಲ್ಲೆಯ ಯಲಗೂರಿನ ಯಲಗೂರೇಶ್ವರ ಜಾತ್ರೆ, ಜಾಯವಾಡಗಿ ಸೋಮನಾಥ ಶಿವಪ್ಪ ಮುತ್ಯಾನ ಜಾತ್ರೆ, ಆಲಮಟ್ಟಿಯ ಚಂದ್ರಮ್ಮ ದೇವಿ ಜಾತ್ರೆ, ಇಟಗಿಯ ಮೇಲುಗದ್ದುಗೆ ಮಠದ ಜಾತ್ರೆ, ಕಾಮನಕೇರಿ ದವಲ್ ಮಲಿಕ್ ಜಾತ್ರೆ, ಮಸೂತಿಯ ವೀರಭದ್ರೇಶ್ವರ ಜಾತ್ರೆ, ಸಿಂದಗಿ ತಾಲ್ಲೂಕು ಯಂಕಂಚಿ ದಾವಲಮಲಿಕ್ ಉರುಸ್, ಕಕ್ಕಳ ಮೇಲಿಯಲ್ಲಿ ಸಿದ್ದಲಿಂಗ ಮುತ್ಯಾ ಜಾತ್ರೆ ಅದ್ದೂರಿಯಾಗಿ ನಡೆದು ಜನರ ಸಂಗಮಕ್ಕೆ ಕಾರಣವಾಗಿದ್ದವು.

ಫೆಬ್ರುವರಿಯಿಂದ ಮಾರ್ಚ್ ಅಂತ್ಯದವರೆಗೆ ಹಾವೇರಿ ಜಿಲ್ಲೆಯಲ್ಲಿ ಹಿರೇಕೆರೂರ ದುರ್ಗಾದೇವಿ ಜಾತ್ರೆ, ಹಾನಗಲ್ ಗ್ರಾಮದೇವಿ ಜಾತ್ರೆ, ಹಾವನೂರು ಜಾತ್ರೆ, ಸವಣೂರು ಮಾಯಮ್ಮದೇವಿ ಜಾತ್ರೆ, ಅಕ್ಕಿಆಲೂರು ಉತ್ಸವಗಳು ಜನರ ಸಮ್ಮುಖದಲ್ಲಿ ಜೋರಾಗಿಯೇ ನಡೆದಿವೆ. ಗದಗ ಜಿಲ್ಲೆಯ ನರೇಗಲ್ ಪಟ್ಟಣದ ಹಠಯೋಗಿ ಹುಚ್ಚೀರಪ್ಪಜ್ಜನವರ ರಥೋತ್ಸವವು ಫೆಬ್ರುವರಿ 15ರಂದು ಸಾವಿರಾರು ಭಕ್ತರ ನಡುವೆ ವೈಭವದಿಂದ ನಡೆಯಿತು. ಡಂಬಳ ತೋಂಟದಾರ್ಯ ಮಠದ ಜಾತ್ರೆ, ಕದಾಂಪುರ ಗ್ರಾಮದ ಪತ್ರೆಸ್ವರ ಜಾತ್ರೆ, ಡಂಬಳ ಗ್ರಾಮದ ಜಮಾಲಾ ಶ್ಯಾವಲಿ ಉರುಸ್, ಗದಗ ತಾಲ್ಲೂಕಿನ ಬಳಗಾನೂರಿನ ಚಿಕೇನಕೊಪ್ಪದ ಜಾತ್ರಾ ಮಹೋತ್ಸವದಲ್ಲಿ ಸಾವಿರಾರು ಭಕ್ತರು ಭಾಗಿಯಾಗಿದ್ದಾರೆ.

ಮುಳಗುಂದದಲ್ಲಿ ಫೆ.25, 26ರಂದು ನಡೆದ ಬಾಲಲೀಲಾ ಮಹಾಂತ ಶಿವಯೋಗಿಗಳ ಜಾತ್ರೆಗೆ ಸಾವಿರಾರು ಜನರು ಸೇರಿದ್ದರು.

ಉತ್ತರ ಕನ್ನಡದಲ್ಲಿ ಉಳವಿ ಜಾತ್ರೆ ಮತ್ತು ಗೋಕರ್ಣದಲ್ಲಿ ಶಿವರಾತ್ರಿ ಉತ್ಸವಗಳು ಮಾರ್ಚ್‌ನಲ್ಲಿ ಪ್ರಮುಖವಾಗಿ ನಡೆದಿವೆ. ಆದರೆ, ಎರಡೂ ಈ ಬಾರಿ ಸರಳವಾಗಿ ಆಗಿವೆ. ಆದರೆ, ಸಿದ್ದಾಪುರದ ಕೊಂಡ್ಲಿಯಲ್ಲಿ ಮಾರ್ಚ್ 30ರಿಂದ ಏ.6ರ ತನಕ ಜಾತ್ರೆ ನಡೆದಿತ್ತು. ಮಾ.24ರಿಂದ 27ರವರೆಗೆ ಶಿರಸಿಯಲ್ಲಿ ಬೇಡರ ವೇಷ ಅದ್ದೂರಿಯಾಗಿ ನಡೆದಿತ್ತು.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಬೆಂಗಳೂರಿನ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳನ್ನು ಕೊಲ್ಲಲಾಗುತ್ತಿದೆ. ಸರ್ಕಾರ, ಮೃತಪಡುವ ಪ್ರತಿ ಕೋವಿಡ್ ರೋಗಿಗೆ ₹5ಲಕ್ಷದಿಂದ 7ಲಕ್ಷ ಪಾವತಿಸುತ್ತಿದೆ. ಹೀಗಾಗಿ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳನ್ನು ಕೊಲ್ಲಲಾಗುತ್ತಿದೆ. ಬೆಂಗಳೂರಿನ ಬನ್ನೇರುಘಟ್ಟದ ಆಕ್ಸ್‌ಫರ್ಡ್ ಯೂನಿವರ್ಸಿಟಿ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಯನ್ನು, ಆಸ್ಪತ್ರೆ ಸಿಬ್ಬಂದಿ ಹೊಡೆದು ಕೊಂದಿದ್ದಾರೆ ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಪೋಸ್ಟ್‌ನಲ್ಲಿ ಒಂದು ವಿಡಿಯೊ ಸಹ ಹಂಚಿಕೊಳ್ಳಲಾಗಿದೆ. ಆಸ್ಪತ್ರೆ ಸಿಬ್ಬಂದಿಯು ರೋಗಿಯೊಬ್ಬರ ಮೇಲೆ ಹಲ್ಲೆ ನಡೆಸುತ್ತಿರುವ ದೃಶ್ಯ ಆ ವಿಡಿಯೊದಲ್ಲಿ ಇದೆ.

ಆದರೆ, ಈ ವಿಡಿಯೊಗೆ ಸಂಬಂಧಿಸಿದ ವಿವರ ತಪ್ಪಾಗಿದೆ ಎಂದು ಹಲವು ಫ್ಯಾಕ್ಟ್‌ಚೆಕ್ ವೇದಿಕೆಗಳು ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. ಈ ಪೋಸ್ಟ್‌ನಲ್ಲಿ ಇರುವ ವಿಡಿಯೊ ಬೆಂಗಳೂರಿನ ಆಸ್ಪತ್ರೆಯದ್ದಲ್ಲ. ಇದು ಪಂಜಾಬ್‌ನ ಪಟಿಯಾಲದ ಆಸ್ಪತ್ರೆ ಒಂದರ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ. 2020ರ ಆಗಸ್ಟ್‌ನಲ್ಲಿ ಖಿನ್ನತೆಗೆ ಒಳಗಾಗಿದ್ದ ವ್ಯಕ್ತಿಯೊಬ್ಬರಿಗೆ ಆಸ್ಪತ್ರೆ ಸಿಬ್ಬಂದಿ ಥಳಿಸಿದ್ದ ದೃಶ್ಯ ಅದು. ಈ ಸಂಬಂಧ ಅಲ್ಲಿ ಪ್ರಕರಣ ದಾಖಲಾಗಿತ್ತು. ಅಲ್ಲದೆ, ಹಲ್ಲೆ ನಡೆಸಿದ ಸಿಬ್ಬಂದಿಯನ್ನು ಬಂಧಿಸಲಾಗಿತ್ತು. ಇದಕ್ಕೆ ಸಂಬಂಧಿಸಿದ ಸುದ್ದಿಯನ್ನು ಅಮರ್ ಉಜಾಲ, ಎಬಿಪಿ ನ್ಯೂಸ್ ಮತ್ತಿತರ ಪತ್ರಿಕೆ ಮತ್ತು ವಾಹಿನಿಗಳು ಪ್ರಕಟಿಸಿದ್ದವು.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಮತ್ತೊಂದು ಸಫಲ ಉಪಾಯ

ತಮ್ಮ ರಾಜನ ಸೈನ್ಯ ತಾನು ಸೋತಿದ್ದೇನೆಂದು ಭಾವಿಸಿ ಓಡುತ್ತಿದೆ ಎಂಬುದು ಕೇವಟ್ಟನಿಗೆ ಹೊಳೆಯಿತು. ಮಹೋಷಧಕುಮಾರ ಎಲ್ಲರಿಗೂ ಕೇಳುವಂತೆ ಜೋರಾಗಿ ಕೂಗಿದ, ‘ಏಳಿ ಆಚಾರ್ಯ, ನಾನು ತುಂಬ ಚಿಕ್ಕವನು, ನಿಮ್ಮ ಮೊಮ್ಮಗನ ವಯಸ್ಸಿನವನು. ನನಗೆ ನಮಸ್ಕಾರ ಮಾಡಬೇಡಿ’. ಆಗ ಎಲ್ಲರಿಗೂ ಕೇವಟ್ಟ ಸೋತು ಹೋದ ಎಂಬುದು ಖಚಿತವಾಯಿತು. ಆದರೆ ಕುಮಾರ ಅವನನ್ನು ಬಿಡದೆ ನೆಲಕ್ಕೆ ಮತ್ತಷ್ಟು ಅವನ ಮುಖವನ್ನು ಉಜ್ಜಿ, ಅವನಿಗೆ ಮಾತ್ರ ಕೇಳುವಂತೆ, ‘ಮೂರ್ಖ, ನೀನು ನನ್ನಿಂದ ನಮಸ್ಕಾರವನ್ನು ಅಪೇಕ್ಷಿಸುತ್ತಿದ್ದೆಯಾ?’ ಎಂದು ಬುಸುಗುಟ್ಟುತ್ತಾ, ಅವನ ಕತ್ತು ಹಿಡಿದು ಬೆಕ್ಕಿನ ಮರಿಯನ್ನು ಎಸೆದುಬಿಡುವಂತೆ ದೂರ ಎಸೆದ. ಕೇವಟ್ಟ ಗಾಬರಿಯಾಗಿ, ಮುಖದ ರಕ್ತವನ್ನು ಒರೆಸಿಕೊಳ್ಳುತ್ತ ತನ್ನ ರಾಜನ ಕಡೆಗೆ ಓಡಿದ.

‘ಸ್ವಾಮಿ, ನಾನು ಸೋತಿಲ್ಲ, ಕುಮಾರನಿಗೆ ನಮಸ್ಕಾರ ಮಾಡಿಲ್ಲ. ಆತ ಮೋಸ ಮಾಡಿದ್ದಾನೆ’ ಎಂದು ಕೂಗುತ್ತ ರಾಜನ ಬೆನ್ನು ಹತ್ತಿದ. ಅನೇಕ ಬಾರಿ ಬೇಡಿಕೊಂಡ ಮೇಲೆ ರಾಜ ಕುದುರೆಯನ್ನು ನಿಲ್ಲಿಸಿ, ಓಡುತ್ತಿರುವ ಸೈನ್ಯವನ್ನು ತಡೆದ. ನಡೆದದ್ದೆನ್ನೆಲ್ಲ ವಿವರಿಸಿದ ಕೇವಟ್ಟ ಹೊಸ ಉಪಾಯವೊಂದನ್ನು ನೀಡಿದ. ‘ನಾವು ಕೋಟೆಯ ಮುತ್ತಿಗೆಯನ್ನು ಮುಂದುವರೆಸೋಣ. ಕೋಟೆಯ ಒಳಗಿನ ನೀರು, ಆಹಾರ ಬಹುಕಾಲ ಇರದು. ಅವರು ನಮಗೆ ಶರಣಾಗಲೇ ಬೇಕು’ ಎಂದು ಒಪ್ಪಿಸಿದ. ಈ ಮಾತು ತಿಳಿದು ಕುಮಾರ, ಇವರನ್ನು ಬಹುಕಾಲ ಇಲ್ಲಿ ಉಳಿಸುವುದು ಸರಿಯಲ್ಲ, ಅವರನ್ನು ಭೇದದಿಂದ ಬೇಗ ಓಡಿಸಬೇಕು ಎಂದು ಯೋಚಿಸಿದ. ತಮ್ಮಲ್ಲಿ ಅತ್ಯಂತ ಹಿರಿಯನಾದ ಅಮಾತ್ಯ ಅನುಕೇವಟ್ಟನನ್ನು ಕರೆದು ಹೇಳಿದ, ‘ಆಚಾರ್ಯ, ನಿಮ್ಮಿಂದ ಒಂದು ಕೆಲಸವಾಗಬೇಕು. ನೀವು ನಮ್ಮ ರಾಜರಿಗೆ ಅತ್ಯಂತ ಪ್ರೀತಿಪಾತ್ರರೆಂಬುದು ವೈರಿ ರಾಜನಾದ ಬ್ರಹ್ಮದತ್ತನಿಗೂ ಗೊತ್ತಿದೆ. ಆದ್ದರಿಂದ ನೀವು ಕೋಟೆಯ ಮೇಲೇರಿ ವೈರಿ ನಾಯಕರಿಗೆ ಕೇಳಿಸುವಂತೆ, ‘ಚಿಂತೆ ಮಾಡಬೇಡಿ, ಕೋಟೆಯೊಳಗೆ ಜನ ಅನ್ನ, ನೀರಿಲ್ಲದೆ ಸಾಯುತ್ತಿದ್ದಾರೆ. ಇನ್ನೂ ಕೆಲವೇ ದಿನಗಳಲ್ಲಿ ರಾಜ್ಯ ನಿಮ್ಮ ವಶವಾಗುತ್ತದೆ’ ಎಂದು ಕೂಗುತ್ತಿರಿ. ಆಗ ನಮ್ಮ ಸೈನ್ಯದ ನಾಯಕರು ಅವರಿಗೆ ಕಾಣುವಂತೆ, ನಿಮ್ಮನ್ನು ಹೆಡಮುರಿಗೆ ಕಟ್ಟಿ, ಹೊಡೆಯುವಂತೆ ನಡೆಸುತ್ತ, ಒಂದು ಬೆತ್ತದ ಬುಟ್ಟಿಯಲ್ಲಿ ನಿಮ್ಮನ್ನು ಕೂರಿಸಿ ಕೋಟೆಯ ಹೊರಗೆ ವೈರಿ ಪಾಳಯದಲ್ಲಿ ಇಳಿಸಿಬಿಡುತ್ತಾರೆ. ಅವರು ತಮ್ಮನ್ನು ಬ್ರಹ್ಮದತ್ತನ ಬಳಿಗೆ ಕರೆದೊಯ್ಯುತ್ತಾರೆ. ಅಲ್ಲಿ ನಮ್ಮ ರಾಜರನ್ನು, ನನ್ನನ್ನು ಚೆನ್ನಾಗಿ ತೆಗಳಿ, ನಿಮಗೆ ಈ ರಾಜ್ಯದ ಬಗ್ಗೆ ಇದ್ದ ದ್ವೇಷವನ್ನು ಅವರು ನಂಬುವಂತೆ ಮಾಡಬೇಕು.

‘ಮುಂದೇನು ಮಾಡಬೇಕು?’ ಎಂದು ಅನುಕೇವಟ್ಟ ಕೇಳಿದ. ಕುಮಾರ ‘ಆಚಾರ್ಯ, ನೀವು ಆ ನೂರು ರಾಜರನ್ನು ಕೂಡಿಸಿ, ಕೇವಟ್ಟ ಅವರನ್ನು ಹೇಗೆ ಕೊಲ್ಲಿಸಲು ಯೋಜನೆ ಹಾಕಿದ್ದ ಎನ್ನುವುದನ್ನು ತಿಳಿಸಿ, ಅವರ ಮನ ಒಡೆದು, ಅವರು ತಮ್ಮ ತಮ್ಮ ರಾಜ್ಯಗಳಿಗೆ ಹೋಗುವಂತೆ ಮಾಡಿ, ನಂತರ ರಾಜನಿಗೆ, ‘ಸ್ವಾಮೀ, ನನಗೆ ಕಂದಕದಲ್ಲಿ ಎಲ್ಲಿ ಮೊಸಳೆಗಳಿವೆ, ಎಲ್ಲಿ ಇಲ್ಲ ಗೊತ್ತಿದೆ’ ಎಂದು ಹೇಳಿ ಸೈನಿಕರನ್ನು ಮೊಸಳೆ ಇರುವ ಕಂದಕದಲ್ಲೇ ಇಳಿಸುವಂತೆ ಮಾಡಬೇಕು. ಯಾಕೆ ಹೀಗೆ ಎಂದು ರಾಜ ಕೇಳಿದರೆ, ‘ನಿಮ್ಮ ಪುರೋಹಿತ ಕೇವಟ್ಟ ಲಂಚ ಪಡೆದು ಸ್ಥಳ ಬದಲಾಯಿಸಲು ಹೇಳಿದ್ದಾನೆ’ ಎಂದು ಹೇಳಿ. ಈಗ ನೂರು ರಾಜಕುಮಾರರು ಮತ್ತು ಅವರ ಸೈನ್ಯ ಇಲ್ಲದಿದ್ದುದರಿಂದ ಬ್ರಹ್ಮದತ್ತನ ಸೈನ್ಯ ಚಿಕ್ಕದಾಗಿರುತ್ತದೆ. ರಾಜ ಬ್ರಹ್ಮದತ್ತನಿಗೆ, ‘ರಾಜಾ ಈ ಮಹೋಷಧಕುಮಾರ ಭಯಂಕರ ಮಾಯಾವಿ. ಇಂದು ರಾತ್ರಿ ಸೈನ್ಯದ ಮೇಲೆ ಬೆಂಕಿಯ ಮಳೆ ಕರೆಯುತ್ತಾನೆ. ಎಲ್ಲರೂ ಓಡಿ ಪಾರಾಗೋಣ’ ಎಂದು ಹೇಳಿ. ಅವನು ಮತ್ತು ಅವನ ಸೈನ್ಯ ಹೆದರಿ ಓಡಿ ಹೋಗುತ್ತದೆ’ ಎಂದ. ಅನುಕೇವಟ್ಟ ಹಾಗೆಯೇ ಮಾಡಿದ. ಅಂತೆಯೇ ಬ್ರಹದತ್ತನ ಸೈನ್ಯ ತಮ್ಮ ಬಟ್ಟೆ-ಬರೆಗಳನ್ನು ಬಿಟ್ಟು ಪಲಾಯನ ಮಾಡಿತು.

ದಿನ ಭವಿಷ್ಯ

ಗುರುವಾರ 29 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಭರಣಿ ತೃತೀಯ ಗಂ. 50-45 (ರಾ. 2-25) ಗುರುವಾರ ನಿತ್ಯ ನಕ್ಷತ್ರ ಅನುರಾಧಾ ಗಂ. 30-26 (ಸಾ. 6-17) ವರೀಯನ್ ನಾಮ ಯೋಗ ಗಂ 23-12 ವಣಿಜ ಕರಣ ಗಂ. 23-44 ವಿಷ ಗಂ. 43-30 ಅಮೃತ ಗಂ. 25-36 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 6-04 ಸೂರ್ಯಾಸ್ತ: 6-30 ಅದೃಷ್ಟ ಸಂಖ್ಯೆ 2, 3, 7

ಮೇಷ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಿರಿ. ಅಚ್ಚರಿಯ ಸುದ್ದಿಯನ್ನು ಕೇಳುವ ಸಾಧ್ಯತೆ. ಸ್ವಪ್ರಯತ್ನದಿಂದ ಕಾರ್ಯಕ್ಷೇತ್ರಗಳಲ್ಲಿ ಉನ್ನತಿ. ಸಾಮಾಜಿಕ ಮನ್ನಣೆ ನಿಮ್ಮದಾಗಲಿದೆ.

ವೃಷಭ: ಮುಕ್ತ ಭಾವನೆಯಿಂದಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಪ್ರಯಾಣದ ಸಾಧ್ಯತೆ ಕಂಡುಬರುವುದು. ಆಶ್ಚರ್ಯಕರ ರೀತಿಯಲ್ಲಿ ಕೆಲಸ-ಕಾರ್ಯಗಳು ಕೂಡಿಬರುವವು.

ಮಿಥುನ: ಗಂಡಾಂತರಕ್ಕೆ ಬಲಿಯಾಗದಂತೆ ಹಿರಿಯರಿಂದ ಸಕಾಲಿಕ ಸಲಹೆಗಳು. ವೈಮನಸ್ಸು ನಿವಾರಣೆಯಾಗಿ ದೃಢ ಸಂಕಲ್ಪ. ಆರೋಗ್ಯದಲ್ಲಿ ಪ್ರಗತಿ. ಬಂಧುಗಳ ಆಗಮನ ಸಾಧ್ಯತೆ.

ಕರ್ಕಾಟಕ: ಕುಟುಂಬದಲ್ಲಿ ಹೊಂದಾಣಿಕೆಯಿಂದ ಬೆಂಬಲ ಗಳಿಸುವಿರಿ. ವ್ಯಕ್ತಿಗಳ ಸಂಪರ್ಕದಿಂದಾಗಿ ಉತ್ತಮ ಲಾಭದ ನಿರೀಕ್ಷೆ. ಸಂಘರ್ಷದಿಂದ ದೂರ. ಗೆಳೆಯರಿಂದ ನೆಮ್ಮದಿ.

ಸಿಂಹ: ಬಿಚ್ಚು ಮನಸ್ಸಿನ ಸ್ಪಷ್ಟ ಹೇಳಿಕೆಯಿಂದಾಗಿ ಸಹೋದ್ಯೋಗಿಗಳಿಗೆ ಇರುಸುಮುರುಸು. ಸತ್ಯ ದರ್ಶನದಿಂದ ಎಲ್ಲವೂ ನಿರಾಳ. ಸಂತೋಷದ ವಾತಾವರಣ ಮೂಡುವುದು.

ಕನ್ಯಾ: ಸ್ನೇಹಿತರೊಂದಿಗೆ ವಿಷಯಗಳ ವಿನಿಮಯದಿಂದಾಗಿ ವಾತಾವರಣ ತಿಳಿಗೊಂಡು ಮನಸ್ಸಿಗೆ ನೆಮ್ಮದಿ. ವಿಶೇಷ ಭೋಜನಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ. ಸಂಗಾತಿಯಿಂದ ಸಹಕಾರ.

ತುಲಾ: ಆತ್ಮೀಯತೆಯಿಂದಾಗಿ ಶುಭ ಸಂದರ್ಭ ನಿರ್ಮಾಣ. ಹೊಣೆಗಾರಿಕೆಯ ವಿಷಯದಲ್ಲಿ ಸಮರ್ಥ ನಿರ್ವಹಣೆ. ವಿಷಯಗಳ ಸ್ಪಷ್ಟ ಅರಿವು ಉಂಟಾಗಿ ವಿಶ್ವಾಸ ಮೂಡುವುದು.

ವೃಶ್ಚಿಕ: ಕೆಲಸ ಕಾರ್ಯಗಳಲ್ಲಿ ಉತ್ತಮ ಪ್ರಗತಿ. ನಿಕಟವರ್ತಿಗಳಿಂದ ಅನುಕೂಲಕರ ಸಹಾಯ. ಆತ್ಮಸ್ಥೈರ್ಯ ಮೂಡುವುದು. ವ್ಯಾಪಾರದಲ್ಲಿ ಹೆಚ್ಚಿನ ಲಾಭದ ನಿರೀಕ್ಷೆ. ಗಣ್ಯರ ಭೇಟಿ ಸಂಭವ.

ಧನು: ಭಿನ್ನಾಭಿಪ್ರಾಯದಿಂದಾಗಿ ನಿಂತು ಹೋದ ಕಾರ್ಯಗಳು ಒಮ್ಮತದಿಂದ ಸಾಧಿಸಲ್ಪಡುವವು. ಮದುವೆ ಮುಂತಾದ ಮಂಗಲ ಕಾರ್ಯಗಳ ನಿಶ್ಚಯ ಸಾಧ್ಯತೆ. ಕೆಲಸ ಕಾರ್ಯಗಳಲ್ಲಿ ಹುಮ್ಮಸ್ಸು.

ಮಕರ: ಆತ್ಮಶೋಧನೆಯಿಂದ ತಲೆದೋರಿರುವ ಆಂತರಿಕ ಗೊಂದಲಗಳು ನಿವಾರಣೆಯಾಗುವವು. ನಿಷ್ಕಲ್ಮಷ ಭಾವನೆಯಿಂದ ಸಮಾಧಾನ. ಸ್ನೇಹಿತರಿಂದ ಪ್ರಶಂಸೆ, ಸಂಗಾತಿಯಿಂದ ಉತ್ತಮ ಸಹಕಾರ.

ಕುಂಭ: ಬೇರೆಯವರ ವಿವಾದಗಳನ್ನು ಪರಿಹರಿಸುವಲ್ಲಿ ಮಧ್ಯಸ್ಥಿಕೆ ವಹಿಸಬೇಕಾದೀತು. ಅಡ್ಡಿ ಆತಂಕಗಳಿಲ್ಲದ ಜೀವನದಿಂದಾಗಿ ಉಲ್ಲಾಸ ಮೂಡುವುದು. ಸ್ನೇಹಿತರಿಂದಾಗಿ ಸಂತೋಷದ ವಾತಾವರಣ.


ಮೀನ: ನಿಮ್ಮ ನಿಲುವಿನಲ್ಲಿ ಆಕಸ್ಮಿಕ ತಿರುವು ಕಂಡುಬರುವುದು. ದೈಹಿಕ ಮತ್ತು ಮಾನಸಿಕ ಶ್ರಮ ಕಡಿಮೆಯಾಗಿ ನಿರಾಳ ಭಾವ. ಕಾರ್ಯನಿರ್ವಹಣೆಯಲ್ಲಿ ಯಶಸ್ಸನ್ನು ಕಾಣುವಿರಿ.

ನಿಮ್ಮ ಜನ್ಮದಿನ 29-ಏಪ್ರಿಲ್ ಈ ದಿನ ಅತ್ಯಂತ ಶುಭಕರ. ಹಮ್ಮಿಕೊಂಡಿರುವ ಕಾರ್ಯ ಯೋಜನೆಗಳಲ್ಲಿ ಯಶಸ್ಸನ್ನು ಸಾಧಿಸುವಿರಿ. ಮಹಿಳಾ ನೌಕರಸ್ಥರಿಗೆ ಉದ್ಯೋಗ ಕ್ಷೇತ್ರದಲ್ಲಿ ಕಿರಿಕಿರಿ. ಆರ್ಥಿಕ ಕ್ಷೇತ್ರದಲ್ಲಿ ಹೆಚ್ಚಿನ ಅನುಕೂಲ. ಅತಿಯಾದ ಆಸೆಯಿಂದಾಗಿ ತೊಂದರೆಗಳಿಗೆ ಸಿಲುಕಿಕೊಳ್ಳುವ ಸಾಧ್ಯತೆ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವುದರಿಂದ ಕೀರ್ತಿ.

ಪದಬಂಧ 4581 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ನೆನಪಿನಿಂದ ಮಾಸದ ತಿಂಗಳು! (2)
5.ಪೂರ್ತಿ ಹಿಡಿಯದ ಗ್ರಹಣ (5)
6.ಅಗಲವಾದ ತಟ್ಟೆ (3)
7.ವಚನ ಅಥವಾ ಮಾತು (3)
8.ಸಂಗೀತ ಕೃತಿಗಳನ್ನು ರಚಿಸುವವನು (5)
9.ತಳಪಾಯ ಇಲ್ಲಿದೆ (3)
10.ಒಳ್ಳೆಯ ಅದೃಷ್ಟ (3)
13.ಆನಂದವನ್ನುಂಟು ಮಾಡುವುದು (5)
14.ಸುಂದರಿಯಲ್ಲೇ ಆಳವಾದ ಕಂದರವಿದೆ! (2)

ಮೇಲಿಂದ ಕೆಳಕ್ಕೆ
1.ಅಪೂರ್ವವಾದುದು ಇದು (4)
2.ಗ್ರಹ ಕೊನೆಗಿದ್ದಾಗಿನ ಹತೋಟಿ (3)
4.ಸನ್ನಿ ಹಿಡಿದಾಗ ಒಟ್ಟಿಗೆ ಇರುವುದು! (4)
5.ಖಂಡತುಂಡವಾಗಿ ಮಾತನಾಡುವವನು (5)
7.ವಾರದೊಳಗೆ ಕಾಣಿಸಿಕೊಂಡಿರುವ ಬಾಧ್ಯಸ್ಥ (5)
9.ಜ್ಞಾನವನ್ನು ಬೋಧಿಸುವುದು (4)
11.ಸಸ್ಯಗಳಿಂದ ಸಿದ್ಧಪಡಿಸುವ ಎಣ್ಣೆ (4)
12.ಅಂದವಾದ ಪಲ್ಲಕ್ಕಿ (3)



4580ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಎಡಚ 3.ಸುಧಾರಕ 5.ಘಟ 6.ದರವೇಶಿ 7.ಅತಿಕ್ರಮಪ್ರವೇಶ 10.ಸುಮಬಾಣ 11.ಶುಕ 13.ಗಣನೀಯ 14.ದಮಡಿ
ಮೇಲಿಂದ ಕೆಳಕ್ಕೆ: 1.ಎವೆ 2.ಚರಟ 4.ಕಕ್ಷಿ 5.ಘನಅ 6.ದಮಾಪ್ರ 8.ಕ್ರಮೇಣ 9.ಶತಕ 10.ಸುಭಗ 11.ಶುಭದ 12.ಗಡಿ

ಸುಡೊಕು 4967

	7				3		8	
		3						
	1		2	6		7		
	8			2		1		5
		2	8		5			
5				3			2	
9		7						6
	5			7		9		
			6		1		7	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4966 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಮುಂಬೈ ಧಾರಣೆ

ಶೇಂಗಾ

28-4-2021

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9400-9450
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9100-9200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1600)
ಒಂದು ವಾರದ ಡೆಲಿವರಿ	1575 (1595)
ಸೋಯಾ ಕಚ್ಚಾ	1420 (1425)
ಪಾಮ್ ವಾರದ ಡೆಲಿವರಿ	1286 (1298)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1670)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,750 (47,100)
ಬೆಳ್ಳಿ ಕೆ.ಜಿ 67,800 (68,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೆಚ್ಚುತ್ತಿರುವ ಕೋವಿಡ್‌ನ ಎರಡನೇ ಅಲೆ: ವೈದ್ಯಕೀಯ ಉಪಕರಣ, ಕಾನ್ಸನ್‌ಟ್ರೇಟರ್ ಪೂರೈಕೆಗೆ ಒಪ್ಪಿಗೆ

ಭಾರತಕ್ಕೆ ವಿವಿಧ ದೇಶಗಳ ನೆರವು

ಒಟ್ಟಾವ (ಕೆನಡಾ) (ಪಿಟಿಐ): ಕೋವಿಡ್ ಎರಡನೇ ಅಲೆ ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ₹7447.10 ಕೋಟಿ (10 ದಶಲಕ್ಷ ಡಾಲರ್) ನೆರವು ನೀಡಲು ಸಿದ್ಧವಿರುವುದಾಗಿ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಪ್ರಕಟಿಸಿದ್ದಾರೆ.



ಜಸ್ಟಿನ್ ಟ್ರುಡೊ

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರ್ಥಿಕ ನೆರವಿನ ಜತೆಗೆ, ಹೆಚ್ಚುವರಿ ವೈದ್ಯಕೀಯ ಸೌಲಭ್ಯಗಳನ್ನು ಪೂರೈಸುವುದು ಸೇರಿದಂತೆ ಯಾವುದೇ ರೀತಿಯಲ್ಲಿ ಭಾರತಕ್ಕೆ ನೆರವಾಗಲು ಸಿದ್ಧರಿದ್ದೇವೆ. ಇದಕ್ಕೆ ಸಂಬಂಧಿಸಿದಂತೆ ವಿದೇಶಾಂಗ ವ್ಯವಹಾರಗಳ ಸಚಿವ ಮಾರ್ಕ್ ಗರ್ನೇವು ಅವರು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ' ಎಂದು ಅವರು ಹೇಳಿದರು.

'ನಾವು ಕೆನಡಿಯನ್ ರೆಡ್ ಕ್ರಾಸ್ ಸಂಸ್ಥೆ ಮೂಲಕ ಭಾರತೀಯ ರೆಡ್ ಕ್ರಾಸ್ ಸಂಸ್ಥೆಗೆ ಈಗ ₹7447.10 ಕೋಟಿ ಹಣವನ್ನು ನೀಡಲು ಸಿದ್ಧರಿದ್ದೇವೆ. ಈ ಹಣ ಆಂಬುಲೆನ್ಸ್ ಸೇವೆಗಳು ಮತ್ತು ಸ್ಥಳೀಯವಾಗಿ ಪಿಪಿಇ ಕಿಟ್ ಖರೀದಿ ಸೇರಿದಂತೆ ಎಲ್ಲ ರೀತಿಯ ವೆಚ್ಚಗಳಿಗೂ ನೆರವಾಗುತ್ತದೆ' ಎಂದು ತಿಳಿಸಿದರು.

'ನೀವು ತುರ್ತು ಸಂದರ್ಭಗಳಿಗೆ ನೆರವಾಗುವುದಕ್ಕಾಗಿಯೇ ದೇಣಿಗೆ ನೀಡಲು ಬಯಸುವುದಾದರೆ www.redcross.ca ಜಾಲತಾಣಕ್ಕೆ ಭೇಟಿ ನೀಡಿ, ಮಾಹಿತಿ ಪಡೆಯಬಹುದು. ನಾವು ವಿಶ್ವವ್ಯಾಪಿ ಹೋರಾಟದಲ್ಲಿ ಕೈ ಜೋಡಿಸಿದ್ದೇವೆ' ಎಂದು ಟ್ರುಡೊ ಹೇಳಿದರು.

ಭಾರತಕ್ಕೆ ಎಲ್ಲ ರೀತಿಯ ನೆವಿಗೆ ಸಿದ್ಧ; ವಿಶ್ವಸಂಸ್ಥೆ: 'ಕೋವಿಡ್–19 ಪಿಡುಗಿನ ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ಸಾಧ್ಯವಿರುವ ಎಲ್ಲ ರೀತಿಯಲ್ಲೂ ಸಹಾಯಹಸ್ತ ಚಾಚಲು ವಿಶ್ವಸಂಸ್ಥೆ ಸಿದ್ಧವಿದೆ' ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಅವರ ಉಪ ವಕ್ತಾರ ಫರ್ಹಾನ್ ಹಕ್ ಹೇಳಿದ್ದಾರೆ.

'ಭಾರತದ ವಿವಿಧ ಹಂತದ ಅಧಿಕಾರಿಗಳೊಂದಿಗೆ ನಾವು ಸತತ ಸಂಪರ್ಕದಲ್ಲಿದ್ದೇವೆ. ನ್ಯೂಯಾರ್ಕ್ ಹಾಗೂ ಭಾರತದಲ್ಲಿರುವ ಸಂಬಂಧಪಟ್ಟ ಪ್ರತಿನಿಧಿಗಳೊಂದಿಗೂ ಮಾತುಕತೆ ನಡೆಸಿದ್ದೇವೆ' ಎಂದು ಅವರು ಹೇಳಿದ್ದಾರೆ.

ಅಮೆರಿಕದ 'ಸೇವಾ'ದಿಂದ ₹35 ಕೋಟಿ ಪರಿಹಾರ

ವಾಷಿಂಗ್ಟನ್: ಭಾರತದಲ್ಲಿ ಕೋವಿಡ್ ಎರಡನೇ ಅಲೆ ವಿರುದ್ಧ ನಡೆಯುತ್ತಿರುವ ಹೋರಾಟ ಹಾಗೂ ಪರಿಹಾರ ಕಾರ್ಯಗಳಿಗೆ ನೆರವಾಗಲು ಸೇವಾ ಇಂಟರ್‌ನ್ಯಾಷನಲ್ ಎಂಬ ಭಾರತೀಯ–ಅಮೆರಿಕ ಸ್ವಯಂ ಸೇವಾ ಸಂಸ್ಥೆ ಸಾಮಾಜಿಕ ಜಾಲತಾಣಗಳ ಮೂಲಕ 'ಕೋವಿಡ್ ಪರಿಹಾರ ನಿಧಿ'ಯಾಗಿ ₹35 ಕೋಟಿ(47 ಲಕ್ಷ ಡಾಲರ್) ಹಣವನ್ನು ಸಂಗ್ರಹಿಸಿದೆ.

'ಇಂಥ ಸಾಮೂಹಿಕ ಪ್ರಯತ್ನದ ಮೂಲಕ ಜೀವಗಳನ್ನು ಉಳಿಸಬಹುದು. ಹಸಿವಿನ ವಿರುದ್ಧ ಹೋರಾಡಿ ಗೆಲ್ಲಬಹುದು. ಸಂಕಟಪಡುತ್ತಿರುವ ಜನರಿಗೆ ಸಮಾಧಾನ ಹೇಳಿ, ಭರವಸೆ ತುಂಬಬಹುದು. ಅಲ್ಲದೆ ಕೋವಿಡ್ ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ನೆರವಾಗಬಹುದು' ಎಂದು ಸೇವಾ ಇಂಟರ್ ನ್ಯಾಷನಲ್ ಸಂಸ್ಥೆ ತಿಳಿಸಿದೆ.

ಪರಿಹಾರ ನಿಧಿ ಸಂಗ್ರಹಿಸುವ ಜತೆಗೆ, ಭಾರತಕ್ಕೆ ರವಾನಿಸುವುದಕ್ಕಾಗಿ ವೈದ್ಯಕೀಯ ಆಮ್ಲಜನಕ ತಯಾರಿಸುವ 2184 ಕಾನ್ಸನ್‌ಟ್ರೇಟರ್‌ಗಳನ್ನೂ ಸಂಗ್ರಹಿಸಿದೆ.

ಭಾರತದ ನೆರವಿಗಾಗಿ ರೆಡ್‌ಕ್ರಾಸ್‌ಗೆ ₹ 5 ಕೋಟಿ ದೇಣಿಗೆ: ನ್ಯೂಜಿಲೆಂಡ್

ಮೆಲ್ಬರ್ನ್/ವೆಲ್ಲಿಂಗ್ಟನ್ (ಪಿಟಿಐ): ಕೋವಿಡ್–19 ಪಿಡುಗಿನ ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ನೆರವು ನೀಡುವ ಸಲುವಾಗಿ ರೆಡ್ ಕ್ರಾಸ್ ಸಂಸ್ಥೆಗೆ ₹ 5 ಕೋಟಿ (ಹತ್ತು ಲಕ್ಷ ನ್ಯೂಜಿಲೆಂಡ್ ಡಾಲರ್) ನೀಡುವುದಾಗಿ ನ್ಯೂಜಿಲೆಂಡ್ ಘೋಷಿಸಿದೆ.

'ಇಂಥ ಸಂಕಷ್ಟದ ಸಮಯದಲ್ಲಿ ನಾವು ಭಾರತದೊಂದಿಗೆ ನಿಲ್ಲುತ್ತೇವೆ. ಈ ಪಿಡುಗಿನ ವಿರುದ್ಧ ಹೋರಾಡುತ್ತಿರುವ ವೈದ್ಯರು ಹಾಗೂ ಆರೋಗ್ಯ ಕ್ಷೇತ್ರದ ಕಾರ್ಯಕರ್ತರ ಕಾರ್ಯ ಶ್ಲಾಘನೀಯ' ಎಂದು ನ್ಯೂಜಿಲೆಂಡ್‌ನ ವಿದೇಶಾಂಗ ಸಚಿವೆ ನ್ಯಾನಿಯಾ ಮಹುತಾ ಬುಧವಾರ ಹೇಳಿದರು.

'ರೆಡ್‌ಕ್ರಾಸ್ ಸಂಸ್ಥೆ ಸಂಕಷ್ಟದಲ್ಲಿರುವ ದೇಶಗಳಿಗೆ ನೆರವು ನೀಡುವ ಅಂತರರಾಷ್ಟ್ರೀಯ ಸಂಘಟನೆಯಾಗಿದ್ದು, ತನ್ನ ಕಾರ್ಯಗಳಿಗಾಗಿ ಅದು ಜಾಗತಿಕ ಮನ್ನಣೆಯನ್ನೂ ಪಡೆದಿದೆ. ಹೀಗಾಗಿ ಸಂಘಟನೆಗೆ ದೇಣಿಗೆ ನೀಡುವ ಮೂಲಕ ಭಾರತಕ್ಕೆ ನಾವು ನಿಜವಾದ ನೆರವು ನೀಡಬಹುದಾಗಿದೆ' ಎಂಬ ಮಹುತಾ ಅವರ ಹೇಳಿಕೆಯನ್ನು ಉಲ್ಲೇಖಿಸಿ ನ್ಯೂಜಿಲೆಂಡ್ ಹೆರಾಲ್ಡ್ ಪತ್ರಿಕೆ ವರದಿ ಮಾಡಿದೆ.

'ನಿರ್ದಿಷ್ಟವಾದ ನೆರವಿಗಾಗಿ ಭಾರತದಿಂದ ಇದುವರೆಗೆ ಬೇಡಿಕೆ ಬಂದಿಲ್ಲ. ಯಾವುದೇ ಪರಿಹಾರ/ಆರೋಗ್ಯ ರಕ್ಷಣೆಗೆ ಸಂಬಂಧಿಸಿದ ಸಾಮಗ್ರಿಗಳನ್ನು ನಾವು ಭಾರತಕ್ಕೆ ಕಳುಹಿಸಿಲ್ಲ. ಆದರೆ, ಬೇಡಿಕೆ ಬಂದರೆ ತಕ್ಷಣ ಸ್ಪಂದಿಸಲು ಸಿದ್ಧ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬ್ರಿಟನ್ ಜೊತೆ ವ್ಯಾಪಾರ ಒಪ್ಪಂದಕ್ಕೆ ಐರೋಪ್ಯ ಒಕ್ಕೂಟ ಅನುಮೋದನೆ

ಬ್ರಸೆಲ್ಸ್ (ಎಪಿ): ಐರೋಪ್ಯ ಒಕ್ಕೂಟದಿಂದ ಹೊರ ಬಂದಿರುವ (ಬ್ರೆಕ್ಸಿಟ್) ಬ್ರಿಟನ್‌ನೊಂದಿಗೆ ವ್ಯಾಪಾರ ನಡೆಸುವ ಕುರಿತ ಒಪ್ಪಂದಕ್ಕೆ ಒಕ್ಕೂಟವು ಅನುಮೋದನೆ ನೀಡಿದೆ.

ಈ ಒಪ್ಪಂದವನ್ನು ಕಳೆದ ಕ್ರಿಸ್‌ಮಸ್ ವೇಳೆಯೇ ಅಂತಿಮಗೊಳಿಸಲಾಗಿತ್ತು. ಬ್ರಿಟನ್‌ನ ಸಂಸತ್‌ನ ಅನುಮೋದನೆ ದೊರೆತ ನಂತರ, ಕೆಲವು ನಿಬಂಧನೆಗಳಿಗೆ ಒಳಪಟ್ಟು ಈ ಒಪ್ಪಂದವನ್ನು ಜಾರಿಗೊಳಿಸಲಾಗಿತ್ತು.


ಐರೋಪ್ಯ ಒಕ್ಕೂಟದ ಅನುಮೋದನೆಯೂ ದೊರಕಿರುವುದರಿಂದ, ಒಪ್ಪಂದ ಜಾರಿಗೆ ಅಡ್ಡಿಯಾಗಿದ್ದ ಎಲ್ಲ ಕಾನೂನು ತೊಡಕುಗಳು ನಿವಾರಣೆಯಾದಂತಾಗಿವೆ.

ಅಸ್ಸಾಂನಲ್ಲಿ ಭೂಕಂಪ: ಕಟ್ಟಡಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಸ್ಸಾಂನಲ್ಲಿ ಬುಧವಾರ ಬೆಳಿಗ್ಗೆ ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 6.4 ತೀವ್ರತೆ ದಾಖಲಾಗಿದೆ. ಭೂಕಂಪನದಿಂದ ಹಲವರು ಗಾಯಗೊಂಡಿದ್ದು, ಕಟ್ಟಡಗಳು ಹಾನಿಗೊಂಡಿವೆ. 1960ರ ನಂತರ ಅಸ್ಸಾಂನಲ್ಲಿ ಸಂಭವಿಸಿದ ಪ್ರಬಲ ಭೂಕಂಪನವಿದು ಎಂದು ಹೇಳಲಾಗಿದೆ.

'ಯಾವುದೇ ದೊಡ್ಡಮಟ್ಟದ ಹಾನಿ ಸಂಭವಿಸಿಲ್ಲ. ಗಾಯಾಳುಗಳನ್ನು ತಕ್ಷಣವೇ ಆಸ್ಪತ್ರೆಗೆ ಸೇರಿಸಲಾಗಿದೆ. ಹಾನಿಗೊಳಗಾದ ಪ್ರದೇಶದ ಪರಿಶೀಲನೆ ನಡೆಸಿ, ವಿವರವಾದ ವರದಿ ಸಲ್ಲಿಸುವಂತೆ ಜಿಲ್ಲಾಡಳಿತಕ್ಕೆ ನಿರ್ದೇಶಿಸಲಾಗಿದೆ. ಸಂತ್ರಸ್ತರಿಗೆ ಅಗತ್ಯ ಸಹಾಯ ಮತ್ತು ಬೆಂಬಲವನ್ನು ನೀಡುವಂತೆಯೂ ತಿಳಿಸಲಾಗಿದೆ' ಎಂದು ಅಸ್ಸಾಂ ಮುಖ್ಯಮಂತ್ರಿ ಸರ್ಬಾನಂದ ಸೊನೊವಾಲ್ ತಿಳಿಸಿದ್ದಾರೆ.



ಭೂಕಂಪದಿಂದ ಹಾನಿಯಾಗಿರುವ ಕಟ್ಟಡವನ್ನು ಎಸ್‌ಡಿಆರ್‌ಎಫ್ ಸಿಬ್ಬಂದಿ ಮತ್ತು ಪೊಲೀಸರು ಪರಿಶೀಲನೆ ನಡೆಸಿದರು —ಪಿಟಿಐ ಚಿತ್ರ

ಜ್ಯುಬಿಲೆಂಟ್ ವಿರುದ್ಧ ಕ್ರಮ: ಸಚಿವ ಸುಧಾಕರ್

ಪ್ರಜಾವಾಣಿ ವಾರ್ತೆ


ಬೆಂಗಳೂರು: ರೆಮ್‌ಡಿಸಿವಿರ್ ಚುಚ್ಚುಮದ್ದು ಪೂರೈಸುವಂತೆ ಸೂಚಿಸಿದರೂ ಒಂದೇ ಔಷಧ ನೀಡದ ಜ್ಯುಬಿಲೆಂಟ್ ಕಂಪನಿ ವಿರುದ್ಧ ಬಿಗಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಇಡೀ ದೇಶದಲ್ಲಿ ಎಂಟು ಕಂಪನಿಗಳು ರೆಮ್‌ಡಿಸಿವಿರ್ ತಯಾರಿಸುತ್ತವೆ. ರಾಜ್ಯಕ್ಕೆ ಬೇಕಾದ ಚುಚ್ಚುಮದ್ದು ಪೂರೈಸುವಂತೆ ಸೂಚಿಸಿದ್ದರೂ ಜ್ಯುಬಿಲೆಂಟ್ ಸ್ಪಂದಿಸಿಲ್ಲ' ಎಂದರು.

'ಕೇಂದ್ರ ಸರ್ಕಾರ ರಾಜ್ಯಕ್ಕೆ 1.22 ಲಕ್ಷ ವಯಲ್‌ಗಳನ್ನು ಹಂಚಿಕೆ ಮಾಡಿದೆ. ರಾಜ್ಯದಲ್ಲಿ 3 ಲಕ್ಷ ಕೋವಿಡ್ ರೋಗಿಗಳಿದ್ದಾರೆ. ಕೆಲ ಸೋಂಕಿತರು ಯಾವುದೇ ವೈದ್ಯಕೀಯ ಮಾರ್ಗದರ್ಶನ ಇಲ್ಲದೆ ಮನೆಯಲ್ಲೇ ರೆಮ್ ಡಿಸಿವಿರ್ ಪಡೆಯುತ್ತಿರುವುದು ಗೊತ್ತಾಗಿದೆ. ಮನೆಯಲ್ಲಿ ದಾಸ್ತಾನು ಮಾಡುವುದು, ವೈದ್ಯರಿಂದ ಬರೆಸಿಕೊಂಡು ಔಷಧ ಪಡೆಯುವುದನ್ನು ಸಾರ್ವಜನಿಕರು ಮಾಡಬಾರದು. ವೈದ್ಯರು ಕೂಡ ಈ ರೀತಿ ಔಷಧಿ ಬರೆದು ಕೊಡಬಾರದು. ಅಗತ್ಯ ಇರುವವರಿಗೆ ಮಾತ್ರ ನೀಡಬೇಕು' ಎಂದು ಎಚ್ಚರಿಕೆ ನೀಡಿದರು.

ಹೆಚ್ಚುವರಿಯಾಗಿ 1.80 ಲಕ್ಷ ವಯಲ್ ರೆಮ್‌ಡಿಸಿವಿರ್ ಪೂರೈಕೆಗೆ ಆದೇಶಿಸಲಾಗಿದೆ ಎಂದೂ ಅವರು ಹೇಳಿದರು.

ಷೇರುಪೇಟೆ ವಹಿವಾಟು ▲ 790



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,653
ಇಂದಿನ ಅಂತ್ಯ	14,864
▲	211
ದಿನದ ಗರಿಷ್ಠ	14,890

ವಿನಿಮಯ ದರ

$ ಡಾಲರ್	74.36
£ ಪೌಂಡ್	103.30
€ ಯುರೊ	89.75
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹420
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹422

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	14.97ಕೋಟಿ ▲	1.82ಕೋಟಿ ▲
ಸಕ್ರಿಯ ಪ್ರಕರಣ	1.92ಕೋಟಿ ▲	30.58ಲಕ್ಷ ▲
ಗುಣಮುಖ	12.72 ಕೋಟಿ ▲	1.49ಕೋಟಿ ▲
ಸಾವು	31.54 ಲಕ್ಷ ▲	2.02 ಲಕ್ಷ ▲
ದಿನದ ಏರಿಕೆ: ಹೊಸ ಪ್ರಕರಣ	8.37ಲಕ್ಷ ▲	2.25 ಲಕ್ಷ ▼
ಗುಣಮುಖ	8.14ಲಕ್ಷ ▲	1.36 ಲಕ್ಷ ▼
ಸಾವು	14,837 ▲	1,337 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ಅಮೆರಿಕ	ಫ್ರಾನ್ಸ್
76,085 ▼	52,046 ▼	30,317 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಫ್ರಾನ್ಸ್
68.17 ▲	10.58 ▼	9.88 ▼

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಾವು
ಮಹಾರಾಷ್ಟ್ರ, ದೆಹಲಿ, ಪಂಜಾಬ್, ಛತ್ತೀಸಗಡ, ಮಧ್ಯಪ್ರದೇಶ, ಹರಿಯಾಣ, ಅಸ್ಸಾಂ, ಜಾರ್ಖಂಡ್, ಉತ್ತರಾಖಂಡ, ಮಣಿಪುರ, ಅರುಣಾಚಲ ಪ್ರದೇಶ ಮಾಹಿತಿ ಲಭ್ಯವಾಗಿಲ್ಲ

ಒಂದು ವಾರದಿಂದ ಧಾರಣೆ ಇಳಿಮುಖ; ಮಾರುಕಟ್ಟೆಯಲ್ಲಿ ಬೇಡಿಕೆಯೂ ಇಲ್ಲ

ಲಾಕ್‌ಡೌನ್: ಮಾವಿನ ಬೆಲೆ ಕುಸಿತ

● ಆರ್.ಜಿತೇಂದ್ರ

ರಾಮನಗರ: ರಾಜ್ಯದಾದ್ಯಂತ ಮಾವು ಧಾರಣೆ ಇಳಿಮುಖವಾಗಿದ್ದು, ಲಾಕ್‌ಡೌನ್‌ನಿಂದಾಗಿ ಬೆಲೆ ಇನ್ನಷ್ಟು ಕುಸಿಯುವ ಆತಂಕ ಎದುರಾಗಿದೆ.

ರಾಮನಗರ ಜಿಲ್ಲೆಯಲ್ಲಿ ಈಗಾಗಲೇ ಅರ್ಧದಷ್ಟು ಮಾವು ಕಟಾವು ಆಗಿದ್ದು, ರಾಜ್ಯದ ಉಳಿದ ಭಾಗಗಳಲ್ಲೂ ಮೇ ಮೊದಲ ವಾರದಿಂದ ಕೊಯ್ಲು ಆರಂಭ ಆಗಲಿದೆ. ಈ ನಡುವೆ ಕಳೆದೊಂದು ವಾರದಿಂದ ಬೆಲೆ ಕುಸಿಯುತ್ತಿರುವುದು ರೈತರನ್ನು ಆತಂಕಕ್ಕೆ ಈಡು ಮಾಡಿದೆ.

ರಾಮನಗರ ಜಿಲ್ಲೆ ಒಂದರಲ್ಲಿಯೇ ಈ ವರ್ಷ 2 ಲಕ್ಷ ಟನ್ ಮಾವು ಉತ್ಪಾದನೆ ಆಗಿದ್ದು, ಇಲ್ಲಿನ ಶೇಕಡ 90ರಷ್ಟು ಮಾವು ಹೊರ ರಾಜ್ಯಗಳಿಗೆ ಸಾಗಣೆ ಆಗುತ್ತಿದೆ. ಒಂದೊಮ್ಮೆ ಲಾಕ್‌ಡೌನ್‌ನಿಂದ ರಾಜ್ಯಗಳ ಗಡಿ ಮುಚ್ಚಿದರೆ ಸರಬರಾಜು ಕಷ್ಟ ಆಗಬಹುದು ಎನ್ನುವ ಕಾರಣಕ್ಕೆ ಮಹಾರಾಷ್ಟ್ರ ಭಾಗದ ವರ್ತಕರು ಖರೀದಿಗೆ ಹಿಂದೇಟು ಹಾಕುತ್ತಿದ್ದಾರೆ. ಹೀಗಾಗಿ ಧಾರಣೆ ಕಡಿಮೆ ಆಗುತ್ತಿದೆ. ಕಳೆದೊಂದು ವಾರದ ಅವಧಿಯಲ್ಲಿ ಬಾದಾಮಿ ತಳಿ ಪ್ರತಿ ಕೆ.ಜಿ.ಗೆ ₹ 30–40, ರಸಪುರಿ ₹ 20–30 ರಷ್ಟು ಬೆಲೆ ತಗ್ಗಿದೆ.

ಈಗ ರಾಜ್ಯದಾದ್ಯಂತ ಲಾಕ್‌ಡೌನ್ ಜಾರಿಯಾಗಿದೆ. ಹಣ್ಣಿಗೆ ಬೇಡಿಕೆ ಕುಸಿಯುವ ಸಾಧ್ಯತೆ ಇದೆ. ಹೊರ ರಾಜ್ಯಗಳಿಗೆ ಸರಕು ಸಾಗಣೆಗೆ ಗೊಂದಲಗಳು ಇವೆ. ಇದು ಹೀಗೆ ಮುಂದುವರಿದಲ್ಲಿ ಪರಿಸ್ಥಿತಿ ಕೈ ಮೀರಬಹುದು ಎನ್ನುವ ಆತಂಕ ರೈತರದ್ದು.

ಅವಧಿ ಪೂರ್ವ ಕೊಯ್ಲು: ಕಳೆದ ವರ್ಷ ಲಾಕ್‌ಡೌನ್‌ನಿಂದಾಗಿ ಮಾವಿನ ಬೆಲೆ ಕುಸಿದು ರೈತರು ಸಂಕಷ್ಟ ಅನುಭವಿಸಿದ್ದರು. ಹೀಗಾಗಿ ಈ ಬಾರಿ ಲಾಕ್‌ಡೌನ್ ಘೋಷಣೆ ಆಗುತ್ತಿದ್ದಂತೆಯೇ ರೈತರು ಅವಧಿ ಪೂರ್ವ ಕೊಯ್ಲಿಗೆ ಮುಂದಾಗಿದ್ದಾರೆ. ಇದರಿಂದಾಗಿ ಇಲ್ಲಿನ ಚನ್ನಪಟ್ಟಣ ಹಾಗೂ ರಾಮನಗರ ಮಾವು ಮಾರುಕಟ್ಟೆಗಳಿಗೆ ಮಾವಿನ ಆವಕ ದ್ವಿಗುಣಗೊಂಡಿದೆ.

ಮಾವಿನ ಧಾರಣೆ (ಪ್ರತಿ ಕೆ.ಜಿ.ಗೆ–₹ ಗಳಲ್ಲಿ)

ತಳಿ	ಎಪಿಎಂಸಿ (ಕಾಯಿ)	ಹಾಪ್‌ಕಾಮ್ಸ್ (ಹಣ್ಣು)
ಬಾದಾಮಿ	30-45	165
ರಸಪುರಿ	25-35	110
ಸೇಂದೂರ	15-25	70
ಮಲಗೋವಾ	30-40	199
ಮಲ್ಲಿಕಾ	25-30	140
ನಾಟಿ ಕಾಯಿ	9-10	40
ತೋತಾಪುರಿ	7-10	40

ಸಾಮಾನ್ಯವಾಗಿ ಏಪ್ರಿಲ್‌ನಲ್ಲಿ ಮಾವಿನ ಬೆಲೆ, ಬೇಡಿಕೆ ಹೆಚ್ಚಿರುತ್ತಿತ್ತು. ಈಗ ಬಾದಾಮಿ ಕಾಯಿ ಕೆ.ಜಿ.ಗೆ ₹ 30ಕ್ಕೆ ಹೋದರೆ ಹೆಚ್ಚು ಎಂಬಂತಾಗಿದೆ
ಲಕ್ಷ್ಮಿನಾರಾಯಣ, ರೈತ, ಬಾಳಲಿಂಗೇಗೌಡನ ದೊಡ್ಡಿ

ಕಾಯಿಗಳು ಹೆಚ್ಚಾಗಿ ಮಾವಿನ ಜ್ಯೂಸ್ ಫ್ಯಾಕ್ಟರಿಗಳಿಗೆ ಹೋಗುತ್ತಿದ್ದು, ಕಡಿಮೆ ಬೆಲೆಗೆ ಕೇಳುತ್ತಿದ್ದಾರೆ. ಸ್ಥಳೀಯವಾಗಿ ಬೇಡಿಕೆ ಕುಸಿಯುತ್ತಿದೆ
ಬೆಳ್ಳಿಯಪ್ಪ, ಮಾವು ವರ್ತಕ, ರಾಮನಗರ



ರಾಮನಗರ ತಾಲ್ಲೂಕಿನ ಆರೇಹಳ್ಳಿ ಗ್ರಾಮದ ತೋಟದಲ್ಲಿ ಮಾವಿನ ಕೊಯ್ಲಿನ ನಂತರ ಕ್ರೇಟ್ ಹೊತ್ತು ಸಾಗಿದ ಕಾರ್ಮಿಕರು —ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಚಿನ್ನದ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಬುಧವಾರ 10 ಗ್ರಾಂಗೆ ₹ 505ರಷ್ಟು ಇಳಿಕೆ ಆಗಿದೆ. 10 ಗ್ರಾಂ ಚಿನ್ನವು ₹ 46,518ಕ್ಕೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ತಗ್ಗಿದ ಕಾರಣದಿಂದಾಗಿ ದೇಶಿ ಮಾರುಕಟ್ಟೆಯಲ್ಲಿಯೂ ಬೆಲೆಯಲ್ಲಿ ಇಳಿಕೆ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ. ಪ್ರತಿ ಕೆ.ಜಿ. ಬೆಳ್ಳಿಯ ಬೆಲೆಯಲ್ಲಿ ₹ 828ರಷ್ಟು ಇಳಿಕೆ ಆಗಿದ್ದು, ಕೆ.ಜಿ.ಗೆ ₹ 67,312ರಂತೆ ಮಾರಾಟವಾಗಿದೆ.

ಐಪಿಒ: ಸೆಬಿಗೆ ದಾಖಲೆ ಪತ್ರ ಸಲ್ಲಿಸಿದ ಜೊಮ್ಯಾಟೊ

ನವದೆಹಲಿ (ಪಿಟಿಐ): ಆಹಾರ ಉತ್ಪನ್ನಗಳನ್ನು ಮನೆಬಾಗಿಲಿಗೆ ತಲುಪಿಸುವ ಸೇವೆ ನೀಡುವ ಜೊಮ್ಯಾಟೊ ಕಂಪನಿಯು ತನ್ನ ಷೇರುಗಳನ್ನು ಸಾರ್ವಜನಿಕರ ಖರೀದಿಗೆ ಮುಕ್ತಗೊಳಿಸುವ (ಐಪಿಒ) ಪ್ರಕ್ರಿಯೆಯ ಭಾಗವಾಗಿ ಸೆಬಿ ಪ್ರಾಥಮಿಕ ದಾಖಲೆ ಪತ್ರಗಳನ್ನು ಸಲ್ಲಿಸಿದೆ.

ಕಂಪನಿಯು ಐಪಿಒ ಮೂಲಕ ₹ 8,250 ಕೋಟಿ ಸಂಗ್ರಹಿಸುವ ಗುರಿ ಇಟ್ಟುಕೊಂಡಿದೆ. ಹೊಸ ಷೇರುಗಳ ವಿತರಣೆಯ ಮೂಲಕ ₹ 7,500 ಕೋಟಿ ಹಾಗೂ ಇನ್ಫೊ ಎಡ್ಜ್ (ಇಂಡಿಯಾ) ಲಿಮಿಟೆಡ್ ಕಂಪನಿಯು ಜೊಮ್ಯಾಟೊದಲ್ಲಿ ಹೊಂದಿರುವ ಷೇರುಗಳನ್ನು ಆಫರ್ ಫಾರ್ ಸೇಲ್ (ಒಎಫ್‌ಸಿ) ಮೂಲಕ ₹ 750 ಕೋಟಿಗೆ ಮಾರಾಟ ಮಾಡುವ ಪ್ರಸ್ತಾವ ಸಲ್ಲಿಸಲಾಗಿದೆ.

ಪ್ರಭಾವಿ ಕಂಪನಿಗಳ ಪಟ್ಟಿಯಲ್ಲಿ ಜಿಯೊ, ಬೈಜುಸ್

ನವದೆಹಲಿ (ಪಿಟಿಐ): ಟೈಮ್ ನಿಯತಕಾಲಿಕೆ ಸಿದ್ಧಪಡಿಸಿರುವ 100 ಅತ್ಯಂತ ಪ್ರಭಾವಿ ಕಂಪನಿಗಳ ಪಟ್ಟಿಯಲ್ಲಿ ಭಾರತದ ರಿಲಯನ್ಸ್ ಇಂಡಸ್ಟ್ರೀಸ್ ಮಾಲೀಕತ್ವದ ಜಿಯೊ ಪ್ಲಾಟ್‌ಫಾರ್ಮ್ಸ್ ಮತ್ತು ಇ–ಕಲಿಕೆ ಕ್ಷೇತ್ರದ ನವೋದ್ಯಮ ಕಂಪನಿ 'ಬೈಜುಸ್' ಸ್ಥಾನ ಪಡೆದಿವೆ.

ಭವಿಷ್ಯವನ್ನು ರೂಪಿಸುತ್ತಿರುವ ಕಂಪನಿಗಳು ಈ ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿವೆ ಎಂದು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಈ ಪಟ್ಟಿಯನ್ನು ಸಿದ್ಧಪಡಿಸಲು 'ಟೈಮ್', ಆರೋಗ್ಯ ಸೇವೆ, ಮನರಂಜನೆ, ಸಾರಿಗೆ, ತಂತ್ರಜ್ಞಾನ ವಲಯಗಳಿಂದ ನಾಮನಿರ್ದೇಶನ ಆಹ್ವಾನಿಸಿತ್ತು. ಕಂಪನಿಗಳು ಎಷ್ಟರಮಟ್ಟಿಗೆ ಪ್ರಸ್ತುತವಾಗಿವೆ, ಅವುಗಳು ಬೀರಿರುವ ಪರಿಣಾಮ ಏನು, ಹೊಸದಾಗಿ ಏನನ್ನು ತಂದಿವೆ, ಅವುಗಳಲ್ಲಿನ ನಾಯಕತ್ವದ ಸ್ಥಾನಗಳಲ್ಲಿ ಯಾರಿದ್ದಾರೆ, ಕಂಪನಿಗಳು ಪಡೆದಿರುವ ಯಶಸ್ಸು ಹೇಗಿದೆ ಎಂಬ ಅಂಶಗಳನ್ನು ಪರಿಗಣಿಸಿ ಪಟ್ಟಿಯನ್ನು ಸಿದ್ಧಪಡಿಸಿದೆ.

ಪೈಥಾನ್–5 ಕ್ಷಿಪಣಿ ಒಯ್ಯಲು ತೇಜಸ್‌ಗೆ ಒಪ್ಪಿಗೆ

ನವದೆಹಲಿ: ದೇಶಿಯವಾಗಿ ಅಭಿವೃದ್ಧಿಪಡಿಸಲಾದ ಲಘು ಯುದ್ಧ ವಿಮಾನ ತೇಜಸ್ ಇನ್ನು ಮುಂದೆ ಪೈಥಾನ್–5 ಕ್ಷಿಪಣಿಯನ್ನು ಕೊಂಡೊಯ್ಯಲಿದೆ.

5ನೇ ಪೀಳಿಗೆಯ ಪೈಥಾನ್–5 ಶಸ್ತ್ರಾಸ್ತ್ರ ಕ್ಷಿಪಣಿಯನ್ನು ಆಕಾಶದಿಂದ ಆಕಾಶಕ್ಕೆ ಚಿಮ್ಮಿಸಬಹುದಾಗಿದೆ. ಈ ಕ್ಷಿಪಣಿಯನ್ನು ಕೊಂಡೊಯ್ಯಲು ಅವಕಾಶ ಕಲ್ಪಿಸಿರುವುದರಿಂದ ತೇಜಸ್‌ನ ಸಾಮರ್ಥ್ಯ ಹೆಚ್ಚಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗೋವಾದಲ್ಲಿ ಯುದ್ಧ ವಿಮಾನದ ಸಾಮರ್ಥ್ಯದ ಬಗ್ಗೆ ಸರಣಿ ಪರೀಕ್ಷೆಗಳನ್ನು ನಡೆಸಿದ ಬಳಿಕ ಈ ನಿರ್ಧಾರ ಕೈಗೊಳ್ಳಲಾಗಿದೆ. ಹಲವು ಕಠಿಣ ಸವಾಲುಗಳನ್ನು ಎದುರಿಸುವ ಸನ್ನಿವೇಶವನ್ನು ಸೃಷ್ಟಿಸಿ ಪರೀಕ್ಷೆಗಳನ್ನು ಕೈಗೊಳ್ಳಲಾಗಿತ್ತು. ಪೈಥಾನ್ ಕ್ಷಿಪಣಿಯ ಪರೀಕ್ಷೆಯ ಸಂದರ್ಭದಲ್ಲಿ ಶೇಕಡ 100ರಷ್ಟು ಫಲಿತಾಂಶ ದೊರೆತಿದೆ ಎಂದು ವಿವರಿಸಿದ್ದಾರೆ.

ಈ ಪ್ರಯೋಗಗಳ ಮುನ್ನ, ಬೆಂಗಳೂರಿನಲ್ಲಿಯೂ ವಿಸ್ತೃತವಾಗಿ ಕ್ಷಿಪಣಿಯನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ತೇಜಸ್ ಯುದ್ಧವಿಮಾನದ ವ್ಯವಸ್ಥೆಯ ಜತೆಗೆ ಕ್ಷಿಪಣಿಗಳನ್ನು ಸಮ್ಮಿಲನಗೊಳಿಸುವ ಕಾರ್ಯದ ಪರೀಕ್ಷೆ ನಡೆಸಲಾಗಿತ್ತು ಎಂದು ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಹೊಸತು	23500-40000
ಹಳತು	42500-50000
ಕುಮಟ	
ಚಿಪ್ಪು	26689-29869
ಕೋಕ	17099-27869
ಫ್ಯಾಕ್ಟರಿ	10169-15931
ಹಳೆಚಾಲಿ	38569-39599
ಹೊಸಚಾಲಿ	35000-39000
ಪುತ್ತೂರು	
ಕೋಕ	8500-24000
ಹೊಸತು	28000-40000
ಸಿದ್ದಾಪುರ	
ಬಿಳಿಗೋಟು	24289-30099
ಕೋಕ	16689-28599
ಚಾಲಿ	33299-35509
ಕೆಂಪುಗೋಟು	26899-29089
ರಾಶಿ	37699-40099
ತಟ್ಟಿಬೆಟ್ಟೆ	29999-35699
ಶಿವಮೊಗ್ಗ	
ಬೆಟ್ಟೆ	40119-42869
ಗೊರಬಲು	16869-31000
ರಾಶಿ	36209-40519
ಸರಕು	47699-73596
ರಾಮನಗರ ರೇಷ್ಮೆ	
ಮಿಶ್ರತಳಿ	156-243
ದ್ವಿತಳಿ	196-395

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	10400
ಎಸಿ	4145
ಆರ್‌ಪಿ	5100
ಆರ್‌ಸಿ	3000

ಕೊರೊನಾ ಸಾಂತ್ವನ

'ಗರ್ಭಿಣಿ, ಬಾಣಂತಿಯರ ಮೇಲಿರಲಿ ವಿಶೇಷ ಕಾಳಜಿ'



'ಕೋವಿಡ್ ಎರಡನೆ ಅಲೆಯಲ್ಲಿ ವೈರಾಣು ನಿರೀಕ್ಷೆಗೂ ಮೀರಿ ಹರಡುತ್ತಿದೆ. ಹಾಗಾಗಿ, ಮನೆಯಲ್ಲಿ ಗರ್ಭಿಣಿ ಅಥವಾ ಬಾಣಂತಿಯರಿದ್ದರೆ ಅವರ ಮೇಲೆ ವಿಶೇಷ ಕಾಳಜಿ ವಹಿಸಬೇಕು. ಜ್ವರ, ಕೆಮ್ಮಿನಂತಹ ಲಕ್ಷಣಗಳು ಕಾಣಿಸಿಕೊಂಡಲ್ಲಿ ಅಥವಾ ಉಸಿರಾಟದ ಸಮಸ್ಯೆ ಉಂಟಾದಲ್ಲಿ ಕೂಡಲೇ ಆಸ್ಪತ್ರೆಗೆ ಕರೆದೊಯ್ದು, ಕೋವಿಡ್ ಪರೀಕ್ಷೆ ಮಾಡಿಸಬೇಕು.'

'ಗರ್ಭಿಣಿಯರು ಹಾಗೂ ಬಾಣಂತಿಯರು ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಇರಿಸಬೇಕು. ಅವರಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುವುದರಿಂದ ಕೊರೊನಾ ಸೋಂಕು ಅಪಾಯ ಉಂಟುಮಾಡುವ ಸಾಧ್ಯತೆ ಹೆಚ್ಚು ಇರಲಿದೆ. ಹಾಗಾಗಿ, ಮನೆಯಲ್ಲಿಯೇ ನಿಗಾ ವ್ಯವಸ್ಥೆಗೆ ಒಳಪಡಬೇಕು. ಸೋಂಕು ತಗುಲಿದ ಬಳಿಕ ಚಿಕಿತ್ಸೆಯ ಬಗ್ಗೆ ಚಿಂತೆ ಮಾಡುವ ಬದಲು ಸೋಂಕಿತರಾಗದಂತೆ ಇರಲು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮೊದಲನೇ ಅಲೆಗೆ ಹೋಲಿಸಿದಲ್ಲಿ ಈಗ ಹೆಚ್ಚಿನ ಸಂಖ್ಯೆಯಲ್ಲಿ ಗರ್ಭಿಣಿಯರು ಮತ್ತು ಬಾಣಂತಿಯರು ಕೂಡ ಸೋಂಕಿತರಾಗಿರುತ್ತಿದ್ದಾರೆ. ತಡವಾಗಿ ಆಸ್ಪತ್ರೆಗೆ ಬಂದಲ್ಲಿ ಸಮಸ್ಯೆ ಸಂಕೀರ್ಣ ಸ್ವರೂಪ ಪಡೆದುಕೊಳ್ಳಲಿದೆ.'

'ಗರ್ಭಿಣಿಯರು ಹಾಗೂ ಬಾಣಂತಿಯರು ಅನಗತ್ಯವಾಗಿ ಮನೆಯಿಂದ ಹೊರಗಡೆ ಹೋಗಬಾರದು. ವೈದ್ಯರ ಸಲಹೆ ಪಡೆದೇ ಮಾತ್ರೆಗಳನ್ನು ಸೇವಿಸಬೇಕು. ಒಂದು ವೇಳೆ ಕೋವಿಡ್ ಪೀಡಿತರಾದರೂ ಸೋಂಕಿನ ತೀವ್ರತೆ ಅಷ್ಟಾಗಿ ಇರದಿದ್ದಲ್ಲಿ ಸಾಮಾನ್ಯ ಔಷಧವನ್ನೇ ನೀಡಲಾಗುತ್ತದೆ. ಬಿಸಿನೀರಿನ ಬಳಕೆ, ಪೌಷ್ಟಿಕ ಆಹಾರ ಸೇವನೆಗೆ ಸೂಚಿಸಲಾಗುತ್ತದೆ. ರಕ್ತದಲ್ಲಿನ ಆಮ್ಲಜನಕದ ಪ್ರಮಾಣವನ್ನು ಪ್ರತಿನಿತ್ಯ ಪರೀಕ್ಷೆ ಮಾಡಿಕೊಂಡು, ಏರಿಳಿತವನ್ನು ಗಮನಿಸಬೇಕು. ಎಲ್ಲ ಕೋವಿಡ್ ಪೀಡಿತರು ಆಸ್ಪತ್ರೆಗೆ ದಾಖಲಾಗಬೇಕಿಲ್ಲ. ಲಕ್ಷಣಗಳು ಅಷ್ಟಾಗಿ ಗೋಚರಿಸದಿದ್ದಲ್ಲಿ ಮನೆ ಆರೈಕೆಗೆ ಒಳಗಾಗಬಹುದು.'

'ಸಮಸ್ಯೆಗಳು ಕಾಣಿಸಿಕೊಂಡಲ್ಲಿ ಅಥವಾ ಪ್ರತಿ ತಿಂಗಳ ತಪಾಸಣೆಗೆ ಹತ್ತಿರ ಆರೋಗ್ಯ ಕೇಂದ್ರಗಳಿಗೆ ತೆರಳುವುದು ಉತ್ತಮ. ಕೋವಿಡ್ ಲಸಿಕೆಯ ಪ್ರಯೋಗ ಗರ್ಭಿಣಿಯರು ಮತ್ತು ಬಾಣಂತಿಯರ ಮೇಲೆ ನಡೆದಿಲ್ಲ. ಹಾಗಾಗಿ, ಅವರಿಗೆ ಲಸಿಕೆ ನೀಡುತ್ತಿಲ್ಲ. ಎಲ್ಲ ರೀತಿಯಲ್ಲಿಯೂ ಸುರಕ್ಷತೆ ಇದ್ದಲ್ಲಿ ಅಂತರ ಕಾಯ್ದುಕೊಳ್ಳುವ ಮುಲಕ ತಾಯಿ ಮತ್ತು ಮಗು ಒಂದೇ ಕೋಣೆಯಲ್ಲೇ ಇರಬಹುದು. ಇಲ್ಲವಾದಲ್ಲಿ ಪ್ರತ್ಯೇಕವಾಗಿ ಇರಬೇಕಾಗುತ್ತದೆ.

'ಒಂದು ವೇಳೆ ತಾಯಿ ಕೋವಿಡ್ ಪೀಡಿತರಾದರೂ ಮುಖಗವಸು ಧರಿಸುವ ಜತೆಗೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿ, ಮಗುವಿಗೆ ಸ್ತನ್ಯಪಾನ ಮಾಡಿಸಬಹುದು. ತಾಯಿ ತೀವ್ರವಾದ ಅನಾರೋಗ್ಯಕ್ಕೆ ಒಳಗಾಗಿದ್ದಲ್ಲಿ ಬೇರೆ ವಿಧಾನಗಳ ಮೂಲಕ ಸ್ತನ್ಯಪಾನ ಮಾಡಿಸಬೇಕಾಗುತ್ತದೆ.'

ಡಾ. ಗೀತಾ ಶಿವಮೂರ್ತಿ, ವಾಣಿವಿಲಾಸ ಆಸ್ಪತ್ರೆಯ ವೈದ್ಯ ಅಧೀಕ್ಷಕಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಬೀದಿಗಳಲ್ಲಿ ಸಾಯುತ್ತಿರುವ ರೋಗಿಗಳು

ರಾಷ್ಟ್ರ ರಾಜಧಾನಿಯಲ್ಲಿ ಕೊರೊನಾ ಪೀಡಿತರಿಗಿಲ್ಲ ಸೂಕ್ತ ಚಿಕಿತ್ಸಾ ವ್ಯವಸ್ಥೆ, ಕೈಚೆಲ್ಲಿದ ಆಸ್ಪತ್ರೆಗಳು

• ಶೆಮಿನ್ ಜಾಯ್

ನವದೆಹಲಿ: ಕೊರೊನಾದ ಎರಡನೇ ಅಲೆಯ ಅಬ್ಬರದಿಂದಾಗಿ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಪರಿಸ್ಥಿತಿ ಮತ್ತಷ್ಟು ಭೀಕರವಾಗಿದೆ. ಆಸ್ಪತ್ರೆಗಳಲ್ಲಿ ಹಾಸಿಗೆಗಳು ಮತ್ತು ಆಮ್ಲಜನಕದ ಕೊರತೆಯಿಂದಾಗಿ ಕೆಲವೆಡೆ ಕೋವಿಡ್ ರೋಗಿಗಳು ಬೀದಿಯಲ್ಲೇ ಜೀವಬಿಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ದಿನಸಿ ಅಂಗಡಿ ಮಾಲೀಕರಾದ ಎಂ.ಬಿ. ಪ್ರಕಾಶ್ ಎಂಬುವರ 75 ವರ್ಷದ ತಂದೆ ಬಾಲನ್ ಅವರಿಗೆ ಕೋವಿಡ್‌ನಿಂದಾಗಿ ಉಸಿರಾಟದ ಸಮಸ್ಯೆ ಎದುರಾಗಿತ್ತು. ತಮ್ಮ ಅತ್ತಿಗೆಯ ಜತೆಗೂಡಿ ಪ್ರಕಾಶ್ ಅವರು ತಂದೆಯನ್ನು ದಾಖಲಿಸಲು 5 ಗಂಟೆಗಳ ಕಾಲ ದೆಹಲಿಯ ವಿವಿಧ ಆಸ್ಪತ್ರೆಗಳನ್ನು ಸುತ್ತಿದರೂ ಒಂದು ಆಸ್ಪತ್ರೆಯಲ್ಲೂ ಹಾಸಿಗೆ ಸಿಗಲಿಲ್ಲ. 15 ವರ್ಷಗಳ ಹಿಂದೆ ಕೇರಳ ಬಿಟ್ಟು ದೆಹಲಿಯಲ್ಲಿ ತಮ್ಮ ಜೊತೆ ಇರಲು ಬಂದಿದ್ದ ತಂದೆಯನ್ನು ಪ್ರಕಾಶ್ ಅವರಿಗೆ ಉಳಿಸಿಕೊಳ್ಳಲು ಕೊನೆಗೂ ಸಾಧ್ಯವಾಗಲಿಲ್ಲ.

ವಿವರ: ಬಾಲನ್ ಅವರು ಮಗ ಪ್ರಕಾಶ್ ಮತ್ತು ಕುಟುಂಬ ಸದಸ್ಯರೊಂದಿಗೆ ಈಶಾನ್ಯ ದೆಹಲಿಯ ದಿಲ್‌ಷಾದ್ ಗಾರ್ಡನ್‌ನಲ್ಲಿ ವಾಸವಿದ್ದರು. ಕೋವಿಡ್ ಪೀಡಿತರಾಗಿದ್ದ ಅವರಿಗೆ ಸೋಮವಾರ ರಾತ್ರಿ ಇದ್ದಕ್ಕಿದ್ದಂತೆ ಆರೋಗ್ಯ ಹದಗೆಟ್ಟಿತು.

ಪ್ರಕಾಶ್ ತಮ್ಮ ತಂದೆಯನ್ನು ಆಸ್ಪತ್ರೆಗೆ ದಾಖಲಿಸಲು ಪ್ರಯತ್ನಿಸಿದರೂ ಸಕಾಲಕ್ಕೆ ಚಿಕಿತ್ಸೆ ದೊರೆಯಲಿಲ್ಲ. ಮಂಗಳವಾರ ಮುಂಜಾನೆ 4ರ ಹೊತ್ತಿಗೆ ಬಾಲನ್ ಅವರು ದಯಾನಂದ ಆಸ್ಪತ್ರೆಯ ಆಂಬುಲೆನ್ಸ್‌ನಲ್ಲಿಯೇ ಕೊನೆಯುಸಿರೆಳೆದರು.

ಮುಖ್ಯಾಂಶಗಳು

- ರೋಗಿಗಳಿಗೆ ಆಮ್ಲಜನಕದ ತೀವ್ರ ಕೊರತೆ
- ರೋಗಿಗಳನ್ನು ದಾಖಲಿಸಿಕೊಳ್ಳಲು ಹಿಂದೇಟು ಹಾಕಿದ ಆಸ್ಪತ್ರೆಗಳು
- ಶವಸಂಸ್ಕಾರಕ್ಕೂ ಪರದಾಟ

ಬಾಲನ್ ಅವರಿಗೆ ಆಮ್ಲಜನಕ ಸಿಲಿಂಡರ್ ಹೊಂದಿಸಲು ಅವರ ಕುಟುಂಬವು 18 ಗಂಟೆಗಳ ಕಾಲ ಪ್ರಯತ್ನಿಸಿತು. ಆದರೆ, ಅದೃಷ್ಟವು ಅವರ ಕಡೆ ಇರಲಿಲ್ಲ. ಪ್ರಕಾಶ್ ಅವರು ಆಂಬುಲೆನ್ಸ್‌ಗಾಗಿ ಹಲವೆಡೆ ಕರೆ ಮಾಡಿದರೂ ಲಭ್ಯವಾಗಲಿಲ್ಲ. ವಾಟ್ಸ್‌ಆ್ಯಪ್‌ನಲ್ಲಿ ಪಡೆದ ಪ್ರತಿಯೊಂದು ಮೊಬೈಲ್ ನಂಬರ್‌ಗೆ ಕರೆ ಮಾಡಿದರೂ ಯಾರೂ ಪ್ರತಿಕ್ರಿಯಿಸಲಿಲ್ಲ.

'ಅಂತಿಮವಾಗಿ ಸ್ಥಳೀಯ ರಾಜಕಾರಣಿಯೊಬ್ಬರು ಆಂಬುಲೆನ್ಸ್ ವ್ಯವಸ್ಥೆ ಮಾಡಿದರು. ಅದೇ ಆಂಬುಲೆನ್ಸ್‌ನಲ್ಲಿ ದೆಹಲಿಯ ಕಾರ್ಕಾಡೂರ್ಮಾದ ಇಎಸ್‌ಐಸಿ ಆಸ್ಪತ್ರೆ, ಯಮುನಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನ ಕೋವಿಡ್ ಆರೈಕೆ ಕೇಂದ್ರ, ಗುರು ತೇಜ್ ಬಹಾದ್ದೂರ್ ಆಸ್ಪತ್ರೆ ಹಾಗೂ ಜಿಟಿಬಿ ಆಸ್ಪತ್ರೆಗೆ ಧಾವಿಸಿದರೂ ಎಲ್ಲೂ ಹಾಸಿಗೆ ಲಭ್ಯವಿಲ್ಲ ಎಂಬ ಉತ್ತರ ದೊರೆಯಿತು. ಅಲ್ಲಿಂದ ದಯಾನಂದ ಆಸ್ಪತ್ರೆಗೆ ಹೋದಾಗ ತಂದೆಯ ಆರೋಗ್ಯ ಕ್ಷೀಣಿಸಿತ್ತು. ಆಂಬುಲೆನ್ಸ್‌ನಲ್ಲಿಯೇ ತಂದೆಯನ್ನು ಪರೀಕ್ಷಿಸಿದ ವೈದ್ಯರು, 'ಆಮ್ಲಜನಕ ಮಟ್ಟ ಕುಸಿದಿದ್ದು, ತಾವು ಅಸಹಾಯಕರು' ಎಂದು ಕೈಚೆಲ್ಲಿದರು. ಹಾಗೇ ಹೇಳಿದ ಕೆಲವೇ ಕ್ಷಣಗಳಲ್ಲಿ ನಮ್ಮ ತಂದೆ ಕೊನೆಯುಸಿರೆಳೆದರು' ಎಂದು ಪ್ರಕಾಶ್ 'ಪ್ರಜಾವಾಣಿ'ಗೆ ವಿವರಿಸಿದರು.



ನವದೆಹಲಿಯಲ್ಲಿ ಬುಧವಾರ ಕೋವಿಡ್‌ನಿಂದ ಸಾವಿಗೀಡಾದ ವ್ಯಕ್ತಿಯೊಬ್ಬರ ಮೃತದೇಹವನ್ನು ಸಂಬಂಧಿಕರು ಆ್ಯಂಬುಲೆನ್ಸ್‌ನಿಂದ ಇಳಿಸಿಕೊಳ್ಳುತ್ತಿರುವ ದೃಶ್ಯ – ರಾಯಿಟರ್ಸ್ ಚಿತ್ರ

ಮುಗಿಯದ ಅಗ್ನಿಪರೀಕ್ಷೆ...

ತಂದೆ ಬಾಲನ್ ಅವರ ಸಾವಿನಿಂದ ಚೇತರಿಸಿಕೊಳ್ಳುವ ಮುನ್ನವೇ ಪ್ರಕಾಶ್ ಅವರು ಮತ್ತೊಂದು ಅಗ್ನಿಪರೀಕ್ಷೆ ಎದುರಿಸಬೇಕಾಯಿತು. ತಂದೆಯ ಮೃತದೇಹವನ್ನು ಮತ್ತೊಂದು ಆಂಬುಲೆನ್ಸ್‌ಗೆ ಸ್ಥಳಾಂತರಿಸಲು ಅವರ ಸಹಾಯಕ್ಕೆ ಯಾರೂ ಬರಲಿಲ್ಲ.

ಆಂಬುಲೆನ್ಸ್ ಚಾಲಕ ಪಿಪಿಇ ಕಿಟ್ ಸಹ ಧರಿಸಿರಲಿಲ್ಲ. ಕೊನೆಗೆ ಮೃತದೇಹವನ್ನು ಸ್ಥಳಾಂತರಿಸಲು ಪ್ರಕಾಶ್‌ಗೆ ಅವರ ಅತ್ತಿಗೆ ನೆರವಾದರು. ಅಂತ್ಯಸಂಸ್ಕಾರಕ್ಕೆಂದು ಸೀಮಾಪುರಿಯ ಶವಾಗಾರಕ್ಕೆ ತೆರಳಿದರೆ ಅಲ್ಲೂ ಸ್ಥಳ ಲಭ್ಯವಿರಲಿಲ್ಲ. ತಮ್ಮ ಸರದಿಗಾಗಿ ಪ್ರಕಾಶ್ ಕಾಯುವಂತಾಯಿತು.

'ಇಲ್ಲಿನ ಶವಸಂಸ್ಕಾರದ ದೃಶ್ಯಗಳು ಹೃದಯ ಕದಡುವಂತಿವೆ. ಮೃತದೇಹಗಳ ರಾಶಿಯೇ ಇಲ್ಲಿದೆ. ಹೆಣವನ್ನು ಸುಟ್ಟರೂ ಅವುಗಳ ಎಲ್ಲಾ ಭಾಗಗಳೂ ಸಂಪೂರ್ಣವಾಗಿ ಸುಡುವುದಿಲ್ಲ. ಏಕೆಂದರೆ ಪ್ರತಿ ನಿಮಿಷಕ್ಕೆ ಇಲ್ಲಿ ಒಂದು ಹೊಸ ಮೃತದೇಹವನ್ನು ಸುಡುವ ಸ್ಥಿತಿ ಉಂಟಾಗಿದೆ. ಸ್ಮಶಾನ ಸಿಬ್ಬಂದಿಯೂ ತೀವ್ರ ಒತ್ತಡದಲ್ಲಿದ್ದಾರೆ. ತಂದೆಯ ಅಂತ್ಯಸಂಸ್ಕಾರ ಮಾಡಲು ಸಿಬ್ಬಂದಿಯೊಂದಿಗೆ ನಾನೂ ಕೈಜೋಡಿಸಿದೆ' ಎಂದು ಪ್ರಕಾಶ್ ನುಡಿದರು.

ಕೇಂದ್ರದ 'ತರಾತುರಿ'ಗೆ ವಿರೋಧ ಪಕ್ಷಗಳ ಆಕ್ಷೇಪ

ಲಾಕ್‌ಡೌನ್ ನಡುವಲ್ಲೇ ಸಂಸತ್ ಭವನ ಕಾಮಗಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಕೋವಿಡ್ ತಡೆಗಾಗಿ ಲಾಕ್‌ಡೌನ್ ಹೇರಿದ್ದರೂ ಸಂಸತ್ತಿನ ಹೊಸ ಭವನ ನಿರ್ಮಾಣ ಕಾಮಗಾರಿ ಮತ್ತು ಸೆಂಟ್ರಲ್ ವಿಸ್ತಾ ಪುನರ್ ವಿನ್ಯಾಸ ಯೋಜನೆಗೆ ಯಾವುದೇ ತೊಡಕು ಉಂಟಾಗಿಲ್ಲ. ಕಾಮಗಾರಿಯು ಮುಂದುವರಿದಿದೆ. ಆದರೆ, ಇದು ವಿರೋಧ ಪಕ್ಷಗಳ ಆಕ್ಷೇಪಕ್ಕೆ ಕಾರಣವಾಗಿದೆ.

ದೇಶವು ಕೋವಿಡ್–19ರ ಎರಡನೇ ಅಲೆಯಲ್ಲಿ ತತ್ತರಿಸುತ್ತಿರುವಾಗ ಸಂಸತ್ ಭವನ ನಿರ್ಮಾಣಕ್ಕೆ ಸರ್ಕಾರ ತರಾತುರಿ ತೋರುತ್ತಿದೆ ಎಂದು ವಿರೋಧ ಪಕ್ಷಗಳ ನಾಯಕರು ಆರೋಪಿಸಿದ್ದಾರೆ. ಈ ಅನಗತ್ಯ ಯೋಜನೆಯ ಹಣವನ್ನು ಬಳಸಿಕೊಂಡು ಜನರಿಗೆ ಆಮ್ಲಜನಕ ಮತ್ತು ಇತರ ಆರೋಗ್ಯ ಸೇವೆಗಳನ್ನು ಒದಗಿಸಿ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಆಗ್ರಹಿಸಿದ್ದಾರೆ.

ಸಂಸತ್ ಭವನ ಮತ್ತು ರಾಜಪಥದ ನಿವೇಶನಗಳಲ್ಲಿ ನೂರಾರು ಕಾರ್ಮಿಕರು ದಿನದ 24 ತಾಸೂ ಕೆಲಸ ಮಾಡುತ್ತಿದ್ದಾರೆ.

ನಿರ್ಮಾಣ ಕಾಮಗಾರಿಯನ್ನು ಅಗತ್ಯ ಸೇವೆ ಎಂದು ಲಾಕ್‌ಡೌನ್ ಮಾರ್ಗಸೂಚಿಯಲ್ಲಿ ವರ್ಗೀಕರಿಸಲಾಗಿದೆ. ಆದರೆ, ನಿರ್ಮಾಣ ನಿವೇಶನದಲ್ಲಿಯೇ ಕಾರ್ಮಿಕರಿಗೆ ವಸತಿ ವ್ಯವಸ್ಥೆ ಇದ್ದರೆ ಮಾತ್ರ ಕಾಮಗಾರಿಗೆ ಅವಕಾಶ ಇದೆ. ಸಂಸತ್ ಭವನ ನಿರ್ಮಾಣ ಸ್ಥಳದಲ್ಲಿ ಕೆಲವೇ ಕಾರ್ಮಿಕರಿಗೆ ಮಾತ್ರ ವಸತಿ ವ್ಯವಸ್ಥೆ ಇದೆ. ಹೆಚ್ಚಿನವರನ್ನು ಕೀರ್ತಿ ನಗರ ಮತ್ತು ಸಮೀಪದ ಇತರ ಸ್ಥಳಗಳಿಂದ ಪ್ರತಿ ದಿನವೂ ಬಸ್‌ಗಳಲ್ಲಿ ಕರೆ ತರಲಾಗುತ್ತಿದೆ.

'ಇಲ್ಲಿ ನೆಲೆಸುವುದು ಕಷ್ಟ. ಇಲ್ಲಿ ಯಾವುದೇ ಸೌಲಭ್ಯ ಇಲ್ಲ. ಜತೆಗೆ ಇದು ಅತಿ ಹೆಚ್ಚು ಭದ್ರತೆ ಇರುವ ಪ್ರದೇಶ. ಕೆಲಸ ಮುಗಿದ ಬಳಿಕ ಇಲ್ಲಿ ಅಡ್ಡಾಡುವುದಕ್ಕೂ ಆಗದು' ಎಂದು ಸಂಸತ್ ಭವನದ ನಿವೇಶನದಲ್ಲಿ ಕೆಲಸ ಮಾಡುವ ಉತ್ತರ ಪ್ರದೇಶದ ಸೋನು ಯಾದವ್ ಹೇಳಿದ್ದಾರೆ.


ಯೋಜನೆ ಪ್ರಕಾರ, 2023ರ ಅಕ್ಟೋಬರ್‌ಗೆ ಹೊಸ ಸಂಸತ್ ಭವನ, 2022ರ ಜನವರಿ 26ಕ್ಕೆ ಸೆಂಟ್ರಲ್ ವಿಸ್ತಾ ಮರು ವಿನ್ಯಾಸ ಕೆಲಸಗಳು ಪೂರ್ಣಗೊಳ್ಳಬೇಕಿವೆ.

'ಗಡುವಿನೊಳಗೆ ನಾವು ಕಾಮಗಾರಿ ಪೂರ್ಣಗೊಳಿಸಲೇಬೇಕಿದೆ. ಈ ಪ್ರತಿಷ್ಠಿತ ಯೋಜನೆಯ ಕಾಮಗಾರಿಯು ವೇಗವಾಗಿ ನಡೆಯಬೇಕು ಎಂದು ಸರ್ಕಾರವು ಬಯಸಿದೆ, ಕಾಮಗಾರಿ ನಿಲ್ಲಿಸುವ ಯೋಚನೆಯೇ ಇಲ್ಲ' ಎಂದು ಕಾಮಗಾರಿಯ ಉಸ್ತುವಾರಿ ಹೊತ್ತಿರುವ ಕೇಂದ್ರ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ.

ಟಾಟಾ ಪ್ರಾಜೆಕ್ಟ್ಸ್ ಸಂಸ್ಥೆಯು ₹861.90 ಕೋಟಿ ವೆಚ್ಚದಲ್ಲಿ ಸಂಸತ್ ಭವನ ನಿರ್ಮಾಣದ ಗುತ್ತಿಗೆ ಪಡೆದಿದೆ. ಸೆಂಟ್ರಲ್ ವಿಸ್ತಾ (ರಾಜಪಥ) ಪ್ರದೇಶದ ಮರು ವಿನ್ಯಾಸದ ಗುತ್ತಿಗೆಯನ್ನು ಶಾಪೂರ್ಜಿ ಪಲ್ಲೊಂಜಿ ಎಂಡ್ ಕಂಪನಿಯು ₹608 ಕೋಟಿಗೆ ಗುತ್ತಿಗೆ ಪಡೆದಿದೆ.

ಮರುವಿನ್ಯಾಸ ಯೋಜನೆಯನ್ನು ₹20 ಸಾವಿರ ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸುವ ಭಾರಿ ಯೋಜನೆಯನ್ನೂ ಸರ್ಕಾರ ಹೊಂದಿದೆ. ಹಲವು ಕಟ್ಟಡಗಳನ್ನು ಕೆಡವಿ, ಹೊಸ ಕಟ್ಟಡಗಳನ್ನು ನಿರ್ಮಿಸುವುದು ಈ ಯೋಜನೆಯ ಉದ್ದೇಶ. ಹಲವು ಕಟ್ಟಡಗಳು ಶಿಥಿಲವಾಗಿವೆ, ಇಲ್ಲಿ ಅಗ್ನಿ ಮತ್ತು ಭೂಕಂಪ ಸುರಕ್ಷತೆಯೂ ಇಲ್ಲ ಎಂಬುದು ಸರ್ಕಾರದ ವಾದವಾಗಿದೆ.

'ಮುನ್ನೋಟದ ಸರ್ಕಾರ ಅಗತ್ಯ'



ರಾಹುಲ್

ನವದೆಹಲಿ (ಪಿಟಿಐ): 'ಸೆಂಟ್ರಲ್ ವಿಸ್ತಾ ಯೋಜನೆಯು ಈಗ ಅಗತ್ಯವೇನೂ ಅಲ್ಲ; ಆದರೆ, ಮುನ್ನೋಟ ಇರುವ ಕೇಂದ್ರ ಸರ್ಕಾರ ಈಗಿನ ಅಗತ್ಯ' ಎಂದು ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

ಕುರುಡು ವ್ಯವಸ್ಥೆಯ ವಾಸ್ತವವನ್ನು ಬಯಲಾಗಿಸಿ. ಜನರು ಪರಸ್ಪರರಿಗೆ ಸಹಕರಿಸಿ. ಒಬ್ಬರ ಹೃದಯ ಮುಟ್ಟಲು ಅವರ ಕೈಮುಟ್ಟುವ ಅಗತ್ಯವೇನೂ ಇಲ್ಲ ಎಂದೂ ರಾಹುಲ್ ಹೇಳಿದ್ದಾರೆ. ಕೇಂದ್ರ ಸರ್ಕಾರವು ಕೋವಿಡ್ ಅನ್ನು ನಿರ್ವಹಿಸಿದ ರೀತಿಯನ್ನು ರಾಹುಲ್ ಅವರು ನಿರಂತರವಾಗಿ ಟೀಕಿಸುತ್ತಲೇ ಬಂದಿದ್ದಾರೆ.

ದೆಹಲಿಯಲ್ಲಿ ಇನ್ನು ಲೆಫ್ಟಿನೆಂಟ್ ಗವರ್ನರ್ 'ಸರ್ಕಾರ'

ನವದೆಹಲಿ (ಪಿಟಿಐ): ರಾಷ್ಟ್ರೀಯ ರಾಜಧಾನಿ ದೆಹಲಿ (ತಿದ್ದುಪಡಿ) ಕಾಯ್ದೆ–2021 ಮಂಗಳವಾರದಿಂದ (ಏ.27) ಜಾರಿಗೆ ಬಂದಿದ್ದು, ಚುನಾಯಿತ ಸರ್ಕಾರಕ್ಕಿಂತ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸುವ ಲೆಫ್ಟಿನೆಂಟ್ ಗವರ್ನರ್‌ಗೆ ಈ ಕಾಯ್ದೆ ಹೆಚ್ಚಿನ ಅಧಿಕಾರ ನೀಡುತ್ತದೆ. ಈ ಕುರಿತು ಕೇಂದ್ರ ಗೃಹ ಸಚಿವಾಲಯ ಅಧಿಸೂಚನೆ ಪ್ರಕಟಿಸಿದೆ.

ಈ ಕಾಯ್ದೆ ಪ್ರಕಾರ, ದೆಹಲಿಯಲ್ಲಿ 'ಸರ್ಕಾರ' ಎಂದರೆ 'ಲೆಫ್ಟಿನೆಂಟ್ ಗವರ್ನರ್'. ಇನ್ನು ಮುಂದೆ ನಗರಕ್ಕೆ ಸಂಬಂಧಿಸಿ ಯಾವುದೇ ನಿರ್ಧಾರ ಕೈಗೊಳ್ಳಬೇಕಾದರೆ, ಅನುಷ್ಠಾನಕ್ಕಾಗಿ ಅಲ್ಲಿನ ಸರ್ಕಾರ ಲೆಫ್ಟಿನೆಂಟ್ ಗವರ್ನರ್ ಅವರ ಅಭಿಪ್ರಾಯದಂತೆ ನಡೆಯಬೇಕಾಗುತ್ತದೆ.

ಪ್ರತಿಪಕ್ಷಗಳ ತೀವ್ರ ವಿರೋಧದ ನಡುವೆ ಈ ಮಸೂದೆಯನ್ನು ಮಾರ್ಚ್ 22ರಂದು ಲೋಕಸಭೆಯಲ್ಲಿ ಅಂಗೀಕರಿಸಲಾಯಿತು. ನಂತರ, ರಾಜ್ಯಸಭೆಯಲ್ಲಿ ಮಾರ್ಚ್ 24ರಂದು ಅಂಗೀಕರಿಸಲಾಯಿತು.

ಪಿಎಂ ಕೇರ್ಸ್ ಫಂಡ್‌ನಿಂದ 500 ಆಮ್ಲಜನಕ ಸ್ಥಾವರ ಸ್ಥಾಪನೆ: ಮೋದಿ

1 ಲಕ್ಷ ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳ ಸಂಗ್ರಹ



ನರೇಂದ್ರ ಮೋದಿ

ನವದೆಹಲಿ (ಪಿಟಿಐ): 'ಪಿ.ಎಂ ಕೇರ್ಸ್ ಫಂಡ್‌ನಿಂದ ಕೇಂದ್ರ ಸರ್ಕಾರವು ಒಂದು ಲಕ್ಷ ಪೋರ್ಟಬಲ್ ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು ಸಂಗ್ರಹಿಸಲಿದ್ದು, ಇನ್ನೂ ಹೆಚ್ಚುವರಿಯಾಗಿ 500 ಪ್ರೆಶರ್ ಸ್ವಿಂಗ್ ಅಡ್‌ಸ್ರಾರ್ಪ್ಷನ್ (ಪಿಎಸ್‌ಎ) ಆಮ್ಲಜನಕ ಸ್ಥಾವರಗಳನ್ನು ಸ್ಥಾಪಿಸಲಾಗುವುದು' ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಕೋವಿಡ್–19 ನಿರ್ವಹಣೆಗಾಗಿ ದ್ರವ ವೈದ್ಯಕೀಯ ಆಮ್ಲಜನಕದ ಪೂರೈಕೆಯನ್ನು ಸುಧಾರಿಸಲು ಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಪ್ರಧಾನಿ ಕಚೇರಿಯ ಪ್ರಕಟಣೆ ತಿಳಿಸಿದೆ.

'ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳ ಸಂಗ್ರಹ ಮತ್ತು ಆಮ್ಲಜನಕ ಸ್ಥಾವರಗಳ ಸ್ಥಾಪನೆಯು ಜಿಲ್ಲಾ ಕೇಂದ್ರಗಳು ಮತ್ತು ಎರಡನೇ ಶ್ರೇಣಿ ನಗರಗಳಲ್ಲಿ (2 ಟಯರ್ ಸಿಟಿ) ಆಮ್ಲಜನಕದ ಕೊರತೆಯ ಸ್ಥಿತಿಯನ್ನು ಸುಧಾರಿಸಲಿದೆ. ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು ಶೀಘ್ರವಾಗಿ ಖರೀದಿಸಬೇಕು ಮತ್ತು ಹೆಚ್ಚಿನ ಅಗತ್ಯ ಇರುವ ರಾಜ್ಯಗಳಿಗೆ ಇವುಗಳನ್ನು ಒದಗಿಸಬೇಕು ಎಂದು ಮೋದಿ ನಿರ್ದೇಶಿಸಿದ್ದಾರೆ' ಎಂದೂ ಪ್ರಕಟಣೆ ತಿಳಿಸಿದೆ.

ಡಿಆರ್‌ಡಿಒ ಮತ್ತು ಸಿಎಸ್‌ಐಆರ್ ಅಭಿವೃದ್ಧಿಪಡಿಸಿದ ಸ್ಥಳೀಯ ತಂತ್ರಜ್ಞಾನವನ್ನು ದೇಶೀಯ ತಯಾರಕರಿಗೆ ವರ್ಗಾಯಿಸುವುದರೊಂದಿಗೆ 500 ಹೊಸ ಪಿಎಸ್‌ಎ ಆಮ್ಲಜನಕ ಸ್ಥಾವರಗಳನ್ನು ಸ್ಥಾಪಿಸಲಾಗುತ್ತದೆ.

500 ಹಾಸಿಗೆಗಳ ಆಸ್ಪತ್ರೆ ನಿರ್ಮಾಣ: ಶ್ರೀನಗರ: ಜಮ್ಮು, ಕಾಶ್ಮೀರದಲ್ಲಿ 500 ಹಾಸಿಗೆಗಳ ಎರಡು ಕೋವಿಡ್ ಆಸ್ಪತ್ರೆಗಳನ್ನು ಸ್ಥಾಪಿಸಲು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮುಂದಾಗಿದೆ.

ಉನ್ನತ ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಅವರು ಈ ವಿಷಯ ಪ್ರಸ್ತಾಪಿಸಿದ್ದಾರೆ.

ರಸಗೊಬ್ಬರ ಕಂಪನಿಗಳಿಂದ ಪ್ರತಿ ದಿನ 50 ಟನ್ ಆಮ್ಲಜನಕ ಪೂರೈಕೆ

ನವದೆಹಲಿ: ದೇಶದಲ್ಲಿನ ರಸಗೊಬ್ಬರ ಕಂಪನಿಗಳು ಇನ್ನು ಮುಂದೆ ಪ್ರತಿ ದಿನ 50 ಟನ್ ವೈದ್ಯಕೀಯ ಆಮ್ಲಜನಕವನ್ನು ಆಸ್ಪತ್ರೆಗಳಿಗೆ ಪೂರೈಸಲಿವೆ.

ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ಆಮ್ಲಜನಕಕ್ಕೆ ಅಪಾರ ಬೇಡಿಕೆ ಇದೆ. ಹೀಗಾಗಿ, ರಸಗೊಬ್ಬರ ಕಂಪನಿಗಳು ಈ ಕ್ರಮಕ್ಕೆಗೊಂಡಿವೆ. ಇದರಿಂದ, ಆಸ್ಪತ್ರೆಗಳಲ್ಲಿನ ಆಮ್ಲಜನಕ ಕೊರತೆ ನೀಗಿಸಲು ಸಹಾಯವಾಗಲಿದೆ ಎಂದು ರಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಮನ್ಸುಖ್ ಮಂದಾವಿಯಾ ಬುಧವಾರ ತಿಳಿಸಿದ್ದಾರೆ.

ಸರ್ಕಾರಿ ಸ್ವಾಮ್ಯದ ಮತ್ತು ಖಾಸಗಿ ಹಾಗೂ ಸಹಕಾರಿ ಕ್ಷೇತ್ರದಲ್ಲಿನ ರಸಗೊಬ್ಬರ ಕಂಪನಿಗಳ ಮುಖ್ಯಸ್ಥರ ಜತೆ ಸಚಿವರು ಸಭೆ ನಡೆಸಿ, ಆಮ್ಲಜನಕ ಉತ್ಪಾದನೆ ಸಾಧ್ಯತೆಗಳ ಬಗ್ಗೆ ಚರ್ಚೆ ನಡೆಸಿದರು.

ಪ್ರತಿ ಗಂಟೆಗೆ 200 ಕ್ಯೂಬಿಕ್ ಮೀಟರ್‌ನಷ್ಟು ಉತ್ಪಾದನೆ ಸಾಮರ್ಥ್ಯದ ಘಟಕವನ್ನು ಇಫ್ಕೊ ಗುಜರಾತ್‌ನ ಕಲೋಲ್‌ನಲ್ಲಿ ಸ್ಥಾಪಿಸಲಿದೆ. ಪ್ರತಿ ದಿನಕ್ಕೆ 33,000 ಕ್ಯೂಬಿಕ್ ಮೀಟರ್ ಸಾಮರ್ಥ್ಯ ಇದು ಹೊಂದಲಿದೆ ಎಂದು ಸಚಿವ ಮನ್ಸುಖ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾರಾಷ್ಟ್ರ: ಲಾಕ್‌ಡೌನ್ 15 ದಿನ ವಿಸ್ತರಣೆ

ಮುಂಬೈ: ಮಹಾರಾಷ್ಟ್ರದಲ್ಲಿ ಕೋವಿಡ್–19 ನಿಯಂತ್ರಿಸಲು ಜಾರಿಗೊಳಿಸಿರುವ ಲಾಕ್‌ಡೌನ್ ಅನ್ನು ಏಪ್ರಿಲ್ 30ರ ಬಳಿಕವೂ 15 ದಿನ ವಿಸ್ತರಿಸಲಾಗುವುದು ಎಂದು ಆರೋಗ್ಯ ಸಚಿವ ರಾಜೇಶ್ ಟೋಪೆ ಬುಧವಾರ ಹೇಳಿದ್ದಾರೆ.

ಉಚಿತ ಲಸಿಕೆ: 18ರಿಂದ 44 ವರ್ಷದೊಳಗಿನವರಿಗೆ ಉಚಿತವಾಗಿ ಕೋವಿಡ್–19 ಲಸಿಕೆ ನೀಡಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ ಎಂದು ರಾಜ್ಯ ಆರೋಗ್ಯ ಸಚಿವ ರಾಜೇಶ್ ಟೋಪೆ ಬುಧವಾರ ತಿಳಿಸಿದ್ದಾರೆ.

'ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಉಚಿತ ಲಸಿಕೆಗಾಗಿ ₹ 6,500 ಕೋಟಿ ವೆಚ್ಚವಾಗಲಿದೆ' ಎಂದೂ ಹೇಳಿದ್ದಾರೆ.

'ಲಸಿಕೆ ಹಾಕಿಸಿಕೊಂಡರೆ ಕೋವಿಡ್ ಹರಡುವಿಕೆ ಸಾಧ್ಯತೆ ಕಮ್ಮಿ'

ಲಂಡನ್ (ಪಿಟಿಐ): ಆಸ್ಟ್ರಾಜೆನೆಕಾ ಕಂಪನಿಯ ಕೋವಿಶೀಲ್ಡ್ ಲಸಿಕೆ ಮತ್ತು ಫೈಝರ್ ಕಂಪನಿಯ ಕೋವಿಡ್ ಲಸಿಕೆಯ ಮೊದಲ ಡೋಸ್ ಹಾಕಿಸಿಕೊಂಡರೆ, ಕೊರೊನಾ ವೈರಾಣು ಹರಡುವ ಸಾಧ್ಯತೆ ಶೇ 50ರಷ್ಟು ಕಡಿಮೆಯಾಗುತ್ತದೆ ಎಂದು ಬ್ರಿಟನ್‌ನ ಸಾರ್ವಜನಿಕ ಆರೋಗ್ಯ ಇಲಾಖೆ ಹೇಳಿದೆ.

ಲಸಿಕೆಯ ಪರಿಣಾಮಗಳ ಬಗ್ಗೆ ನಡೆಸಿದ ಅಧ್ಯಯನ ವರದಿಯನ್ನು ಆಧರಿಸಿ ಇಲಾಖೆ ಹೀಗೆ ಹೇಳಿದೆ. ಅಧ್ಯಯನ ವರದಿಯು ಲ್ಯಾನ್ಸೆಟ್ ನಿಯತಕಾಲಿಕದಲ್ಲಿ ಪ್ರಕಟವಾಗಿದೆ. 24,000 ಕುಟುಂಬಗಳ 57,000 ಜನರನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿತ್ತು.

'ಈ ಎರಡರಲ್ಲಿ ಒಂದು ಲಸಿಕೆಯ ಮೊದಲ ಡೋಸ್ ಪಡೆದುಕೊಂಡಿದ್ದವರಿಗೆ ಕೋವಿಡ್ ತಗುಲಿದ್ದರೂ, ಅವರಿಂದ ಕೋವಿಡ್ ಬೇರೆಯವರಿಗೆ ತಗಲುವ ಸಾಧ್ಯತೆಯಲ್ಲಿ ಶೇ 50ರಷ್ಟು ಇಳಿಕೆಯಾಗುತ್ತದೆ. ಲಸಿಕೆ ಹಾಕಿಸಿಕೊಂಡ ಮೂರು ವಾರದ ನಂತರ, ಕೋವಿಡ್ ಹರಡುವ ಸಾಧ್ಯತೆಯಲ್ಲಿ ಶೇ 38ರಿಂದ ಶೇ 49ರಷ್ಟು ಕಡಿಮೆಯಾಗುತ್ತದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

'ಲಸಿಕೆಯ ಒಂದು ಡೋಸ್ ಪಡೆದುಕೊಂಡರೆ, ಕೋವಿಡ್ ರೋಗಿಯಿಂದ ಅವರ ಮನೆಯವರಿಗೆ ಸೋಂಕು ಹರಡುವ ಸಾಧ್ಯತೆ ಶೇ 50ರಷ್ಟು ಕಡಿಮೆಯಾಗುತ್ತದೆ. ಲಸಿಕೆ ಹಾಕಿಸಿಕೊಳ್ಳುವುದರಿಂದ ಹಾಕಿಸಿಕೊಂಡ ವ್ಯಕ್ತಿ ಮಾತ್ರವಲ್ಲದೆ, ಅವರ ಕುಟುಂಬದವರಿಗೂ ಸ್ವಲ್ಪ ರಕ್ಷಣೆ ದೊರೆಯುತ್ತದೆ. ಹೀಗಾಗಿ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಿ. ಲಸಿಕೆ ಹಾಕಿಸಿಕೊಂಡವರಲ್ಲಿ ಕೋವಿಡ್ ದೃಢ ಪಟ್ಟರೂ, ಕೋವಿಡ್‌ನ ಲಕ್ಷಣಗಳು ಕಾಣಿಸಿಕೊಳ್ಳುವ ಪ್ರಮಾಣ ಅತ್ಯಂತ ಕಡಿಮೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

'ನಾವು ಸಾಮಾನ್ಯ ಬದುಕಿಗೆ ಮರಳಲು ಲಸಿಕೆ ನೆರವು ನೀಡುತ್ತದೆ. ಆದರೆ, ಲಸಿಕೆ ಪಡೆದುಕೊಂಡಿದ್ದರೂ ಕೋವಿಡ್ ಹರಡುವ ಸಾಧ್ಯತೆ ಇದೆ. ಹೀಗಾಗಿ ಮಾಸ್ಕ್ ಧರಿಸುವುದು, ಕೈತೊಳೆಯುವುದು ಮತ್ತು ಪರಸ್ಪರ ಅಂತರ ಕಾಯ್ದುಕೊಳ್ಳುವುದನ್ನು ಪಾಲಿಸಲೇಬೇಕು' ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಮುಖ್ಯಾಂಶಗಳು

- ಬ್ರಿಟನ್ ಆರೋಗ್ಯ ಇಲಾಖೆಯ ಅಧ್ಯಯನ ವರದಿಯಲ್ಲಿ ಉಲ್ಲೇಖ
- ಕೋವಿಶೀಲ್ಡ್,ಫೈಝರ್ ಲಸಿಕೆ ಹಾಕಿಸಿ ಕೊಂಡವರ ಮೇಲೆ ಅಧ್ಯಯನ
- ಲಸಿಕೆಯ ಒಂದು ಡೋಸ್ ಹಾಕಿಸಿಕೊಂಡರೂ ಹಲವು ಅನುಕೂಲಗಳು



ಸಾಂದರ್ಭಿಕ ಚಿತ್ರ

ನಾಲ್ವರಲ್ಲಿ ಒಬ್ಬರಿಗೆ ಅಡ್ಡಪರಿಣಾಮ

'ಈ ಎರಡೂ ಲಸಿಕೆ ಹಾಕಿಸಿಕೊಂಡ ಪ್ರತಿ ನಾಲ್ವರಲ್ಲಿ ಒಬ್ಬರಿಗೆ ಸೌಮ್ಯ ಸ್ವಭಾವದ ಅಡ್ಡಪರಿಣಾಮಗಳು ಕಾಣಿಸಿಕೊಳ್ಳುತ್ತವೆ' ಎಂದು ಅಧ್ಯಯನ ವರದಿಯಲ್ಲಿ ಹೇಳಲಾಗಿದೆ.

'ಲಸಿಕೆ ಹಾಕಿಸಿಕೊಂಡ 24 ಗಂಟೆಗಳ ಒಳಗೆ ತಲೆನೋವು, ದಣಿವು ಮತ್ತು ಸಣ್ಣ ಜ್ವರ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಒಂದು ಅಥವಾ ಎರಡು ದಿನದಲ್ಲಿ ಈ ಅಡ್ಡ ಪರಿಣಾಮಗಳು ನಿವಾರಣೆಯಾಗುತ್ತವೆ. 50 ವರ್ಷ ಮೇಲ್ಪಟ್ಟವರಲ್ಲಿ ಅಡ್ಡಪರಿಣಾಮಗಳು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚು' ಎಂದು ಅಧ್ಯಯನ ವರದಿ ಹೇಳಿದೆ.

ಪ್ರಜಾ ಮತ

ಜನತಂತ್ರದ ಹಬ್ಬ 2021

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ: 8ನೇ ಹಂತದ ಮತದಾನ ಇಂದು

ಬಿಜೆಪಿಯ ಪಾಲು ಹೆಚ್ಚಳ: ಇತರರಿಗೆ ಚಿಂತೆ

• ಶೋಮು ದಾಸ್

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಎಂಟನೇ ಹಂತದಲ್ಲಿ ಗುರುವಾರ ಮತದಾನ ನಡೆಯಲಿರುವ 35 ವಿಧಾನಸಭಾ ಕ್ಷೇತ್ರಗಳಲ್ಲಿ, ಬಿಜೆಪಿಯ ಮತಪಾಲು ಮೂರು ಪಟ್ಟು ಹೆಚ್ಚಾಗಿರುವುದು ಟಿಎಂಸಿ ಹಾಗೂ ಎಡಪಕ್ಷ– ಕಾಂಗ್ರೆಸ್ ಮೈತ್ರಿಕೂಟಕ್ಕೆ ಸವಾಲಾಗಿದೆ.

2016ರ ಚುನಾವಣೆಯಲ್ಲಿ ಈ 35 ಕ್ಷೇತ್ರಗಳಲ್ಲಿ ಒಂದು ಕ್ಷೇತ್ರದಲ್ಲಿ ಮಾತ್ರ ಬಿಜೆಪಿ ಗೆದ್ದಿತ್ತು. 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಇಲ್ಲಿ ಬಿಜೆಪಿಯ ಮತಪಾಲು ಶೇ 11.48ರಿಂದ ಶೇ 30.77ಕ್ಕೆ ಹೆಚ್ಚಿದೆ.

ನಾಲ್ಕು ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಈ 35 ಕ್ಷೇತ್ರಗಳ ಪೈಕಿ 17ರಲ್ಲಿ ಕಳೆದ ಬಾರಿ ಟಿಎಂಸಿ ಗೆದ್ದಿತ್ತು. ಕಾಂಗ್ರೆಸ್ 13 ಹಾಗೂ ಮೂರು ಕ್ಷೇತ್ರಗಳನ್ನು ಎಡ ಪಕ್ಷಗಳು ಗೆದ್ದಿದ್ದವು.

ಒಂದು ಕ್ಷೇತ್ರದಲ್ಲಿ ಕಾಂಗ್ರೆಸ್–ಎಡಪಕ್ಷ ಬೆಂಬಲಿತ ಪಕ್ಷೇತರ ಅಭ್ಯರ್ಥಿಯೊಬ್ಬರು ಗೆದ್ದಿದ್ದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು 11, ಟಿಎಂಸಿ 19 ಹಾಗೂ ಕಾಂಗ್ರೆಸ್ 5 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದವು. ಆದರೆ ಆ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಎಡಪಕ್ಷಗಳ ಮೈತ್ರಿ ಇರಲಿಲ್ಲ. ಎಡಪಕ್ಷಗಳು ಶೇ 5.15ರಷ್ಟು ಹಾಗೂ ಕಾಂಗ್ರೆಸ್ ಶೇ 19.45ರಷ್ಟು ಮತಗಳನ್ನು ಪಡೆದಿದ್ದವು.

2016ರ ವಿಧಾನಸಭಾ ಚುನಾವಣೆಯಲ್ಲಿ ಮಾಲ್ಡಾ ಜಿಲ್ಲೆಯ ಆರರಲ್ಲಿ ನಾಲ್ಕು ಸ್ಥಾನಗಳನ್ನು ಕಾಂಗ್ರೆಸ್, ಒಂದು ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಇನ್ನೊಂದರಲ್ಲಿ ಪಕ್ಷೇತರ ಅಭ್ಯರ್ಥಿ ಗೆದ್ದಿದ್ದರು. ಟಿಎಂಸಿ ಇಲ್ಲಿ ಶೂನ್ಯ ಸಾಧನೆ ಮಾಡಿತ್ತು.

ಆದರೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ನಾಲ್ಕರಲ್ಲಿ ಹಾಗೂ ಕಾಂಗ್ರೆಸ್ ಎರಡು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದವು.

2016ರಲ್ಲಿ, ಟಿಎಂಸಿಯ ಭದ್ರಕೋಟೆ ಎಂದು ಭಾವಿಸಲಾಗಿರುವ ಬಿರ್‌ಭೂಮ್ ಜಿಲ್ಲೆಯ 11 ಕ್ಷೇತ್ರಗಳಲ್ಲಿ 9ರಲ್ಲಿ ಟಿಎಂಸಿ ಗೆಲುವು ಪಡೆದಿತ್ತು. ಕಾಂಗ್ರೆಸ್ ಹಾಗೂ ಸಿಪಿಎಂ ತಲಾ ಒಂದು ಕ್ಷೇತ್ರ ಗೆದ್ದಿದ್ದವು. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಐದರಲ್ಲಿ ಹಾಗೂ ಟಿಎಂಸಿ 6 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದವು.

ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಕೋಲ್ಕತ್ತದ ಎಲ್ಲಾ 7 ಕ್ಷೇತ್ರಗಳಲ್ಲಿ ಟಿಎಂಸಿ ಗೆಲುವು ದಾಖಲಿಸಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಇವುಗಳಲ್ಲಿ 2 ಕ್ಷೇತ್ರಗಳಲ್ಲಿ ಮಾತ್ರ ಮುನ್ನಡೆ ಸಾಧಿಸಲು ಬಿಜೆಪಿಗೆ ಸಾಧ್ಯವಾಗಿತ್ತು. ಉಳಿದ ಐದು ಕ್ಷೇತ್ರಗಳಲ್ಲಿ ಟಿಎಂಸಿ ತನ್ನ ಪ್ರಾಬಲ್ಯ ಉಳಿಸಿಕೊಂಡಿತ್ತು.

ಅಭ್ಯರ್ಥಿ ಸಾವು: ಆಯೋಗದ ವಿರುದ್ಧ ಕೊಲೆ ಪ್ರಕರಣಕ್ಕೆ ಒತ್ತಾಯ

ಕೋಲ್ಕತ್ತ (ಪಿಟಿಐ): 'ನನ್ನ ಪತಿಯ ಸಾವಿಗೆ ಚುನಾವಣಾ ಆಯೋಗವೇ ಕಾರಣ. ಆಯೋಗದ ವಿರುದ್ಧ, ಉದ್ದೇಶಪೂರ್ವಕವಲ್ಲದ ಹತ್ಯೆ ಪ್ರಕರಣ ದಾಖಲಿಸಿ' ಎಂದು ಕೋವಿಡ್‌ನಿಂದ ಮೃತಪಟ್ಟ ಪಶ್ಚಿಮ ಬಂಗಾಳದ ಟಿಎಂಸಿ ಅಭ್ಯರ್ಥಿಯ ಪತ್ನಿ ಪೊಲೀಸರಿಗೆ ದೂರು ನೀಡಿದ್ದಾರೆ.

ಕೋವಿಡ್ ಹರಡಲು ಚುನಾವಣಾ ಆಯೋಗದ ನಿರ್ಲಕ್ಷ್ಯವೇ ಕಾರಣ. ಆಯೋಗದ ಅಧಿಕಾರಿಗಳ ವಿರುದ್ಧ ಹತ್ಯೆ ಪ್ರಕರಣ ದಾಖಲಿಸಿದರೂ ತಪ್ಪಿಲ್ಲ ಎಂದು ಮದ್ರಾಸ್ ಹೈಕೋರ್ಟ್ ಛೀಮಾರಿ ಹಾಕಿರುವ ಬೆನ್ನಲ್ಲೇ, ಈ ಬೆಳವಣಿಗೆ ನಡೆದಿದೆ.

ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಖಾರ್ದಾಹಾ ವಿಧಾನಸಭಾ ಕ್ಷೇತ್ರದಲ್ಲಿ ಟಿಎಂಸಿ ಅಭ್ಯರ್ಥಿಯಾಗಿ ಕಾಜಲ್ ಸಿನ್ಹಾ ಕಣಕ್ಕೆ ಇಳಿದಿದ್ದರು. ಅವರು ಸಾರ್ವಜನಿಕವಾಗಿ ಪ್ರಚಾರ ನಡೆಸಿದ್ದರು. ಅವರಿಗೆ ಕೋವಿಡ್ ಇರುವುದು ಏಪ್ರಿಲ್ 21ರಂದು ದೃಢಪಟ್ಟಿತ್ತು. ಏಪ್ರಿಲ್ 25ರಂದು ಅವರು ಕೋವಿಡ್‌ನಿಂದ ಮೃತಪಟ್ಟಿದ್ದರು. ಈಗ ಅವರ ಪತ್ನಿ ನಂದಿತಾ ಸಿನ್ಹಾ, ಖಾರ್ದಾಹಾ ಪೊಲೀಸ್ ಠಾಣೆಯಲ್ಲಿ ಚುನಾವಣಾ ಆಯೋಗದ ವಿರುದ್ಧ ದೂರು ನೀಡಿದ್ದಾರೆ.

'ಕೋವಿಡ್ ತೀವ್ರವಾಗಿ ಹರಡುತ್ತಿದ್ದರೂ ಎಂಟು ಹಂತಗಳಲ್ಲಿ ಮತದಾನ ನಡೆಸುವ ನಿರ್ಧಾರವನ್ನು ಚುನಾವಣಾ ಆಯೋಗ ಹಿಂಪಡೆಯಲಿಲ್ಲ. ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಕಾರಣ, ಅನಿವಾರ್ಯವಾಗಿ ಪ್ರಚಾರ ನಡೆಸಿ ನನ್ನ ಪತಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ರಾಜ್ಯ ಪೊಲೀಸ್, ಕೇಂದ್ರದ ಅರೆಸೇನಾಪಡೆಗಳನ್ನು ಚುನಾವಣಾ ಆಯೋಗವು ತನ್ನ ಸುಪರ್ದಿಗೆ ತೆಗೆದುಕೊಂಡಿತ್ತು. ಹೀಗಿದ್ದೂ, ಪ್ರಚಾರ ಮತ್ತು ಮತದಾನದ ವೇಳೆ ಕೋವಿಡ್ ಮಾರ್ಗಸೂಚಿ ಪಾಲನೆಯಾಗುವಂತೆ ನೋಡಿಕೊಳ್ಳುವಲ್ಲಿ ಚುನಾವಣಾ ಆಯೋಗ ವಿಫಲವಾಗಿದೆ. ಆಯೋಗದ ವಿರುದ್ಧ ನಿರ್ಲಕ್ಷ್ಯ, ಉದ್ದೇಶಪೂರ್ವಕವಲ್ಲದ ಹತ್ಯೆ ಪ್ರಕರಣಗಳನ್ನು ದಾಖಲಿಸಿ' ಎಂದು ಅವರು ದೂರಿದ್ದಾರೆ.

ಎಣಿಕೆ ಕೇಂದ್ರ ಪ್ರವೇಶಕ್ಕೆ 'ಕೋವಿಡ್ ಇಲ್ಲ' ಪ್ರಮಾಣಪತ್ರ ಕಡ್ಡಾಯ

ನವದೆಹಲಿ (ಪಿಟಿಐ): ಮತ ಎಣಿಕೆ ಕೇಂದ್ರಗಳಿಗೆ ಹೋಗುವ ಅಭ್ಯರ್ಥಿ ಅಥವಾ ಅವರ ಏಜೆಂಟರು ಕೋವಿಡ್ ಇಲ್ಲ ಎಂಬ ಪ್ರಮಾಣಪತ್ರ ಹೊಂದಿರುವುದು ಕಡ್ಡಾಯ ಎಂದು ಚುನಾವಣಾ ಆಯೋಗವು ಮತ ಎಣಿಕೆಗೆ ಸಂಬಂಧಿಸಿ ಪ್ರಕಟಿಸಿದ ಮಾರ್ಗಸೂಚಿಯಲ್ಲಿ ಹೇಳಿದೆ.

ಕೋವಿಡ್–19 ತಡೆ ಲಸಿಕೆಯ ಎರಡೂ ಡೋಸ್ ಪಡೆದುಕೊಂಡ ಅಭ್ಯರ್ಥಿ ಅಥವಾ ಏಜೆಂಟರು ಮತ ಎಣಿಕೆ ಕೇಂದ್ರಕ್ಕೆ ಹೋಗಬಹುದು. ಅಸ್ಸಾಂ, ಪಶ್ಚಿಮ ಬಂಗಾಳ, ಕೇರಳ, ಪುದುಚೇರಿ, ತಮಿಳುನಾಡು ವಿಧಾನಸಭೆಯ ಮತಗಳ ಎಣಿಕೆಯು ಮೇ 2ರಂದು ನಡೆಯಲಿದೆ. ಕರ್ನಾಟಕ ಸೇರಿ ವಿವಿಧ ರಾಜ್ಯಗಳಲ್ಲಿ ತೆರವಾಗಿದ್ದ ಲೋಕಸಭೆ ಮತ್ತು ವಿಧಾನಸಭೆ ಕ್ಷೇತ್ರಗಳ ಉಪ ಚುನಾವಣೆಯ ಮತ ಎಣಿಕೆಯೂ ಅಂದೇ ನಡೆಯಲಿದೆ.

ನಿಧನ ವಾರ್ತೆ

ಕಾಂಗ್ರೆಸ್‌ನ ಹಿರಿಯ ನಾಯಕ ಏಕನಾಥ್ ಗಾಯಕ್‌ವಾಡ್



ಮುಂಬೈ: 'ಮಹಾರಾಷ್ಟ್ರದ ಮಾಜಿ ಸಚಿವ ಮತ್ತು ಕಾಂಗ್ರೆಸ್ ನಾಯಕ ಏಕನಾಥ್ ಗಾಯಕ್‌ವಾಡ್ (81) ಅವರು ಕೋವಿಡ್‌ನಿಂದಾಗಿ ಬುಧವಾರ ಮುಂಬೈನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು' ಎಂದು ಮೂಲಗಳು ತಿಳಿಸಿವೆ.

ಮಹಾರಾಷ್ಟ್ರದ ಶಾಲಾ ಶಿಕ್ಷಣ ಸಚಿವೆ ವರ್ಷಾ ಗಾಯಕ್‌ವಾಡ್ ಅವರು ಏಕನಾಥ್ ಅವರ ಪುತ್ರಿ.

'ಏಕನಾಥ್ ಅವರು ನನಗೆ ಮಾರ್ಗದರ್ಶಕ ಮತ್ತು ತಂದೆಯಿದ್ದಂತೆ. ಅವರ ನಿಧನದಿಂದ ಬಹಳ ಬೇಸರವಾಗಿದೆ. ಏಕನಾಥ್ ಅವರ ನಿಧನವು ಕಾಂಗ್ರೆಸ್ ಪಕ್ಷಕ್ಕೆ ತುಂಬಲಾಗದ ನಷ್ಟ' ಎಂದು ಮಹಾರಾಷ್ಟ್ರದ ಕಾಂಗ್ರೆಸ್ ವಕ್ತಾರ ಸಚಿನ್ ಸಾವಂತ್ ಸಂತಾಪ ಸೂಚಿಸಿದರು.

ಏಕನಾಥ್ ಗಾಯಕ್‌ವಾಡ್ ಅವರು ಮುಂಬೈನ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಲೇಖಕ ಮನೋಜ್ ದಾಸ್ ನಿಧನ

ಪುದುಚೇರಿ (ಪಿಟಿಐ): ಹೆಸರಾಂತ ದ್ವಿಭಾಷಾ ಲೇಖಕ ಮತ್ತು ಅಂಕಣಕಾರ ಮನೋಜ್ ದಾಸ್ (87) ಅವರು ವಯೋಸಹಜ ಕಾಯಿಲೆಗಳಿಂದ ಮಂಗಳವಾರ ಮೃತಪಟ್ಟರು ಎಂದು ಅರಬಿಂದೊ ಆಶ್ರಮದ ಮೂಲಗಳು ತಿಳಿಸಿವೆ.

ಮನೋಜ್ ದಾಸ್ ಅವರು ಶಿಕ್ಷಣ ಮತ್ತು ತತ್ವಶಾಸ್ತ್ರಕ್ಕೆ ನೀಡಿದ ಕೊಡುಗೆಗಳನ್ನು ಗುರುತಿಸಿ 2001ರಲ್ಲಿ ಪದ್ಮಶ್ರೀ ಹಾಗೂ 2020ರಲ್ಲಿ ಪದ್ಮಭೂಷಣ ಪುರಸ್ಕಾರ ನೀಡಿ ಗೌರವಿಸಲಾಗಿತ್ತು. ಒರಿಯಾ ಮತ್ತು ಇಂಗ್ಲಿಷ್ ಸಾಹಿತ್ಯಕ್ಕೆ ಕೊಡುಗೆ ನೀಡಿರುವ ಮನೋಜ್ ದಾಸ್ ಅವರು ಅರಬಿಂದೊ ಆಶ್ರಮ ನಡೆಸುತ್ತಿರುವ ಅಂತರರಾಷ್ಟ್ರೀಯ ಶಿಕ್ಷಣ ಕೇಂದ್ರದಲ್ಲಿ 1963ರಿಂದ ತತ್ವಶಾಸ್ತ್ರ ಬೋಧಿಸುತ್ತಿದ್ದರು.

ಪಾಯಿಂಟ್ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೆ ಧೋನಿ ಬಳಗ: ಪಾಂಡೆ, ವಾರ್ನರ್ ಅರ್ಧಶತಕ ವ್ಯರ್ಥ

ಋತುರಾಜ್ ಆಟ; ಚೆನ್ನೈ ಜಯದ ಓಟ

ನವದೆಹಲಿ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್‌ನ ಯುವ ಬ್ಯಾಟ್ಸ್‌ಮನ್ ಋತುರಾಜ್ ಗಾಯಕವಾಡ್ ಮತ್ತು ಫಫ್ ಡುಪ್ಲೆಸಿ ಜೊತೆಯಾಟದ ಅಬ್ಬರಕ್ಕೆ ಸನ್‌ರೈಸರ್ ಹೈದರಾಬಾದ್ ತಂಡದ ಗೆಲುವಿನ ಆಸೆ ಕಮರಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ತಂಡವು 7 ವಿಕೆಟ್‌ಗಳಿಂದ ಜಯಿಸಿತು. ಟೂರ್ನಿಯಲ್ಲಿ ಐದನೇ ಜಯ ಸಾಧಿಸುವುದರೊಂದಿಗೆ 10 ಅಂಕ ಗಳಿಸಿತು ಮತ್ತು ಪಾಯಿಂಟ್ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿತು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಎರಡನೇ ಸ್ಥಾನಕ್ಕಿಳಿಯಿತು.

ಸನ್‌ರೈಸರ್ಸ್ ತಂಡದ ನಾಯಕ ಡೇವಿಡ್ ವಾರ್ನರ್ ಮತ್ತು ಮನೀಷ್ ಪಾಂಡೆ ಅವರ ಅರ್ಧಶತಕಗಳು ವ್ಯರ್ಥವಾದವು. ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಹೈದರಾಬಾದ್ ತಂಡವು ವಾರ್ನರ್ ಮತ್ತು ಪಾಂಡೆಯ ಶತಕದ ಜೊತೆಯಾಟದ ಬಲದಿಂದ ಹೈದರಾಬಾದ್ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 171 ರನ್ ಗಳಿಸಿತು. ಅದಕ್ಕುತ್ತರವಾಗಿ ಚೆನ್ನೈ ತಂಡವು ಇನಿಂಗ್ಸ್‌ನಲ್ಲಿ ಇನ್ನೂ ಒಂಬತ್ತು ಎಸೆತಗಳು ಬಾಕಿಯಿರುವಾಗಲೇ 3 ವಿಕೆಟ್‌ಗಳಿಗೆ 173 ರನ್ ಗಳಿಸಿ ಜಯಭೇರಿ ಬಾರಿಸಿತು.

ಚೆನ್ನೈನ ಬೌಲರ್‌ಗಳು ಹೆಚ್ಚು ಪರಿಣಾಮಕಾರಿಯಾಗಲಿಲ್ಲ. ಆದರೆ ಬ್ಯಾಟ್ಸ್‌ಮನ್‌ಗಳು ವಿಶ್ವಾಸ ಉಳಿಸಿಕೊಂಡರು. ಆರಂಭಿಕ ಜೋಡಿ ಋತುರಾಜ್ (75; 44ಎ) ಮತ್ತು ಫಫ್ (56; 38ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 129 ರನ್ ಗಳಿಸಿದರು. ಇಬ್ಬರೂ ಸೇರಿ 13 ಓವರ್‌ಗಳನ್ನೂ ಆಡಿದರು. ಸನ್‌ರೈಸರ್ಸ್ ಸ್ಪಿನ್ನರ್ ರಶೀದ್ ಖಾನ್ ಅವರು ಋತುರಾಜ್ ವಿಕೆಟ್ ಪಡೆದು ಜೊತೆಯಾಟ ಮುರಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಫಫ್ ಮತ್ತು ಮೋಯಿನ್ ಅಲಿ ವಿಕೆಟ್‌ಗಳನ್ನೂ ಗಳಿಸಿದರು. ಆದರೆ, ತಂಡವನ್ನು ಜಯದತ್ತ ಕೊಂಡೊಯ್ಯಲು ಅವರಿಗೆ ಸಾಧ್ಯವಾಗಲಿಲ್ಲ. ರವೀಂದ್ರ ಜಡೇಜ ಮತ್ತು ಸುರೇಶ್ ರೈನಾ ತಮ್ಮ ತಂಡವನ್ನು ಗೆಲುವಿನ ದಡ ಸೇರಿಸಿದರು.


ಋತುರಾಜ್ ಗಾಯಕವಾಡ್ ಬ್ಯಾಟಿಂಗ್ ಶೈಲಿ– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್


ಸನ್‌ರೈಸರ್ಸ್ ಹೈದರಾಬಾದ್ 3ಕ್ಕೆ 171 (20 ಓವರ್‌ಗಳಲ್ಲಿ)
ವಾರ್ನರ್ ಸಿ ಜಡೇಜ ಬಿ ಗಿಡಿ 57 (55ಎ, 4X3, 6X2)
ಬೆಸ್ಟೊ ಸಿ ಚಾಹರ್ ಬಿ ಸ್ಯಾಮ್ 7 (5ಎ, 4X1)
ಪಾಂಡೆ ಸಿ ಡುಪ್ಲೆಸಿ ಬಿ ಗಿಡಿ 61 (46ಎ, 4X5, 6X1)
ವಿಲಿಯಮ್ಸನ್ ಔಟಾಗದೆ 26 (10ಎ, 4X1, 6X1)
ಕೇದಾರ್ ಔಟಾಗದೆ 12 (4ಎ, 4X1, 6X1)
ಇತರೆ (ಲೆಗ್ ಬೈ 2, ವೈಡ್ 6) 8
ವಿಕೆಟ್ ಪತನ: 1–22 (ಜಾನಿ ಬೆಸ್ಟೊ, 3.2), 2–128 (ಡೇವಿಡ್ ವಾರ್ನರ್, 17.1), 3–134 (ಮನೀಷ್ ಪಾಂಡೆ, 17.5)
ಬೌಲಿಂಗ್: ದೀಪಕ್ ಚಾಹರ್ 3-0-21-0, ಸ್ಯಾಮ್ ಕರನ್ 4-0-30-1, ಶಾರ್ದೂಲ್ ಠಾಕೂರ್ 4-0-44-0, ಮೊಯಿನ್ ಅಲಿ 2-0-16-0, ಲುಂಗಿ ಗಿಡಿ 4-0-35-2, ರವೀಂದ್ರ ಜಡೇಜ 3-0-23-0

ಚೆನ್ನೈ ಸೂಪರ್ ಕಿಂಗ್ಸ್ 3ಕ್ಕೆ 173 (18.3 ಓವರ್‌ಗಳಲ್ಲಿ)
ಋತುರಾಜ್ ಬಿ ರಶೀದ್ 75 (44ಎ, 4X12)
ಡುಪ್ಲೆಸಿ ಎಲ್‌ಬಿಡಬ್ಲ್ಯು ರಶೀದ್ 56 (38ಎ, 4X6, 6X1)
ಮೊಯಿನ್ ಅಲಿ ಸಿ ಕೇದಾರ್ ಬಿ ರಶೀದ್ 15 (8ಎ, 4X3)
ಜಡೇಜ ಔಟಾಗದೆ 7 (6ಎ, 4X1)
ರೈನಾ ಔಟಾಗದೆ 17 (15ಎ, 4X3)
ಇತರೆ (ವೈಡ್ 3) 3
ವಿಕೆಟ್ ಪತನ: 1–129 (ಋತುರಾಜ್ ಗಾಯಕವಾಡ್, 12.6), 2–148 (ಮೊಯಿನ್ ಅಲಿ, 14.5), 3–148 (ಫಫ್ ಡುಪ್ಲೆಸಿ, 14.6).
ಬೌಲಿಂಗ್: ಸಂದೀಪ್ ಶರ್ಮಾ 3.3–0–24–0, ಖಲೀಲ್ ಅಹಮದ್ 4–0–36–0, ಸಿದ್ಧಾರ್ಥ್ ಕೌಲ್ 4–0–32–0, ಜೆ.ಸುಚಿತ್ 3–0–45–0, ರಶೀದ್ ಖಾನ್ 4–0–36–3

ಫಲಿತಾಂಶ: ಚೆನ್ನೈಸೂಪರ್ ಕಿಂಗ್ಸ್‌ಗೆ ಏಳು ವಿಕೆಟ್‌ಗಳ ಜಯ

ಈ ಟೂರ್ನಿಯಲ್ಲಿ ಹೆಚ್ಚು ನಿರಾಸೆ ಅನುಭವಿಸಿರುವ ಸನ್‌ರೈಸರ್ಸ್ ತಂಡದ ನಾಯಕ ವಾರ್ನರ್ ಇಲ್ಲಿ ತಮ್ಮ ಬ್ಯಾಟಿಂಗ್ ಲಯ ಕಂಡುಕೊಳ್ಳುವಲ್ಲಿ ಯಶಸ್ವಿಯಾದರು. ಅವರು ಪಾಂಡೆ ಜೊತೆಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 106 ರನ್‌ಗಳನ್ನು ಸೇರಿಸಿದರು.

35 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ಮನೀಷ್, ತಮ್ಮ ನಾಯಕನಿಗಿಂತಲೂ ವೇಗವಾಗಿ ಆಡಿದರು. ವಾರ್ನರ್ 50 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ವಾರ್ನರ್ ಐಪಿಎಲ್‌ನಲ್ಲಿ ಇನ್ನೂರು ಸಿಕ್ಸರ್‌ಗಳನ್ನು ಹೊಡೆದವರ ಪಟ್ಟಿಗೆ ಸೇರಿಕೊಂಡರು.


ಮನೀಷ್ ಪಾಂಡೆ–ಪಿಟಿಐ ಚಿತ್ರ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಬೆಂಗಳೂರು	17
ಆವೇಶ್ ಖಾನ್	ಡೆಲ್ಲಿ	12
ರಶೀದ್ ಖಾನ್	ಹೈದರಾಬಾದ್	9

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಡುಪ್ಲೆಸಿ	ಚೆನ್ನೈ	270
ಶಿಖರ್ ಧವನ್	ಡೆಲ್ಲಿ	265
ಕೆ.ಎಲ್.ರಾಹುಲ್	ಪಂಜಾಬ್	240

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	6	5	1	-	-	10
ಬೆಂಗಳೂರು	6	5	1	-	-	10
ಡೆಲ್ಲಿ ಕ್ಯಾಪಿಟಲ್ಸ್	6	4	2	-	-	8
ಮುಂಬೈ ಇಂಡಿಯನ್ಸ್	5	2	3	-	-	4
ಕೋಲ್ಕತ್ತ	6	2	4	-	-	4
ಪಂಜಾಬ್	6	2	4	-	-	4
ರಾಜಸ್ಥಾನ	5	2	3	-	-	4
ಹೈದರಾಬಾದ್	6	1	5	-	-	2

* ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಸಂಕ್ಷಿಪ್ತ ಸುದ್ದಿ

ಮಹಿಳಾ ಟಿ20 ಚಾಲೆಂಜ್ ರದ್ದು ಸಾಧ್ಯತೆ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಅಂಗವಾಗಿ ನಡೆಯುವ ಮಹಿಳಾ ಟಿ20 ಚಾಲೆಂಜ್ ಈ ವರ್ಷ ನಡೆಯುವ ಸಾಧ್ಯತೆಗಳಿಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮೂಲಗಳು ತಿಳಿಸಿವೆ.

ಸೂಪರ್‌ನೋವಾ, ವೆಲೋಸಿಟಿ ಮತ್ತು ಟ್ರೇಲ್‌ಬ್ಲೇಜರ್ಸ್ ತಂಡಗಳನ್ನು ಒಳಗೊಂಡ ಮಹಿಳಾ ಚಾಲೆಂಜ್ ಹಿಂದಿನ ಆವೃತ್ತಿಗಳಲ್ಲಿ ನಡೆದಿತ್ತು. ಈ ಬಾರಿ ಕೋವಿಡ್–19ರಿಂದಾಗಿ ಪರಿಸ್ಥಿತಿ ಪೂರಕವಾಗಿಲ್ಲ. ವಿವಿಧ ಸರಣಿಗಳಿಗಾಗಿ ಮಹಿಳಾ ಕ್ರಿಕೆಟಿಗರ ಶಿಬಿರವೊಂದನ್ನು ಬಿಸಿಸಿಐ ಸದ್ಯದಲ್ಲೇ ಏರ್ಪಡಿಸಲಿದೆ. ಹೀಗಾಗಿ ಭಾರತದ ಆಟಗಾರ್ತಿಯರು ಲಭ್ಯವಾಗುತ್ತಾರೆ. ಆದರೆ ಆಸ್ಟ್ರೇಲಿಯಾ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ಆಟಗಾರ್ತಿಯರಿಗೆ ಪಾಲ್ಗೊಳ್ಳಲು ಆಗುವುದಿಲ್ಲ.

ಐಒಎ ಉಪಾಧ್ಯಕ್ಷ ಗೆಹ್ಲೋಟ್ ನಿಧನ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ಸ್ ಸಂಸ್ಥೆಯ (ಐಒಎ) ಉಪಾಧ್ಯಕ್ಷ ಜನಾರ್ದನ ಸಿಂಗ್ ಗೆಹ್ಲೋಟ್ (70) ಬುಧವಾರ ಜೈಪುರದಲ್ಲಿ ನಿಧನರಾದರು. ದೀರ್ಘಕಾಲದಿಂದ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು.

ರಾಜಸ್ಥಾನದ ಮಾಜಿ ಸಚಿವರೂ ಆಗಿದ್ದ ಗೆಹ್ಲೋಟ್, ಅಂತರರಾಷ್ಟ್ರೀಯ ಕಬಡ್ಡಿ ಫೆಡರೇಷನ್‌ನ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಭಾರತ ಅಮೆಚೂರ್ ಕಬಡ್ಡಿ ಫೆಡರೇಷನ್‌ಗೆ 28 ವರ್ಷಗಳ ಕಾಲ (2013ರವರೆಗೆ) ಅವರು ಮುಖ್ಯಸ್ಥರಾಗಿದ್ದರು. ಸದ್ಯ ರಾಜಸ್ಥಾನ ಒಲಿಂಪಿಕ್ಸ್ ಸಮಿತಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು.

2017ರಲ್ಲಿ ಐಒಎ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರು.


ರಿಷಭ್ ನಾಯಕತ್ವಕ್ಕೆ ಮಾರ್ಗನ್ ಸವಾಲು

ಅಹಮದಾಬಾದ್ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎದುರು ಸೋತ ನಂತರ ಟೀಕೆಗೊಳಗಾಗಿರುವ ರಿಷಭ್ ಪಂತ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ಪುಟಿದೇಳುವ ಛಲದಲ್ಲಿದೆ.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಗುರುವಾರ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಎದುರು ಡೆಲ್ಲಿ ಆಡಲಿದೆ. ಆಡಿರುವ ಆರು ಪಂದ್ಯಗಳಲ್ಲಿ ಎರಡರಲ್ಲಿ ಮಾತ್ರ ಸೋತಿರುವ ಡೆಲ್ಲಿ ತಂಡವು ಏಯಾನ್ ಮಾರ್ಗನ್ ಬಳಗಕ್ಕೆ ಕಠಿಣ ಸವಾಲೊಡ್ಡುವುದು ಖಚಿತ. ಕೋಲ್ಕತ್ತ ತಂಡವು ಇದುವರೆಗೆ ಎರಡು ಪಂದ್ಯಗಳಲ್ಲಿ ಮಾತ್ರ ಜಯಿಸಿದೆ. ನಾಲ್ಕರಲ್ಲಿ ಸೋತಿದೆ.

ಮಂಗಳವಾರ ಆರ್‌ಸಿಬಿ ಎದುರು ಶಿಮ್ರೊನ್ ಹೆಟ್ಮೆಯರ್ ಮಿಂಚಿನ ಅರ್ಧಶತಕ ಮತ್ತು ರಿಷಭ್ ಪಂತ್ ತಾಳ್ಮೆಯ ಬ್ಯಾಟಿಂಗ್ ಹೊರತಾಗಿಯೂ ಡೆಲ್ಲಿ ಕೇವಲ ಒಂದು ರನ್ ಅಂತರದಿಂದ ಸೋತಿತ್ತು. ಬೌಲಿಂಗ್‌ನಲ್ಲಿ ಆರಂಭದಲ್ಲಿಯೇ ಹಿಡಿತ ಸಾಧಿಸಿದ್ದರೂ, ಎಬಿ ಡಿವಿಲಿಯರ್ಸ್ ಅವರನ್ನು ಕೊನೆಯ ಹಂತದ ಓವರ್‌ಗಳಲ್ಲಿ ಕಟ್ಟಿಹಾಕಲು ಬೌಲರ್‌ಗಳಿಗೆ ಸಾಧ್ಯವಾಗಿರಲಿಲ್ಲ.


ಹೆಟ್ಮೆಯರ್


ಪ್ಯಾಟ್ ಕಮಿನ್ಸ್

ಬೌಲರ್‌ಗಳ ನಿಯೋಜನೆಯಲ್ಲಿ ಪಂತ್ ಎಡವಿದ್ದಾರೆಂಬ ಟೀಕೆಗಳು ಕೇಳಿಬಂದಿವೆ. ಡೆಲ್ಲಿ ತಂಡವು ಬಲಿಷ್ಠವಾಗಿಯೇ ಇದೆ. ಪೃಥ್ವಿ ಶಾ, ಶಿಖರ್ ಧವನ್, ಸ್ಟೀವ್ ಸ್ಮಿತ್ ಉತ್ತಮವಾಗಿ ಬ್ಯಾಟಿಂಗ್ ಮಾಡ ಬಲ್ಲರು. ಅಮಿತ್ ಮಿಶ್ರಾ, ಇಶಾಂತ್ ಶರ್ಮಾ, ಆವೇಶ್ ಖಾನ್ ದೊಡ್ಡ ಜೊತೆಯಾಟಗಳಿಗೆ ತಡೆಯೊಡ್ಡಬಲ್ಲರು.

ಈ ಸವಾಲನ್ನು ಮೀರಲು ಕೋಲ್ಕತ್ತದ ಆಟಗಾರರು ಸ್ಥಿರ ಪ್ರದರ್ಶನ ತೋರಬೇಕಿದೆ. ನಿತೀಶ್ ರಾಣಾ, ರಾಹುಲ್ ತ್ರಿಪಾಠಿ, ಶುಭಮನ್ ಗಿಲ್, ಆ್ಯಂಡ್ರೆ ರಸೆಲ್ ಶುಭಮನ್ ಗಿಲ್, ಪ್ಯಾಟ್ ಕಮಿನ್ಸ್, ಸುನಿಲ್ ನಾರಾಯಣ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದರೆ ಡೆಲ್ಲಿಗೆ ಸವಾಲೊಡ್ಡಬಹುದು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಪುಟಿದೇಳುವ ನಿರೀಕ್ಷೆಯಲ್ಲಿ ಮುಂಬೈ

ಸ್ಯಾಮ್ಸನ್–ರೋಹಿತ್ ಶರ್ಮಾ ಮುಖಾಮುಖಿ ಇಂದು

ನವದೆಹಲಿ (ಪಿಟಿಐ): ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮತ್ತು ರಾಜಸ್ಥಾನ ರಾಯಲ್ಸ್ ತಂಡಗಳ ಪರಿಸ್ಥಿತಿ ಒಂದೇ ರೀತಿ ಇದೆ.

ಈ ಸಲದ ಐಪಿಎಲ್ ಪಾಯಿಂಟ್ ಪಟ್ಟಿಯಲ್ಲಿ ತಲಾ ನಾಲ್ಕು ಅಂಕಗಳಿಸಿರುವ ಎರಡೂ ತಂಡಗಳು ಗುರುವಾರ ಅರುಣ್ ಜೇಟ್ಲಿ ಮೈದಾನದಲ್ಲಿ ಮುಖಾಮುಖಿಯಾಗಲಿವೆ. ಉಭಯ ತಂಡಗಳು ಆಡಿರುವ ತಲಾ ಐದು ಪಂದ್ಯಗಳಲ್ಲಿ ಎರಡರಲ್ಲಿ ಗೆದ್ದು, ಮೂರರಲ್ಲಿ ಸೋತಿವೆ.

ರೋಹಿತ್ ಶರ್ಮಾ ನಾಯಕತ್ವದ ಮುಂಬೈ ತಂಡವು ತನ್ನ ಕಳೆದೆರಡೂ ಪಂದ್ಯಗಳಲ್ಲಿ ಪಂಜಾಬ್ ಕಿಂಗ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳ ಎದುರು ಸೋತಿತ್ತು. ರೋಹಿತ್ ಇದುವರೆಗೆ 201 ರನ್ ಗಳಿಸಿದ್ದಾರೆ. ಅವರೊಂದಿಗೆ ಇನಿಂಗ್ಸ್ ಆರಂಭಿಸುತ್ತಿರುವ ಕ್ವಿಂಟನ್ ಡಿಕಾಕ್ ಆರಂಭಿಕ ಜೊತೆಯಾಟ ಕಟ್ಟುವಲ್ಲಿ ವಿಫಲರಾಗಿದ್ದಾರೆ.

ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್, ಪಾಂಡ್ಯ ಸಹೋದರರು ಮತ್ತು ಕೀರನ್ ಪೊಲಾರ್ಡ್ ತಮ್ಮ ನೈಜ ಸಾಮರ್ಥ್ಯಕ್ಕೆ ತಕ್ಕಂತೆ ಆಡದೇ ಇರುವುದು ತಂಡದ ಹಿನ್ನಡೆಗೆ ಕಾರಣವಾಗಿದೆ.


ಜಸ್‌ಪ್ರೀತ್ ಬೂಮ್ರಾ, ಟ್ರೆಂಟ್ ಬೌಲ್ಟ್ ಮತ್ತು ಸ್ಪಿನ್ನರ್ ರಾಹುಲ್ ಚಾಹರ್ (9 ವಿಕೆಟ್) ಅವರು ಉತ್ತಮವಾಗಿ ಬೌಲಿಂಗ್ ಮಾಡುತ್ತಿದ್ದಾರೆ. ಪೊಲಾರ್ಡ್ ಐದು ಅಥವಾ ಆರನೇ ಬೌಲರ್ ಆಗಿ ಆಡುತ್ತಿದ್ದಾರೆ. ಈ ಪಂದ್ಯದಲ್ಲಿ ಜಯಂತ್ ಯಾದವ್ ಬದಲಿಗೆ ಆ್ಯಡಂ ಮಿಲ್ನೆ ಸ್ಥಾನ ಪಡೆಯುವ ಸಾಧ್ಯತೆ ಇದೆ.

ರಾಜಸ್ಥಾನ ತಂಡವು ತನ್ನ ಕಳೆದ ಪಂದ್ಯದಲ್ಲಿ ಜಯಿಸಿತ್ತು. ಅದೇ ಲಯವನ್ನು ಮುಂದುವರಿಸುವ ವಿಶ್ವಾಸದಲ್ಲಿದೆ. ಆದರೆ, ಜೋಫ್ರಾ ಆರ್ಚರ್, ಬೆನ್ ಸ್ಟೋಕ್ಸ್, ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಆ್ಯಂಡ್ರ್ಯೂ ಟೈ ಗೈರು ಹಾಜರಿ ತಂಡವನ್ನು ಕಾಡುತ್ತಿದೆ. ಬ್ಯಾಟಿಂಗ್‌ನಲ್ಲಿಯೂ ಕೆಲವು ಸಮಸ್ಯೆಗಳಿವೆ.


ಆರಂಭಿಕ ಜೋಡಿ ಮನನ್ ವೊಹ್ರಾ ಮತ್ತು ಯಶಸ್ವಿ ಜೈಸ್ವಾಲ್ ಇನ್ನೂ ಲಯ ಕಂಡುಕೊಂಡಿಲ್ಲ. ಜೋಸ್ ಬಟ್ಲರ್ ದೊಡ್ಡ ಮೊತ್ತ ಗಳಿಸುವಲ್ಲಿ ಹಿನ್ನಡೆ ಅನುಭವಿಸಿದ್ದಾರೆ. ಆಲ್‌ರೌಂಡರ್ ಕ್ರಿಸ್ ಮೊರಿಸ್ (9 ವಿಕೆಟ್ ಮತ್ತು 48 ರನ್) ಅವರ ಮೇಲೆ ತಂಡ ಭರವಸೆ ಇಡಬಹುದು. ನಾಯಕ ಸಂಜು ಸ್ಯಾಮ್ಸನ್ ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಳ್ಳದಿದ್ದರೆ ದೊಡ್ಡ ಮೊತ್ತ ಗಳಿಸುವುದು ಸವಾಲಿನ ಕೆಲಸವಾಗಲಿದೆ.

ಯುವ ಎಡಗೈ ಮಧ್ಯಮವೇಗಿ ಚೇತನ್ ಸಕಾರಿಯಾ (7 ವಿಕೆಟ್) ಮತ್ತು ಅನುಭವಿ ಜಯದೇವ್ ಉನದ್ಕತ್ ಹಾಗೂ ಮುಸ್ತಫಿಜುರ್ ರೆಹಮಾನ್ ಬೌಲಿಂಗ್ ವಿಭಾಗವನ್ನು ಚೆನ್ನಾಗಿ ನಿರ್ವಹಿಸುತ್ತಿದ್ದಾರೆ. ಕೆಳಕ್ರಮಾಂಕದಲ್ಲಿ ರಾಹುಲ್ ತೆವಾಟಿಯಾ ಮತ್ತು ರಿಯಾನ್ ಪರಾಗ್ ಭರವಸೆಯ ಆಟಗಾರರಾಗಿದ್ದಾರೆ.

ಬಲಾಬಲ



ಮುಖಾಮುಖಿ



ಆರಂಭ: ಸಂಜೆ 3.30
ಸ್ಥಳ: ಅರುಣ್ ಜೇಟ್ಲಿ ಕ್ರೀಡಾಂಗಣ, ದೆಹಲಿ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಡಬ್ಲ್ಯುಟಿಸಿ: ಭಾರತ ತಂಡದ ಜೊತೆ ಕಿವೀಸ್ ಆಟಗಾರರ ಪಯಣ

ಆಕ್ಲೆಂಡ್, ನ್ಯೂಜಿಲೆಂಡ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿರುವ ನ್ಯೂಜಿಲೆಂಡ್‌ನ ಆಟಗಾರರು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್‌ಗೆ ಭಾರತದ ಆಟಗಾರರ ಜೊತೆಯಲ್ಲೇ ಪಯಣಿಸಲಿದ್ದಾರೆ ಎಂದು ನ್ಯೂಜಿಲೆಂಡ್ ಆಟಗಾರರ ಸಂಘಟನೆ ತಿಳಿಸಿದೆ.

ಇಂಗ್ಲೆಂಡ್‌ನ ಸೌತಾಂಪ್ಟನ್‌ನಲ್ಲಿ ಜೂನ್ 18ರಂದು ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಆರಂಭವಾಗಲಿದೆ. ಕಠಿಣ ಕ್ವಾರಂಟೈನ್ ನಿಯಮಗಳು ಜಾರಿಯಲ್ಲಿರುವುದರಿಂದ ತವರಿಗೆ ಮರಳಿ ನಂತರ ಇಂಗ್ಲೆಂಡ್‌ಗೆ ತೆರಳುವುದು ಆಟಗಾರರಿಗೆ ಕಷ್ಟಕರವಾಗಲಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಂಘಟನೆ ವಿವರಿಸಿದೆ.

ವಿಮಾನ ರದ್ದು: ಭಾರತ ರಿಲೆ ತಂಡಕ್ಕೆ ನಿರಾಸೆ

ನವದೆಹಲಿ (ಪಿಟಿಐ): ವಿಮಾನಯಾನ ಸೌಲಭ್ಯದ ಕೊರತೆಯಿಂದಾಗಿ ಭಾರತ ಅಥ್ಲೀಟ್‌ಗಳ ತಂಡದ ಪೋಲೆಂಡ್ ಪ್ರವಾಸ ರದ್ದುಗೊಂಡಿದೆ. ಹಿಮಾ ದಾಸ್ ಮತ್ತು ದ್ಯುತಿ ಚಾಂದ್ ಅವರನ್ನು ಒಳಗೊಂಡ ತಂಡ ಮುಂದಿನ ತಿಂಗಳಲ್ಲಿ ನಡೆಯಲಿರುವ ಒಲಿಂಪಿಕ್ಸ್ ಅರ್ಹತೆಗಾಗಿರುವ ವಿಶ್ವ ರಿಲೆಯಲ್ಲಿ ಪಾಲ್ಗೊಳ್ಳಬೇಕಾಗಿತ್ತು. ಆದರೆ ಕೋವಿಡ್‌ನಿಂದಾಗಿ ವಿಮಾನ ರದ್ದುಗೊಂಡ ಕಾರಣ ತಂಡದ ಆಸೆಗೆ ತಣ್ಣೀರು ಬಿದ್ದಿದೆ.

ಮೇ ಒಂದು ಮತ್ತು ಎರಡರಂದು ನಡೆಯಲಿರುವ ರಿಲೆಗೆ ಮಹಿಳೆಯರ 4x100 ಮೀಟರ್ಸ್ ಮತ್ತು ಪುರುಷರ 4x400 ಮೀ. ತಂಡ ಗುರುವಾರ ಆಮ್‌ಸ್ಟರ್‌ಡ್ಯಾಂಗೆ ತೆರಳುವ ವಿಮಾನವೇರಬೇಕಾಗಿತ್ತು. ಆದರೆ ಭಾರತದಿಂದ ತೆರಳುವ ಮತ್ತು ಭಾರತಕ್ಕೆ ಬರುವ ಎಲ್ಲ ವಿಮಾನಗಳನ್ನು ಡಚ್ ಸರ್ಕಾರ ಸೋಮವಾರವೇ ರದ್ದುಗೊಳಿಸಿದ ಕಾರಣ ತೊಂದರೆಯಾಗಿತ್ತು.